ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ



ಏಪ್ರಿಲ್ 9 ಮಂಗಳವಾರ 2024

ಸಂಪುಟ: 44 | ಸಂಚಿಕೆ: 351 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ರಾಜ್ಯದಲ್ಲಿ ಮೊದಲ ಹಂತದ 14 ಲೋಕಸಭಾ ಕ್ಷೇತ್ರಗಳ ಚುನಾವಣಾ ಕಣದಲ್ಲಿ

ಎನ್‌ಡಿಎ Vs ಕಾಂಗ್ರೆಸ್ ಹಣಾಹಣಿ

● ನಾಮಪತ್ರ ಹಿಂತೆಗೆದುಕೊಂಡ ನಂತರ ಸ್ಪರ್ಧಾ ಚಿತ್ರಣ ಸ್ಪಷ್ಟ ● 14ರಲ್ಲಿ ಕಾಂಗ್ರೆಸ್; 11ರಲ್ಲಿ ಬಿಜೆಪಿ, 3ರಲ್ಲಿ ಜೆಡಿಎಸ್ ಸ್ಪರ್ಧೆ ● ಮೈಸೂರು–ಕೊಡಗು, ಮಂಡ್ಯ, ಬೆಂಗಳೂರು ಗ್ರಾಮಾಂತರ ಪ್ರತಿಷ್ಠೆ ಕ್ಷೇತ್ರಗಳು

ಬೆಂಗಳೂರು, ಏ.8(ಕೆಎಂಶಿ)– ರಾಜ್ಯದ 14 ಲೋಕಸಭಾ ಕ್ಷೇತ್ರಗಳಿಗೆ ಮೊದಲ ಹಂತದಲ್ಲಿ ಏ.26ರಂದು ನಡೆಯುತ್ತಿರುವ ಚುನಾವಣೆಗೆ ಕಾಂಗ್ರೆಸ್ ಹಾಗೂ ಬಿಜೆಪಿ–ಜೆಡಿಎಸ್ ಅಭ್ಯರ್ಥಿಗಳ ಎನ್‌ಡಿಎ ಮೈತ್ರಿ ಕೂಟದ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಮೈಸೂರು–ಕೊಡಗು, ಚಾಮರಾಜನಗರ, ಮಂಡ್ಯ, ಹಾಸನ, ಉಡುಪಿ–ಚಿಕ್ಕಮಗಳೂರು, ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಹಾಗೂ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರಗಳಿಗೆ ನಾಮಪತ್ರ ಹಿಂತೆಗೆದುಕೊಳ್ಳಲು ಕಡೆಯ ದಿನವಾದ ಇಂದು ಮೂರೂ ಪ್ರಮುಖ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ.

ಮೊದಲ ಹಂತದಲ್ಲಿ ಚುನಾವಣೆ ನಡೆಯಲಿರುವ ಕ್ಷೇತ್ರಗಳಲ್ಲಿ ಪ್ರಮುಖ ಮೂರು ರಾಜಕೀಯ ಪಕ್ಷಗಳ ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದ ಅಭ್ಯರ್ಥಿಗಳು ಪ್ರಬಲ ಪೈಪೋಟಿ ನೀಡುವ ಸ್ಥಿತಿಯಲ್ಲಿಲ್ಲ.

ಕಾಂಗ್ರೆಸ್ 14 ಕ್ಷೇತ್ರಗಳಲ್ಲಿ ತನ್ನ ಉಮೇದುವಾರರನ್ನು ನಿಲ್ಲಿಸಿದ್ದರೆ, ಎನ್‌ಡಿಎ ಮೈತ್ರಿಕೂಟದ ಬಿಜೆಪಿ 11 ಕ್ಷೇತ್ರಗಳಲ್ಲಿ ಸ್ಪರ್ಧಿಸಿ, ಮೂರು ಕ್ಷೇತ್ರಗಳನ್ನು ಮಿತ್ರ ಪಕ್ಷ ಜೆಡಿಎಸ್‌ಗೆ ಬಿಟ್ಟುಕೊಟ್ಟಿದೆ. ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳ ವಿರುದ್ಧ ಕಾಂಗ್ರೆಸ್ ನೇರ ಹಣಾಹಣಿ ನಡೆಸಲಿದೆ. ಈಗಾಗಲೇ ಮೂರೂ ರಾಜಕೀಯ ಪಕ್ಷಗಳ ಅಭ್ಯರ್ಥಿಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಬಿರುಸಿನ ಪ್ರಚಾರ




ಕೈಗೊಂಡಿದ್ದಾರೆ. ಇವರುಗಳಿಗೆ ಬೆನ್ನೆಲುಬಾಗಿ ಪಕ್ಷದ ಮುಖಂಡರು ತಮ್ಮ ಅಭ್ಯರ್ಥಿಗಳ ಪರ ರೋಡ್ ಶೋ ಮತ್ತು ಸಭೆಗಳನ್ನು ನಡೆಸಿ ಮತದಾರರನ್ನು ಓಲೈಸುವ ಕೆಲಸ ಮಾಡುತ್ತಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ಮಾತ್ರ ಬೆಂಗಳೂರು ಗ್ರಾಮಾಂತರದಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿ ಡಾ.ಮಂಜುನಾಥ್ ಪರ ಬೃಹತ್ ರೋಡ್ ಶೋ ನಡೆಸಿದ್ದನ್ನು ಹೊರತುಪಡಿಸಿದರೆ, ಉಳಿದ ಯಾವುದೇ ರಾಷ್ಟ್ರೀಯ ನಾಯಕರು ರಾಜ್ಯದಲ್ಲಿ ಇನ್ನೂ ಚುನಾವಣಾ ಪ್ರಚಾರ ಕೈಗೊಂಡಿಲ್ಲ.

ಮೈಸೂರು–ಕೊಡಗು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ರಾಜವಂಶದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ, ಬೆಂಗಳೂರು ಗ್ರಾಮಾಂತರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಹಾಗೂ ಸಂಸದ ಡಿ.ಕೆ.ಸುರೇಶ್ ಅವರ ವಿರುದ್ಧ ಬಿಜೆಪಿಯಿಂದ ಡಾ.ಮಂಜುನಾಥ್ ಕಣಕ್ಕಿಳಿದಿರುವುದರಿಂದ ಇವುಗಳು ಮೊದಲ ಹಂತದ ಚುನಾವಣೆಯ ಪ್ರತಿಷ್ಠೆಯ ಕ್ಷೇತ್ರಗಳಾಗಿವೆ. ಚಾಮರಾಜನಗರ, ಕೋಲಾರ ಹಾಗೂ ಚಿತ್ರದುರ್ಗ ಮೀಸಲು ಕ್ಷೇತ್ರಗಳಾಗಿದ್ದು, ಉಳಿದ 11 ಸಾಮಾನ್ಯ ಕ್ಷೇತ್ರಗಳಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಅವರ ಸಂಪುಟದಲ್ಲಿರುವ ಪ್ರಭಾವಿ ಮಂತ್ರಿಗಳು ಪ್ರತಿನಿಧಿಸುವ ವಿಧಾನಸಭಾ ಕ್ಷೇತ್ರಗಳು ಈ ಲೋಕಸಭಾ ಕ್ಷೇತ್ರಗಳ ವ್ಯಾಪ್ತಿಗೆ ಒಳಪಟ್ಟಿವೆ. ಸಿದ್ದರಾಮಯ್ಯ ಅವರಿಗೆ ತಮ್ಮ ವರುಣ ಕ್ಷೇತ್ರ ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ● 10ನೇ ಪುಟಕ್ಕೆ

ಯುಗಾದಿಯಿಂದ ಯುಗಾದಿಗೆ ವರ್ಷ ಭವಿಷ್ಯ ■ ಪುಟ–9

ಶುಭಾಶಯಗಳು



ನಾಡಿನ ಸಮಸ್ತರಿಗೂ ಯುಗಾದಿ ಹಬ್ಬದ ಶುಭಾಶಯಗಳು

ಬಿಡುವು

ಯುಗಾದಿ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 10.4.2024ರ ಬುಧವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ.

–ವ್ಯವಸ್ಥಾಪಕರು

ಲೋಕ ಸಮರ ಕಣ ಮುಕ್ತ

● ಮೈಸೂರು–ಕೊಡಗು ಕ್ಷೇತ್ರದಲ್ಲಿ ಎನ್‌ಡಿಎನ ಯದುವೀರ್ Vs ಕಾಂಗ್ರೆಸ್‌ನ ಎಂ.ಲಕ್ಷ್ಮಣ ಸೇರಿ 18 ಮಂದಿ ಸೆಣಸಾಟ ● ಮಂಡ್ಯ ಕ್ಷೇತ್ರದಲ್ಲಿ ಎನ್‌ಡಿಎನ ಹೆಚ್.ಡಿ.ಕುಮಾರಸ್ವಾಮಿ Vs ಕಾಂಗ್ರೆಸ್‌ನ ವೆಂಕಟರಮಣೇಗೌಡ(ಸ್ಟಾರ್ ಚಂದ್ರು) ಸೇರಿ 14 ಅಭ್ಯರ್ಥಿಗಳು ಕಣದಲ್ಲಿ ● ಚಾಮರಾಜನಗರ ಕ್ಷೇತ್ರದಲ್ಲಿ ಎನ್‌ಡಿಎನ ಎಸ್.ಬಾಲರಾಜು Vs ಕಾಂಗ್ರೆಸ್‌ನ ಸುನೀಲ್ ಬೋಸ್ ಸೇರಿ 14 ಜನರ ನಡುವೆ ಹೋರಾಟ ● ಹಾಸನ ಕ್ಷೇತ್ರದಲ್ಲಿ ಎನ್‌ಡಿಎನ ಪ್ರಜ್ವಲ್ ರೇವಣ್ಣ Vs ಕಾಂಗ್ರೆಸ್‌ನ ಶ್ರೇಯಸ್ ಎಂ.ಪಟೇಲ್ ಸೇರಿ 15 ಅಭ್ಯರ್ಥಿಗಳು ಕಣದಲ್ಲಿ



ಯದುವೀರ್ | ಲಕ್ಷ್ಮಣ | ಕುಮಾರಸ್ವಾಮಿ | ಸ್ಟಾರ್ ಚಂದ್ರು | ಬಾಲರಾಜ್ | ಬೋಸ್ | ಪ್ರಜ್ವಲ್ | ಶ್ರೇಯಸ್

ಮೈಸೂರು, ಏ.8–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ ಬಿಜೆಪಿಯ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕಾಂಗ್ರೆಸ್‌ನ ಎಂ.ಲಕ್ಷ್ಮಣ ಸೇರಿ ಒಟ್ಟು 18 ಮಂದಿ, ಮಂಡ್ಯ ಕ್ಷೇತ್ರದಲ್ಲಿ ಮಾಜಿ ಮುಖ್ಯಮಂತ್ರಿ, ಜೆಡಿಎಸ್‌ನ ಹೆಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್‌ನ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಸೇರಿ 14 ಅಭ್ಯರ್ಥಿಗಳು, ಚಾಮರಾಜನಗರ ಕ್ಷೇತ್ರದಲ್ಲಿ ಬಿಜೆಪಿಯ ಎಸ್.ಬಾಲರಾಜು, ಕಾಂಗ್ರೆಸ್‌ನ ಸುನೀಲ್‌ಬೋಸ್ ಸೇರಿ 14 ಅಭ್ಯರ್ಥಿಗಳು ಹಾಗೂ ಹಾಸನ ಕ್ಷೇತ್ರದಲ್ಲಿ ಜೆಡಿಎಸ್‌ನ ಪ್ರಜ್ವಲ್ ರೇವಣ್ಣ, ಕಾಂಗ್ರೆಸ್‌ನ ಶ್ರೇಯಸ್ ಎಂ.ಪಟೇಲ್ ಸೇರಿ 15 ಅಭ್ಯರ್ಥಿಗಳು ಅಂತಿಮ ಕಣದಲ್ಲಿ ಉಳಿದಿದ್ದಾರೆ.

ಮೈಸೂರು–ಕೊಡಗು ಕ್ಷೇತ್ರ: ಮೈಸೂರು–ಕೊಡಗು ಕ್ಷೇತ್ರದಲ್ಲಿ ನಾಮಪತ್ರ ಸಲ್ಲಿಸಿದ್ದ 28 ಮಂದಿ ಪೈಕಿ ● 10ನೇ ಪುಟಕ್ಕೆ

ಮೈಸೂರು–ಕೊಡಗು ಕ್ಷೇತ್ರದ ಮತಗಟ್ಟೆಗಳಲ್ಲಿ ತಲಾ ಎರಡು ಇವಿಎಂ ಬಳಕೆ



ಮೈಸೂರು: ಇದೇ 26ರಂದು ನಡೆಯಲಿರುವ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಚುನಾವಣೆಯಲ್ಲಿ 18 ಮಂದಿ ಕಣದಲ್ಲಿರುವುದರಿಂದ ಮತಗಟ್ಟೆಗಳಲ್ಲಿ ತಲಾ ಎರಡು ವಿದ್ಯುನ್ಮಾನ ಮತಯಂತ್ರ (ಇವಿಎಂ)ಗಳನ್ನು ಬಳಸಲಾಗುತ್ತದೆ. ಜಿಲ್ಲೆಗೆ ಅವಶ್ಯವಾದಷ್ಟು ಇವಿಎಂಗಳು ಲಭ್ಯ ಇವೆ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ. ಈವರೆಗೆ, 10,17,120 ಪುರುಷರು, 10,55,035 ಮಹಿಳೆಯರು ಹಾಗೂ 182 ಲಿಂಗತ್ವ ಅಲ್ಪಸಂಖ್ಯಾತರು ಸೇರಿದಂತೆ 20,72,337 ಮತದಾರರಿದ್ದಾರೆ. ಕ್ಷೇತ್ರದಲ್ಲಿ 2,192, ಹೆಚ್ಚುವರಿಯಾಗಿ 10 ಒಟ್ಟು 2,202 ಮತಗಟ್ಟೆಗಳನ್ನು ಸ್ಥಾಪಿಸಲಾಗುತ್ತಿದೆ. ಮಡಿಕೇರಿ ವಿಧಾನಸಭಾ ಕ್ಷೇತ್ರದಲ್ಲಿ 273, ವಿರಾಜಪೇಟೆಯಲ್ಲಿ 273, ಪಿರಿಯಾಪಟ್ಟಣದಲ್ಲಿ 235, ಹುಣಸೂರಿನಲ್ಲಿ 274, ಚಾಮುಂಡೇಶ್ವರಿಯಲ್ಲಿ 341, ಕೃಷ್ಣರಾಜದಲ್ಲಿ 265, ಚಾಮರಾಜದಲ್ಲಿ 248 ಹಾಗೂ ನರಸಿಂಹರಾಜದಲ್ಲಿ 291 ಮತಗಟ್ಟೆಗಳನ್ನು ಗುರುತಿಸಲಾಗಿದೆ.

ಮುಂದಿನ ವಾರ ದ್ವಿತೀಯ ಪಿಯು ಫಲಿತಾಂಶ



ಬೆಂಗಳೂರು, ಏ.8(ಕೆಎಂಶಿ)– ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಮುಂದಿನ ವಾರ ಪ್ರಕಟಿಸಲು ಕರ್ನಾಟಕ ರಾಜ್ಯ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಸಜ್ಜಾಗಿದೆ. ವೃತ್ತಿ ಶಿಕ್ಷಣ ಪ್ರವೇಶ ಪರೀಕ್ಷೆ ಏಪ್ರಿಲ್ ಮೂರನೇ ವಾರದಲ್ಲಿ ನಡೆಯಲಿದ್ದು ಅದಕ್ಕೂ ಮುನ್ನವೇ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಿಸಲು ಮಂಡಳಿ ಮುಂದಾಗಿದೆ. ಮೌಲ್ಯಮಾಪನ ಕಾರ್ಯ ಪೂರ್ಣಗೊಂಡಿದ್ದು, ಏಪ್ರಿಲ್ 10ರಿಂದ 15ರವರೆಗಿನ ಯಾವುದೇ ದಿನಗಳಲ್ಲಿ ಫಲಿತಾಂಶ ಹೊರಬೀಳಲಿದೆ.

ಕಳೆದ ಮಾರ್ಚ್ 1ರಿಂದ ಆರಂಭಗೊಂಡಿದ್ದ ಪರೀಕ್ಷೆ ಅದೇ ತಿಂಗಳ 23ಕ್ಕೆ ಅಂತ್ಯಗೊಂಡಿತ್ತು. ಮಾರ್ಚ್ 25ರಿಂದ ಮೌಲ್ಯಮಾಪನ ಆರಂಭಗೊಂಡಿತ್ತು. ಈ ಬಾರಿ 6.75 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ● 10ನೇ ಪುಟಕ್ಕೆ

ಬೋರ್ಡ್ ಪರೀಕ್ಷೆ ಫಲಿತಾಂಶಕ್ಕೆ ಸುಪ್ರೀಂ ತಡೆ

ಫಲಿತಾಂಶ ಕೆಲ ಶಾಲೆಗಳಲ್ಲಿ ಪ್ರಕಟವಾದ ನಂತರ ಹೊರಬಿದ್ದ ಕೋರ್ಟ್ ಆದೇಶ



ಬೆಂಗಳೂರು, ಏ.8(ಕೆಎಂಶಿ)– ರಾಜ್ಯ ಪಠ್ಯಕ್ರಮ ಬೋಧಿಸುವ ಸರ್ಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳು ಇತ್ತೀಚೆಗೆ 5, 8, 9 ಮತ್ತು 11ನೇ ತರಗತಿಗಳಿಗೆ ನಡೆಸಿದ ಬೋರ್ಡ್ ಪರೀಕ್ಷೆ ಫಲಿತಾಂಶವನ್ನು ಪ್ರಕಟಿಸಬಾರದು, ನ್ಯಾಯಾಲಯದ ಮುಂದಿನ ಆದೇಶದವರೆಗೆ ಕಾಯಬೇಕು ಎಂದು ಸುಪ್ರೀಂಕೋರ್ಟ್ ಇಂದು ಸೂಚನೆ ನೀಡಿದೆ. ಈ ಹಿಂದೆ ರಾಜ್ಯ ಹೈಕೋರ್ಟ್ 5, 8, 9 ಮತ್ತು 11ನೇ ತರಗತಿ ವಿದ್ಯಾರ್ಥಿಗಳಿಗೆ ಬೋರ್ಡ್ ಪರೀಕ್ಷೆ ನಡೆಸಲು ಅಸ್ತು ಎಂದಿತ್ತು. ಹೈಕೋರ್ಟ್‌ನ ಈ ಆದೇಶಕ್ಕೂ ತಡೆ ನೀಡಿರುವ ಸುಪ್ರೀಂ ಕೋರ್ಟ್, ಸದ್ಯ ಯಾವುದೇ ಶಾಲೆಗಳು ಬೋರ್ಡ್ ಪರೀಕ್ಷೆ ಫಲಿತಾಂಶ ಪ್ರಕಟಿಸಬಾರದು ಎಂದು ಸೂಚಿಸಿದೆ. ಆದರೆ, ಇಂದು ಬೆಳಗ್ಗೆಯಷ್ಟೇ ಕೆಲವು ಶಾಲೆಗಳು ಬೋರ್ಡ್ ಪರೀಕ್ಷೆ ಫಲಿತಾಂಶಗಳನ್ನು ಪ್ರಕಟಿಸಿದ್ದು, ನಂತರ ಈ ಆದೇಶ ● 10ನೇ ಪುಟಕ್ಕೆ

ಮೈಸೂರಲ್ಲಿ ಯುಗಾದಿಗೆ ಭರದ ಸಿದ್ಧತೆ

ಬೆಲೆ ಏರಿಕೆ, ಸುಡು ಬಿಸಿಲನ್ನೂ ಲೆಕ್ಕಿಸದೆ ಪೂಜಾ ಸಾಮಗ್ರಿ, ಹಣ್ಣು, ತರಕಾರಿ ಖರೀದಿಸಿದ ಗ್ರಾಹಕರು



ಯುಗಾದಿ ಹಬ್ಬದ ಮುನ್ನಾದಿನವಾದ ಸೋಮವಾರ ಬೆಳಗ್ಗೆ ಮೈಸೂರಿನ ಚಿಕ್ಕ ಗಡಿಯಾರ ಬಳಿಯ ಮಾರುಕಟ್ಟೆಯಲ್ಲಿ ಮಾವು ಮತ್ತು ಬೇವಿನಸೊಪ್ಪನ್ನು ಖರೀದಿಸುತ್ತಿರುವ ಜನರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಏ. 8 (ಆರ್‌ಕೆ)– ಸಂಭ್ರಮದ ಯುಗಾದಿ ಹಬ್ಬ ಆಚರಿಸಲು ಮೈಸೂರಲ್ಲಿ ನಾಗರಿಕರು ಸಡಗರದ ಸಿದ್ಧತೆ ನಡೆಸಿದ್ದಾರೆ. ಮಂಗಳವಾರ (ನಾಳೆ) ನಡೆಯಲಿರುವ ಯುಗಾದಿಗಾಗಿ ಇಂದು ಸುಡುವ ಬಿಸಿಲನ್ನೂ ಲೆಕ್ಕಿಸದೆ ಪೂಜಾ ಸಾಮಗ್ರಿ, ಹಣ್ಣು–ತರಕಾರಿ, ಸಿಹಿ ಮತ್ತು ಖಾರಾ ತಿಂಡಿಗಳು ಹಾಗೂ ಮಾವು–ಬೇವಿನ ಸೊಪ್ಪು ಖರೀದಿಯಲ್ಲಿ ನಿರತರಾಗಿದ್ದರು.

ನಗರದ ಜೆ.ಕೆ.ಮೈದಾನದ ಸುತ್ತಲಿನ ರಸ್ತೆಬದಿ, ಓಲ್ಡ್ ಆರ್‌ಎಂಸಿ ಸರ್ಕಲ್, ದೇವರಾಜ ಮಾರುಕಟ್ಟೆ, ವಾಣಿ ವಿಲಾಸ ರಸ್ತೆಯ ತರಕಾರಿ ಮಾರುಕಟ್ಟೆ, ಬಂಡೀಪಾಳ್ಯದ ಎಪಿಎಂಸಿ ಮಾರುಕಟ್ಟೆಗಳಲ್ಲಿ ಪೂಜಾ ಸಾಮಗ್ರಿ, ಹೂವು, ಹಣ್ಣು, ತರಕಾರಿ, ಮಾವು–ಬೇವಿನಸೊಪ್ಪು ಖರೀದಿಸಲು ಜನ ಮುಗಿಬೀಳುತ್ತಿದ್ದರು.

ಬಿಸಿಲಿನ ತೀವ್ರತೆಯಿಂದ ಈ ಬಾರಿ ಹೂ ಬೆಳೆ ಕ್ಷೀಣಿಸಿರುವುದರಿಂದ ಯುಗಾದಿ ಹಬ್ಬಕ್ಕೆ ನಿರೀಕ್ಷಿತ ಪ್ರಮಾಣದ ಹೂವು ಬಂದಿಲ್ಲವಾದ ಕಾರಣ ಹೂವುಗಳ ಬೆಲೆ ಗಗನಕ್ಕೇರಿದೆ. ಒಂದು ಮಾರು ಸೇವಂತಿಗೆ ದರ 100 ರಿಂದ 160 ರೂ. ಗಳಿಗೇರಿದೆ. ಅದೇ ರೀತಿ ಮಲ್ಲಿಗೆ, ಕಾಕಡ, ಕನಕಾಂಬರ, ಗುಲಾಬಿ ಹೂ ದರವೂ ಅತೀ ಹೆಚ್ಚಾಗಿದೆ ಯಾದರೂ, ಜನರು ಯುಗಾದಿಗೆ ಅನಿವಾರ್ಯವಾಗಿ ಹೂವು ಖರೀದಿಸುತ್ತಿದ್ದುದು ಕಂಡು ಬಂದಿತು.

ಮಾವು, ಬೇವಿನ ಸೊಪ್ಪು ಒಂದು ಕಟ್ಟಿಗೆ 20ರಿಂದ 30 ರೂ.ಗೆ ಮಾರಾಟವಾಗುತ್ತಿವೆ. ಹಣ್ಣುಗಳ ದರವೂ ಗಗನಕ್ಕೇರಿದ್ದರೂ ಯುಗಾದಿಗೆ ಎಡೆ ಸಮರ್ಪಿಸಬೇಕಾಗಿರುವುದರಿಂದ ಸಿಹಿ ತಿಂಡಿ, ಖಾರಾ ತಿಂಡಿಗಳು, ಹೋಳಿಗೆ ಖರೀದಿ ಮೈಸೂರಲ್ಲಿ ಜೋರಾಗಿ ನಡೆಯುತ್ತಿದೆ ಉಡುಪು, ಮಕ್ಕಳ ಬಟ್ಟೆ, ಸೀರೆ, ಆಭರಣ ಅಂಗಡಿಗಳಿಗೂ ಜನರು ಮುಗಿ ಬೀಳುತ್ತಿದ್ದುದು ಕಂಡು ಬಂದಿತು. ಹೊಸ ವರ್ಷದ ಮೊದಲ ಹಬ್ಬ ಯುಗಾದಿಯಂದು ಜನರು ಮಂಗಳವಾರ ಬೆಳಗ್ಗೆಯಿಂದಲೇ ದೇವಾಲಯಗಳಿಗೆ ತೆರಳಿ ದೇವರ ದರ್ಶನ ಪಡೆದು ವಿಶೇಷ ಪೂಜಾ ಕೈಂಕರ್ಯ ಮಾಡಿಸಲಿದ್ದಾರೆ. ಕೆಲವರು ಯುಗಾದಿ ಅಂಗವಾಗಿ ಶುಭ ಕಾರ್ಯ ನಡೆಸಲು ತಯಾರಿ ನಡೆಸುತ್ತಿದ್ದು, ಇನ್ನೂ ಕೆಲವರು ಮುನ್ನಾ ದಿನವಾದ ಇಂದೇ ಹೊಸ ವಾಹನ ಪಡೆದು ನೋಂದಣಿ ಮಾಡಿಸಿದ್ದಾರೆ. ಒಟ್ಟಾರೆ ಮೈಸೂರು ನಗರಾದ್ಯಂತ ಯುಗಾದಿಗೆ ಜನರು ಸರ್ವ ರೀತಿಯಲ್ಲಿ ತಯಾರಿ ನಡೆಸಿದ್ದಾರೆ.

ವಿಪ್ರ ಕುಟುಂಬದವರಿಗೆ ಶಾಸಕರಿಂದ ಒಂಟಿಕೊಪ್ಪಲ್ ಪಂಚಾಂಗ ವಿತರಣೆ



ಮೈಸೂರು,ಏ.8–ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಗುರು ರಾಘವೇಂದ್ರ ಸ್ವಾಮಿ ದೇವಸ್ಥಾನದಲ್ಲಿ ಮೈಸೂರು ಯುವ ಬಳಗದ ವತಿಯಿಂದ ಹಿಂದೂ ಸಂಪ್ರದಾಯದ ಪಾಲ್ಗುಣ ಮಾಸದ ನೂತನ ವರ್ಷಾಚರಣೆಯಾದ ಯುಗಾದಿ ಹಬ್ಬದ ಅಂಗವಾಗಿ ಶಾಸಕ ಕೆ.ಹರೀಶ್‌ಗೌಡ ವಿಪ್ರ ಕುಟುಂಬದವರಿಗೆ ಒಂಟಿಕೊಪ್ಪಲ್ ಪಂಚಾಂಗ ವಿತರಿಸಿ, ಯುಗಾದಿ ಹಬ್ಬದ ಶುಭಾಶಯ ಕೋರಿದರು.

ನಂತರ ಮಾತನಾಡಿದ ಅವರು, ಸೌರ ಮಂಡಲದ ಆಧಾರಿತದ ಮೇಲೆ ಭೂಮಿಯಲ್ಲಿ ನಡೆಯುವ ಬದಲಾವಣೆಯನ್ನು ತಿಳಿಸುವುದೇ ಪಂಚಾಂಗ, ಯುಗಾದಿ ವರ್ಷಾಚರಣೆ ಬೇವು–ಬೆಲ್ಲವು ಕಹಿ–ಸಿಹಿಯ ಸಂಕೇತ. ಕಷ್ಟ–ಸುಖಗಳ ಸಮ ಬಾಳಿನ ಜೀವನವನ್ನು ಸರಿಯಾದ ಸಂದರ್ಭದಲ್ಲಿ ನಡೆಸಬೇಕಾದರೆ ಪಂಚಾಂಗದ ನಿರ್ಧಾರ ಮುಖ್ಯವಾಗುತ್ತದೆ. ಸಂವತ್ಸರ ಮಾಸ, ತಿಥಿ ನಕ್ಷತ್ರ ರಾಶಿಯ ಕಾಲದ ಘಳಿಗೆಯ ಮಾಹಿತಿ ಮೊದಲು ತಿಳಿದುಕೊಳ್ಳಬಹುದು. ಭಾರತದ ಇತಿಹಾಸದ ಕೆಲವು ವಿಷಯಗಳು ಪಂಚಾಂಗದಲ್ಲಿ ಮಾಹಿತಿ ನೀಡುತ್ತದೆ ಎಂದರು.

ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಮಾತನಾಡಿದರು. ಇಳೈ ಆಳ್ವಾರ್ ಸ್ವಾಮೀಜಿ, ಅರ್ಚಕರ ಸಂಘದ ಅಧ್ಯಕ್ಷ ವಿದ್ವಾನ್ ಕೃಷ್ಣಮೂರ್ತಿ, ಅಮೃತೇಶ್ವರ ದೇವಸ್ಥಾನದ ಪ್ರಧಾನ ಅರ್ಚಕ ಮೈ.ಕಾ. ಕುಮಾರ್, ಮೈಸೂರು ಯುವ ಬಳಗದ ಸಂಚಾಲಕರಾದ ನವೀನ್, ರವಿಚಂದ್ರ, ನಂಜುಂಡಸ್ವಾಮಿ, ಹೇಮಂತ್, ವಿಜ್ಞೇಶ್ವರ ಭಟ್, ಸುದರ್ಶನ್, ಲೋಕೇಶ್, ಮಂಜುಳಾ, ಶಾಂತ, ಮಂಗಳ, ರಂಗನಾಥ್, ಪ್ರಶಾಂತ್, ಶ್ರೀಕಾಂತ್ ಕಶ್ಯಪ್, ಮಹೇಶ್ ಕುಮಾರ್, ಪ್ರೊ. ಶರ್ಮಾ, ಚಕ್ರಪಾಣಿ, ಶ್ರೀನಿವಾಸ್, ಮಿರ್ಲೆ ಪನಿಶ್ ಹಾಗೂ ಇನ್ನಿತರ ವಿಪ್ರ ಮುಖಂಡರು ಭಾಗವಹಿಸಿದ್ದರು.

ಯುಗಾದಿ ಅಂಗವಾಗಿ ವಿಶೇಷ ಪೂಜೆ

ಮೈಸೂರು,ಏ.8–ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಯುಗಾದಿ ಹಬ್ಬದ ಅಂಗವಾಗಿ ದೇವರಿಗೆ ಪಂಚಾಮೃತ ಅಭಿಷೇಕ, ವಿಶೇಷ ದ್ರವ್ಯಗಳಿಂದ ಅಭಿಷೇಕ, ವಿಶೇಷ ನವನೀತ ಅಲಂಕಾರ ಹಾಗೂ ಶನಿಶಾಂತಿ, ನವಗ್ರಹ ಪೂಜೆ ಮತ್ತು ಮಹಾಗಣಪತಿ ಹೋಮವನ್ನು ಸಾಮೂಹಿಕವಾಗಿ ನಡೆಸಲಾಗುವುದು. ಏ.9ರಂದು ಬೆಳಗ್ಗೆ 8.30ರಿಂದ 9.30ರವರೆಗೆ ಮಹಾಸಂಕಲ್ಪ, ಗಣಪತಿ ಪೂಜೆ, ಪಂಚಾಂಗ ಪೂಜೆ, ಶನಿಶಾಂತಿ, ನವಗ್ರಹ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ ನಡೆಯಲಿದೆ. ಆಸಕ್ತರು ವಿದ್ವಾನ್ ಎಸ್.ಕೃಷ್ಣಮೂರ್ತಿ, ಮೊ. 93421 12477 ಸಂಪರ್ಕಿಸಬಹುದು.

ಕಾಂಗ್ರೆಸ್‌ಗೆ ದಸಂಸ ಕರ್ನಾಟಕ ಬೆಂಬಲ

ಮೈಸೂರು,ಏ.8(ಎಂಟಿವೈ)– ಮನುವಾದಿ ಹಾಗೂ ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರ ಇಡುವ ಅನಿವಾರ್ಯತೆಯಿಂದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಲು ನಿರ್ಧರಿಸಿರುವುದಾಗಿ ದಲಿತ ಸಂಘರ್ಷ ಸಮಿತಿ–ಕರ್ನಾಟಕ ಅಧ್ಯಕ್ಷ ಮಂಜುನಾಥ್ ಅಣ್ಣಯ್ಯ ತಿಳಿಸಿದ್ದಾರೆ.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ದೇಶದಲ್ಲಿ ಕೋಮುವಾದ ತಾಂಡವವಾಡುತ್ತಿದೆ. ಸಾಮಾಜಿಕ ಕ್ರಾಂತಿಯನ್ನು ಸಾಧಿಸಿದ ಬೌದ್ಧ ಧರ್ಮವನ್ನು ನಾಶ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಮಾಜದಲ್ಲಿ ಅಶಾಂತಿ ನೆಲೆಸಿ, ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಸಂಚು ಮಾಡುತ್ತಿರುವ ಕೋಮುವಾದಿ ಶಕ್ತಿಗಳನ್ನು ಲೋಕಸಭಾ ಚುನಾವಣೆಯಲ್ಲಿ ಹತ್ತಿಕ್ಕಲು ನಿರ್ಧರಿಸಲಾಗಿದೆ. ಆ ಕಾರಣದಿಂದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಲು ನಿರ್ಧರಿಸಲಾಗಿದೆ ಎಂದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಹಾಗೂ ಚಾಮರಾಜನಗರ ಲೋಕಸಭಾ ಮೀಸಲು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಅವರನ್ನು ದಲಿತ ಸಂಘರ್ಷ ಸಮಿತಿ–ಕರ್ನಾಟಕ ಬೆಂಬಲಿಸುತ್ತದೆ. ಸಮಿತಿಯ ಕಾರ್ಯಕರ್ತರು, ಹಿತೈಷಿಗಳು ಕಾಂಗ್ರೆಸ್ ಅಭ್ಯರ್ಥಿಗಳನ್ನು ಬೆಂಬಲಿಸುವಂತೆ ಕರೆ ನೀಡಿದರು.

ಈಗಿರುವ ಪ್ರಜಾಪ್ರಭುತ್ವ ವ್ಯವಸ್ಥೆ ಬದಲಾಯಿಸಿ ಹಿಂದೂ ಧರ್ಮದ ಹೆಸರಿನಲ್ಲಿ, ಧರ್ಮ ಸಂಸತ್ ಸ್ಥಾಪಿಸಿ ಅದರ ಮೇಲೆ ಹಿಡಿತ ಸಾಧಿಸುವುದು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಗುರಿಯಾಗಿದೆ. ಹೀಗಾಗಿ ಸುಮಾರು 400 ಲೋಕಸಭಾ ಸ್ಥಾನ ಗೆಲ್ಲಬೇಕೆಂದು ಅಪಾರ ಪ್ರಮಾಣದ ಅಕ್ರಮ ಹಣ ಖರ್ಚು ಮಾಡುತ್ತಿದ್ದಾರೆ. ಮಾಧ್ಯಮಗಳನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಯತ್ನಿಸುವುದರೊಡನೆ ಇಡಿ, ಐಟಿ, ಸಿಬಿಐ ದಾಳಿಗಳ ಮೂಲಕ ವಿರೋಧ ಪಕ್ಷಗಳ ಮೇಲೆ ದಾಳಿ ನಡೆಸುತ್ತಿದ್ದಾರೆಂದು ಆರೋಪಿಸಿದರು.

ದೇಶದ ದುಡಿಯುವ ಜನರು, ದಮನಿತ ಸಮುದಾಯಗಳು, ಅಲ್ಪಸಂಖ್ಯಾತರು, ಪ್ರಜ್ಞಾವಂತರು ಒಂದಾಗುವ ಮೂಲಕ ಷಡ್ಯಂತ್ರ ವಿಫಲಗೊಳಿಸಲು ಶ್ರಮಿಸುತ್ತಿದ್ದಾರೆ. ಹೀಗಾಗಿ ಕಾಂಗ್ರೆಸ್ ವಿರುದ್ಧದ ನಿಸ್ತೇಜ ಮಾತುಗಳನ್ನು ತಿರಸ್ಕರಿಸುವ ಮೂಲಕ ಅದಕ್ಕೆ ಬೆಂಬಲ ನೀಡಬೇಕು. ಈ ಮೂಲಕ ಸಂವಿಧಾನ ರಕ್ಷಣೆಗೆ ಮುಂದಾಗಬೇಕು. ಸಮ ಸಮಾಜ ನಿರ್ಮಾಣಕ್ಕೆ ಸಹಕರಿಸಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ದಸಂಸ ಪದಾಧಿಕಾರಿಗಳಾದ ವಸಂತ್, ಪ್ರಶಾಂತ್, ರವಿ, ವಿನೋದ್ ಚಾಕೋ, ಉಮೇಶ್ ಉಪಸ್ಥಿತರಿದ್ದರು.

ನಾಳೆಯಿಂದ ಟೇಬಲ್ ಟೆನ್ನಿಸ್ ಬೇಸಿಗೆ ತರಬೇತಿ ಶಿಬಿರ



ಮೈಸೂರು,ಏ.8(ಎಂಟಿವೈ)–ಮೈಸೂರಿನ ಮಹರ್ಷಿ ಪಬ್ಲಿಕ್ ಶಾಲೆಯಲ್ಲಿ ಏ.10ರಿಂದ 30ರವರೆಗೆ ಒಲಿಂಪಿಕ್ ಮಹರ್ಷಿ ಟೇಬಲ್ ಟೆನ್ನಿಸ್ ಅಕಾಡೆಮಿ ವತಿಯಿಂದ ಉದಯೋನ್ಮುಖ ಟೇಬಲ್ ಟೆನ್ನಿಸ್ ಆಟಗಾರರಿಗಾಗಿ ಬೇಸಿಗೆ ತರಬೇತಿ ಶಿಬಿರ ಆಯೋಜಿಸಲಾಗಿದೆ ಎಂದು ಶಿಬಿರದ ಆಯೋಜಕ ಅಕ್ಷಯ್ ಮಹಂತ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಬಿರದಲ್ಲಿ ಪ್ರತಿದಿನ ಬೆಳಗ್ಗೆ 6ರಿಂದ 10 ಗಂಟೆವರೆಗೆ, ಸಂಜೆ 4ರಿಂದ 8 ರವರೆಗೆ ಶಿಬಿರ ನಡೆಯಲಿದೆ ರಾಷ್ಟ್ರ ಮಟ್ಟದ ಪದಕ ವಿಜೇತರು, ಪರಿಣತ ತರಬೇತುದಾರರು ತರಬೇತಿ ನೀಡಲಿದ್ದಾರೆ. 5 ವರ್ಷಕ್ಕಿಂತ ಹೆಚ್ಚಿನ ವಯಸ್ಸಿನ ಮಕ್ಕಳು ಪಾಲ್ಗೊಳ್ಳಬಹುದಾಗಿದೆ. ಈ ವೇಳೆ ಟೇಬಲ್ ಟೆನ್ನಿಸ್ ಕೌಶಲ್ಯ ವೃದ್ಧಿಗೆ ಗಮನ ನೀಡಲಾಗುತ್ತದೆ. ಮಾಹಿತಿಗೆ ಮೊ. 9686 475604 ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಶಿಬಿರದ ತೇಜಸ್ ಶಂಕರ್, ಪ್ರಸನ್ನ ಇದ್ದರು.

ಕಾಂಗ್ರೆಸ್‌ಗೆ ಮಹಿಳೆಯರ ಬೆಂಬಲ 'ಗ್ಯಾರಂಟಿ'



ಮೈಸೂರು, ಏ. 8– ಕಾಂಗ್ರೆಸ್ ಪಕ್ಷಕ್ಕೆ ದೇಶದ ಮಹಿಳೆಯರೇ ದೊಡ್ಡ ಶಕ್ತಿ ಎಂದು ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ಮೈಸೂರಿನ ಜಲದರ್ಶಿನಿ ಆವರಣದ ತಮ್ಮ ಕಚೇರಿ ಸಭಾಂಗಣದಲ್ಲಿ ಚಾಮರಾಜ ಕ್ಷೇತ್ರದ ಮಹಿಳಾ ಮುಖಂಡರ ಸಭೆ ನಡೆಸಿದರು. ದೇಶ ಸ್ವಾತಂತ್ರ್ಯವಾದ ಬಳಿಕ ಮಹಿಳೆಯರ ಏಳಿಗೆಗಾಗಿ ಕಾಂಗ್ರೆಸ್ ನೂರಾರು ಯೋಜನೆಗಳನ್ನು ಜಾರಿಗೊಳಿಸಿದೆ. ಮಹಿಳೆಯರ ಅಭಿವೃದ್ಧಿಗೆ ಶ್ರಮಿಸಿದೆ. ಸದ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಮಹಿಳೆಯರಿಗೆ ಹಲವು ಗ್ಯಾರಂಟಿಗಳನ್ನು ಘೋಷಿಸಿ, ಜಾರಿಗೆ ತಂದಿದೆ. ಇದೆಲ್ಲವನ್ನು ಮತದಾರರಿಗೆ ತಲುಪಿಸಬೇಕು. ಮಹಿಳಾ ಕಾಂಗ್ರೆಸ್ ಮುಖಂಡರು ಎಲ್ಲಾ ವಾರ್ಡಿನ ಮಹಿಳಾ ಅಧ್ಯಕ್ಷರು ಸಕ್ರಿಯವಾಗಿ ಮನೆ ಮನೆಗೆ ತೆರಳಿ ಸರ್ಕಾರದ ಗ್ಯಾರಂಟಿ ಕಾರ್ಡ್, ಯುವ ಕಾರ್ಡ್‌ಗಳ ಯೋಜನೆ ಬಗ್ಗೆ ಮಹಿಳಾ ಮತದಾರರಿಗೆ ಮನವರಿಕೆ ಮಾಡಿಕೊಟ್ಟು ಮತದಾನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕರೆಕೊಟ್ಟರು.

ಮೈಸೂರು ನಗರ ಮಹಿಳಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಪುಷ್ಪಲತಾ ಚಿಕ್ಕಣ್ಣ ಮಾತನಾಡಿ, ಸಂಘಟನೆಯಲ್ಲಿ ಸಕ್ರಿಯವಾಗಿ ಮಹಿಳೆಯರು ಪಾಲ್ಗೊಳ್ಳಬೇಕೆಂದು ಹರೀಶ್‌ಗೌಡರು ಕರೆಕೊಟ್ಟರು.

ಮಾಜಿ ಮೇಯರ್ ಮೋದಾಮಣಿ, ರಾಜ್ಯ ಮಹಿಳಾ ಕಾಂಗ್ರೆಸ್ ಉಪಾಧ್ಯಕ್ಷೆ ಪುಷ್ಪವಲ್ಲಿ, ಕೆಪಿಸಿಸಿ ಸದಸ್ಯರಾದ ಕುಂಬಾರಕೊಪ್ಪಲ ರತ್ನಮ್ಮ, ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷೆ ಸುಶೀಲ ಮರಿಗೌಡ, ದೇವರಾಜ ಬ್ಲಾಕ್ ಮಹಿಳಾ ಅಧ್ಯಕ್ಷೆ ಚಂದ್ರಕಲಾ, ರವಿ ಮಂಚೇಗೌಡನಕೊಪ್ಪಲು, ರಮೇಶ ರಾಯಪ್ಪ, ಹಾಗೂ ಇನ್ನಿತರ ಮಹಿಳಾ ಪದಾಧಿಕಾರಿಗಳು ಭಾಗವಹಿಸಿದ್ದರು.

ಶೋಭಾ ಪ್ರಚಾರ ವೇಳೆ ಬಿಜೆಪಿ ಕಾರ್ಯಕರ್ತ ದುರ್ಮರಣ

ಬೆಂಗಳೂರು: ಬೆಂಗಳೂರು ಉತ್ತರ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿರುವ ಶೋಭಾ ಕರಂದ್ಲಾಜೆ ಅವರ ಕಾರು ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬಿಜೆಪಿ ಕಾರ್ಯಕರ್ತನೊಬ್ಬ ಸಾವನ್ನಪ್ಪಿದ್ದಾನೆ.

ಕೆಆರ್ ಪುರದ ಬಸ್ ನಿಲ್ದಾಣದಲ್ಲಿರುವ ವಿನಾಯಕ ದೇವಸ್ಥಾನದ ಬಳಿ ಅಪಘಾತ ಸಂಭವಿಸಿದ್ದು ಟಿಸಿ ಪಾಳ್ಯ ನಿವಾಸಿ 60 ವರ್ಷದ ಪ್ರಕಾಶ್ ಮೃತಪಟ್ಟಿದ್ದಾರೆ. ರಸ್ತೆ ಬದಿ ನಿಂತಿದ್ದ ಕಾರಿನ ಡೋರ್ ತೆರೆದಾಗ ಹಿಂಬದಿಯಿಂದ ಬರುತ್ತಿದ್ದ ಪ್ರಕಾಶ್ ಬೈಕ್‌ಗೆ ತಾಗಿ ಕೆಳಗೆ ಬಿದ್ದಿದ್ದು ಅವರ ಮೇಲೆ ಖಾಸಗಿ ಬಸ್ ಹರಿದಿದೆ. ಗಂಭೀರ ಗಾಯಗೊಂಡ ಪ್ರಕಾಶ್‌ರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಆದರೆ ಚಿಕಿತ್ಸೆ ಫಲಿಸದೇ ಪ್ರಕಾಶ್ ಮೃತಪಟ್ಟಿದ್ದಾರೆ.

ಸ್ಥಳಕ್ಕೆ ಕೆ.ಆರ್. ಪುರ ಸಂಚಾರಿ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಕೆಆರ್ ಪುರ ಸರ್ಕಾರಿ ಆಸ್ಪತ್ರೆಗೆ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ. ಅಪಘಾತ ಸಂಬಂಧ ಕಾರಿನ ಚಾಲಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮೃತ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಶೋಭಾ ಕರಂದ್ಲಾಜೆ ಅವರು, ಮೃತ ಪ್ರಕಾಶ್ ಬಿಜೆಪಿ ಕಾರ್ಯಕರ್ತ. ಚುನಾವಣಾ ಪ್ರಚಾರದ ವೇಳೆ ರಸ್ತೆ ಬದಿ ಕಾರು ನಿಲ್ಲಿಸಲಾಗಿತ್ತು. ಕಾರಿನ ಡೋರ್ ತೆರೆಯುವಾಗ ಬೈಕ್‌ನಲ್ಲಿ ಬಂದು ಗುದ್ದಿದ್ದು ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದ್ದಾರೆ. ಈ ವೇಳೆ ಹಿಂದಿನಿಂದ ಬಂದ ಖಾಸಗಿ ಬಸ್ ಅವರ ಮೇಲೆ ಹರಿದು ಮೃತಪಟ್ಟಿದ್ದಾರೆ. ಈ ಘಟನೆ ನಿಜಕ್ಕೂ ದುಃಖ ತಂದಿದೆ. ಅವರ ಕುಟುಂಬಸ್ಥರ ಜತೆಗೆ ನಾವಿದ್ದೇವೆ. ಪಾರ್ಟಿ ವತಿಯಿಂದ ಪರಿಹಾರ ಕೊಡುತ್ತೇವೆ ಎಂದರು.

ನಗರ ಸಾರಿಗೆ ಬಸ್ ಡಿಕ್ಕಿ: ಪಾದಚಾರಿ ಮಹಿಳೆ ಸಾವು

ಮೈಸೂರು,ಏ.8(ಆರ್‌ಕೆ)–ನಗರ ಸಾರಿಗೆ ಬಸ್ಸೊಂದು ಡಿಕ್ಕಿ ಹೊಡೆದ ಪರಿಣಾಮ ರಸ್ತೆ ದಾಟುತ್ತಿದ್ದ ಮಹಿಳೆ ಸಾವನ್ನಪ್ಪಿರುವ ಘಟನೆ ಮೈಸೂರಿನ ಕೆ.ಆರ್.ಪೊಲೀಸ್ ಠಾಣೆ ಎದುರು ವಾಣಿ ವಿಲಾಸ ರಸ್ತೆಯಲ್ಲಿ ಸೋಮವಾರ ಬೆಳಗ್ಗೆ ಸಂಭವಿಸಿದೆ.

ಮೈಸೂರಿನ ಕುವೆಂಪುನಗರ ಎಂ ಬ್ಲಾಕ್ ನಿವಾಸಿ ಎನ್.ನಾಗರಾಜು ಅವರ ಪತ್ನಿ ಸುಶೀಲಮ್ಮ (57) ಸಾವನ್ನಪ್ಪಿದವರು. ಅಗ್ರಹಾರ ಸರ್ಕಲ್ ಕಡೆಯಿಂದ ಸಿದ್ದಪ್ಪ ಸ್ಕ್ವೇರ್ ಕಡೆಗೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿ ನಗರ ಸಾರಿಗೆಯ ಕುವೆಂಪುನಗರ ಡಿಪೋಗೆ ಸೇರಿದ ಬಸ್ (ಕೆಎ–09, ಎಫ್–4377) ಕೆಆರ್. ಠಾಣೆ ಎದುರು ರಸ್ತೆ ದಾಟುತ್ತಿದ್ದ ಸುಶೀಲಮ್ಮ ಅವರಿಗೆ ಬೆಳಗ್ಗೆ 11.10 ಗಂಟೆಗೆ ಡಿಕ್ಕಿ ಹೊಡೆಯಿತು.

ಪರಿಣಾಮ ತಲೆಗೆ ತೀವ್ರ ಗಾಯಗಳಾಗಿ ಸುಶೀಲಮ್ಮ ಸ್ಥಳದಲ್ಲೇ ಅಸುನೀಗಿದರು. ಸ್ಥಳಕ್ಕೆ ಧಾವಿಸಿದ ಕೆ.ಆರ್. ಸಂಚಾರ ಠಾಣೆ ಪೊಲೀಸರು ಮಹಜರು ನಡೆಸಿ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದರು. ಡಿಕ್ಕಿ ಹೊಡೆದ ಬಸ್ ಅನ್ನು ವಶಕ್ಕೆ ಪಡೆದಿರುವ ಪೊಲೀಸರು ಚಾಲಕ ವೆಂಕಟರಾಜು ಅವರನ್ನು ವಿಚಾರಣೆಗೊಳಪಡಿಸಿದ್ದಾರೆ. ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಪುಟ್ಟರಸಿ ನಿಧನ



ಮಳವಳ್ಳಿ,ಏ.8– ಊಟಿಯ ಫೈಶೋಲಾ ನಿವಾಸಿ, ಮೂಲತಃ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕಿನ ಕಲ್ಲಾರೆಪುರ ಗ್ರಾಮದ ಪುಟ್ಟರಸಿ (58) ಸೋಮವಾರ ಸಂಜೆ ಅನಾರೋಗ್ಯದಿಂದ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತಿ ಪಳನಿ, ಪುತ್ರ ಪಿ.ತ್ಯಾಗು, ಪುತ್ರಿ ಪಿ.ಕಸ್ತೂರಿ, ಸೊಸೆ, ಅಳಿಯ ಸೇರಿದಂತೆ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಸ್ವಗ್ರಾಮ ಕಲ್ಲಾರೆಪುರದ ಸ್ಮಶಾನದಲ್ಲಿ ಮಂಗಳವಾರ (ಏ.9) ಮಧ್ಯಾಹ್ನ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ತುರಗನೂರಿನಲ್ಲಿ ಬಿಜೆಪಿ ಮಹಾಶಕ್ತಿ ಕೇಂದ್ರದ ಬೂತ್ ಮಟ್ಟದ ಅಧ್ಯಕ್ಷರು, ಪದಾಧಿಕಾರಿಗಳ ಸಭೆ



ಮೈಸೂರು, ಏ. 8– ತಿ.ನರಸೀಪುರ ತಾಲೂಕು ತುರಗನೂರು ಗ್ರಾಮದ ಬಿಜೆಪಿ ಮಹಾಶಕ್ತಿ ಕೇಂದ್ರದ ಬೂತ್ ಮಟ್ಟದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಬಿಜೆಪಿ ಮುಖಂಡರಾದ ಮಂಡಲ ಅಧ್ಯಕ್ಷ ಸತ್ಯರಾಜ್, ಹಿರಿಯ ಮುಖಂಡ ಡಾ.ರೇವಣ್ಣ, ಜಿಲ್ಲಾ ಕಾರ್ಯದರ್ಶಿ ರಾಮಚಂದ್ರು, ಜಿಲ್ಲಾ ಪ್ರಕೋಷ್ಠದ ಸಂಚಾಲಕ ಡಿ.ಮಹೇಶ ನಾಯಕ, ತಾಲೂಕು ಪ್ರಧಾನ ಕಾರ್ಯದರ್ಶಿ ಡಾ.ಮಲ್ಲಿಕಾರ್ಜುನ ಸ್ವಾಮಿ, ಜಿಲ್ಲಾ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಎಸ್.ಶಿವಮೂರ್ತಿ, ಗೊರವನಹಳ್ಳಿ ಮೂರ್ತಿ, ಬಿ.ಸಿ.ಹಳ್ಳಿ ರಾಜು, ಮಾದೇಶ ಮತ್ತಿತರರು ಭಾಗವಹಿಸಿದ್ದರು. ತುರಗನೂರು ಮಹಾಶಕ್ತಿ ಕೇಂದ್ರ ಅಧ್ಯಕ್ಷ ಕೊಡಗಹಳ್ಳಿ ಕುಮಾರ್ ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

9.04.2024 ಮಂಗಳವಾರ, ಮಳೆ ನಕ್ಷತ್ರ: ರೇವತಿ 31.03.2024ರಿಂದ 12.04.2024 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಪಾಡ್ಯ ನಕ್ಷತ್ರ: ರೇವತಿ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಕೊರಗಜ್ಜ ದೈವ ಸನ್ನಿಧಿ:** ಯುಗಾದಿ ಹಬ್ಬದ ಪ್ರಯುಕ್ತ ಕೊರಗಜ್ಜಗೆ ವಿಶೇಷ ಅಲಂಕಾರ, ಪೂಜೆ, ಮಹಾ ಮಂಗಳಾರತಿ, ಅನ್ನಸಂತರ್ಪಣೆ, ಸ್ಥಳ: ದೈವ ಸನ್ನಿಧಿ, ಕೇರ್ಗಳ್ಳಿ, ಬೆಳಗ್ಗೆ 8 ಗಂಟೆಯಿಂದ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ

■ **ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ:** ಯುಗಾದಿ ಹಬ್ಬದ ಅಂಗವಾಗಿ ದೇವರಿಗೆ ಪಂಚಾಮೃತ ಅಭಿಷೇಕ, ವಿಶೇಷ ದ್ರವ್ಯಗಳಿಂದ ಅಭಿಷೇಕ, ವಿಶೇಷ ನವನೀತ ಅಲಂಕಾರ ಹಾಗೂ ಶನಿಶಾಂತಿ, ನವಗ್ರಹ ಪೂಜೆ ಮತ್ತು ಮಹಾಗಣಪತಿ ಹೋಮ, ಬೆಳಗ್ಗೆ 8.30 ರಿಂದ 9.30 ರವರೆಗೆ ಮಹಾಸಂಕಲ್ಪ, ಗಣಪತಿ ಪೂಜೆ, ಪಂಚಾಂಗ ಪೂಜೆ, ಶನಿಶಾಂತಿ, ನವಗ್ರಹ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ಸ್ಥಳ: ಶ್ರೀ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ಇರ್ವಿನ್ ರಸ್ತೆ

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್:** ರಾಮೋತ್ಸವ ಕಾರ್ಯಕ್ರಮ, ಸಂಜೆ 6ರಿಂದ ಶಾರದಾ ಮಹಿಳಾ ಸಮಾಜದ ತಂಡದವರಿಂದ ಭಕ್ತಿಗೀತೆಗಳು, ಸಂಜೆ 7ರಿಂದ ಶ್ರೀಧರ ಶರ್ಮ ಅವರಿಂದ ಪಂಚಾಂಗ ಶ್ರವಣ, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ, ರಾಮಕೃಷ್ಣನಗರ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್** : 15ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಶ್ರೀ ಮಹಾಗಣಪತಿ ಪೂಜಾ, ಪುಣ್ಯಾಹವಾಚನ, ಮಹಾಸಂಕಲ್ಪ, ಅಂಕುರಾರ್ಪಣೆ, ನಾಂದಿ, ಕಲಶ ಸ್ಥಾಪನೆ, ಮಹಾಭಿಷೇಕ, ಯುಗಾದಿ ಪಂಚಾಂಗ ಶ್ರವಣ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ನವಾವರಣ ಪೂಜಾ, ಸಂಜೆ 5.30ಕ್ಕೆ ಶ್ರೀ ಮಹಾಪ್ರತ್ಯಂಗೀರಾ ಹೋಮ, ಶ್ರೀ ಮಹಾಲಕ್ಷ್ಮೀ, ಶ್ರೀ ಬಾಲಾ ತ್ರಿಪುರಸುಂದರಿ, ಶ್ರೀ ಜ್ಯೇಷ್ಠಲಕ್ಷ್ಮೀ, ಶ್ರೀ ಸ್ವಯಂವರಾಂಭ, ಶ್ರೀ ಅನ್ನಪೂರ್ಣ, ಶ್ರೀ ಕಾಮಾಖ್ಯ ದೇವಿ, ಶ್ರೀ ಮೂಕಾಂಬಿಕಾ, ಶ್ರೀಶಾಖಾಂಬರಿ, ಶ್ರೀ ಮಹಾ ಪ್ರತ್ಯಂಗೀರ, ಶ್ರೀ ಕಾರುಣ್ಯ ಮಹಾಲಕ್ಷ್ಮೀ, ಶ್ರೀ ಶ್ರೇಷ್ಠಲಕ್ಷ್ಮೀ, ಶ್ರೀ ವಿಜಯಲಕ್ಷ್ಮೀ ಶ್ರೀ ಸೌಭಾಗ್ಯ ಮಹಾಲಕ್ಷ್ಮೀ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಫೌಂಡೇಷನ್, ಜಯಲಕ್ಷ್ಮಿಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಕರುನಾಡ ಕಬ್ಬಿಗರು, ಪ್ರಸ್ತುತಿ–ಡಾ.ವಿನೋದಾ, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಬಿ.ವಿ.ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ–ನಾ ಕಸ್ತೂರಿ ಅವರ ರಂಗನಾಯಕಿ ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಪರಾಗ–ಬೇಸಾಯದ ಬದುಕು ಸರಾಗ, ಬಾನುಲಿ ಸರಣಿ– ಪ್ರಸ್ತುತಿ–ಎನ್.ಕೇಶವಮೂರ್ತಿ, 8.45 ಕರೆಗೊಂದು ಗೀತೆ, 10.00 ಶಾಸ್ತ್ರೀಯ ಸಂಗೀತ, ತಾಳವಾದ್ಯ ನಿರ್ದೇಶನ–ತುಮಕೂರ್ ಬಿ.ರವಿಶಂಕರ್ ಅವರಿಂದ, 11.00 ಮಿಶ್ರ ಮಾಧುರ್ಯ ಮಧ್ಯಾಹ್ನ: 12.30 ದೇವರನಾಮ–ಬಿ.ಎನ್.ಮಂಜುಳಾ, 12.45 ಆಕಾಶವಾಣಿ ಜಾತ್ರಾ ವಿಶೇಷ ಮಾಲಿಕೆಯಲ್ಲಿ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲೂಕು, ಬೊಪ್ಪೇಗೌಡನಪುರದ ಜಾತ್ರೆಯ ಪರಿಚಯ ಭಾಗವಹಿಸುವವರು–ಜಾನಪದ ವಿದ್ವಾಂಸರಾದ ಡಾ.ಕೃಷ್ಣಮೂರ್ತಿ ಹನೂರು ಹಾಗೂ ನೀಲಗಾರ ಗಾಯಕ ಡಾ.ಮೈಸೂರು ಗುರುರಾಜ್, ಪ್ರಸ್ತುತಿ–ಅಬ್ದುಲ್ ರಶೀದ್, 1.20 ಭಾವಗೀತೆಗಳು, 3.00 ಶಾಸ್ತ್ರೀಯ ಸಂಗೀತ–ಎನ್.ನಾಗರಾಜು ಮತ್ತು ಸಂಗಡಿಗರು–ನಾದಸ್ವರ, 4.00 ಕಥಾ ಕಾಲಕ್ಷೇಪ –ಮೂರೂವರೆ ವಜ್ರಗಳು, ಪ್ರಸ್ತುತಿ–ವಿದ್ವಾನ್ ಆರ್.ಗುರುರಾಜಲು ನಾಯ್ಡು, 6.50 ಕೃಷಿರಂಗ–ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನಿಲಿ ಸರಣಿ – ಹಿಪ್ಪುನೇರಳೆ ತೋಟದ ಸ್ಥಾಪನೆ ಹಾಗೂ ನಿರ್ವಹಣೆ ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ.ಮಂಜಪ್ಪ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್. ಕೇಶವಮೂರ್ತಿ, 9.30 ಲೋಕ್ ಪ್ರಸಾರಕ್ ಕೇ ಸಾಥ್ ಲೋಕ್ ನಿರ್ಣಯ್–2024, 10.00 ಚೈತ್ರವನ ಲಕ್ಷೀಶನ ಜೈಮಿನಿ ಭಾರತ ಕಾವ್ಯದ ಸಮಗ್ರ ವಾಚನ ವ್ಯಾಖ್ಯಾನ, ವಾಚನ–ಹೆಚ್.ಆರ್.ಕೇಶವಮೂರ್ತಿ, ವ್ಯಾಖ್ಯಾನ–ಮಾರ್ಕಂಡೇಯ ಅವಧಾನಿ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

ಸುತ್ತೂರು ಶ್ರೀ ಕ್ಷೇತ್ರದಲ್ಲಿಂದು, ನಂಜನಗೂಡು ತಾ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ:** ಯುಗಾದಿ ಅಲ್ಲಮಪ್ರಭು ಜಯಂತಿ, ಪಂಚಾಂಗ ಶ್ರವಣ ಹಾಗೂ ರೋಬೋ ಆನೆ 'ಶಿವ' ಸಮರ್ಪಣೆ, ಪ್ರಾತಃಕಾಲ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಬೆಳ್ಳಿರಥದ ಪ್ರಾಕಾರೋತ್ಸವ, ಬೆಳಗ್ಗೆ 5ಕ್ಕೆ ಶಿವದೀಕ್ಷೆ–ಲಿಂಗದೀಕ್ಷೆ, ಬೆಳಗ್ಗೆ 7.30ಕ್ಕೆ ಹೊನ್ನೇರು ಪ್ರಾರಂಭ, ಬೆಳಗ್ಗೆ 9.30ಕ್ಕೆ ಜೆಎಸ್‌ಎಸ್ ಲಲಿತಾ ಕಲಾ ವೃಂದದವರಿಂದ ವಚನ ಗಾಯನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬೆಳಗ್ಗೆ 10.30ಕ್ಕೆ ಕನ್ನಡ ಪ್ರಾಧ್ಯಾಪಕಿ ಡಾ.ವಿನೋದಮ್ಮ ಅವರಿಂದ ಅಲ್ಲಮಪ್ರಭು ದೇವರ ವಚನಗಳಲ್ಲಿ ದಾರ್ಶನಿಕತೆ ಕುರಿತು ಉಪನ್ಯಾಸ, ಬೆಳಗ್ಗೆ 11.30ಕ್ಕೆ ಪಂಚಾಂಗಕರ್ತರು, ಪ್ರಕಾಶಕರು ಮತ್ತು ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದ ಸಿದ್ಧಾಂತಿ ಡಾ.ಕೆ.ಜಿ.ಪುಟ್ಟಹೊನ್ನಯ್ಯ ಅವರಿಂದ ಪಂಚಾಂಗ ಶ್ರವಣ, ಮಧ್ಯಾಹ್ನ 12ಕ್ಕೆ ರೋಬೋ ಆನೆ 'ಶಿವ' ಸಮರ್ಪಣೆ, ಕೊಡುಗೆ: ಪೀಪಲ್ ಫಾರ್ ದಿ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್ಸ್, ನವದೆಹಲಿ.

ಮೈಸೂರು ಹಾಗೂ ಸುತ್ತಮುತ್ತ ನಾಳೆ...

ನಾಳಿನ ಪಂಚಾಂಗ

10.04.2024 ಬುಧವಾರ, ಮಳೆ ನಕ್ಷತ್ರ: ರೇವತಿ 31.03.2024ರಿಂದ 12.04.2024 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7 ರವರೆಗೆ

■ **ಶ್ರೀ ರಾಮಸೇವಾ ಮಂಡಲಿ ಚಾರಿಟೆಬಲ್ ಟ್ರಸ್ಟ್** : 30ನೇ ಶ್ರೀರಾಮನವಮಿ ಸಂಗೀತೋತ್ಸವ, ಸ್ವಾಮಿ ಆದಿತ್ಯಾನಂದಜಿ ಅವರಿಂದ ವಸಂತ ನವರಾತ್ರಿ ಕುರಿತು ಪ್ರವಚನ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ಸಂಜೆ 6.15 ರಿಂದ.

■ **ತ್ರಯೀನ್ಯಾಸ್ ಶ್ರೀವಿದ್ಯಾ ಫೌಂಡೇಷನ್** : 15ನೇ ವರ್ಷದ ವಸಂತ ನವರಾತ್ರಿ ಮಹೋತ್ಸವ, ಬೆಳಗ್ಗೆ 8.30ರಿಂದ ಮಹಾಭಿಷೇಕ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀಚಕ್ರಾರ್ಚನೆ, ಸಂಜೆ 5.30ಕ್ಕೆ ಶ್ರೀ ಮಹಾವಿಷ್ಣು ದಶಾವತಾರಹೋಮ ಮತ್ತು ಶ್ರೀ ಲಕ್ಷ್ಮೀನಾರಾಯಣ ಆವರಣ ಹೋಮ, ಶ್ರೀ ಮಹಾವಿಷ್ಣು, ಶ್ರೀ ಧನ್ವಂತರೀ, ಶ್ರೀ ಮತ್ಸ್ಯ, ಶ್ರೀ ಕೂರ್ಮ, ಶ್ರೀ ವರಾಹ, ಶ್ರೀ ವಾಮನ, ಶ್ರೀ ನಾರಸಿಂಹ, ಶ್ರೀ ಪರಶುರಾಮ, ಶ್ರೀರಾಮ, ಶ್ರೀ ಕೃಷ್ಣ, ಶ್ರೀ ಬುದ್ಧ, ಶ್ರೀಕಲ್ಕಿ, ಶ್ರೀ ಆಂಜನೇಯ, ಶ್ರೀ ಸೀತಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯೀನ್ಯಾಸ್ ಫೌಂಡೇಷನ್, ಜಯಲಕ್ಷ್ಮಿಪುರಂ.

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್:** ರಾಮೋತ್ಸವ, ಸಂಜೆ 6ರಿಂದ ಸಿದ್ಧಿವಿನಾಯಕ ಭಜನಾ ಮಂಡಳಿಯಿಂದ ಭಜನೆ, ಸಂಜೆ 6.30ರಿಂದ ವಿದುಷಿ ಕು.ಸಿಂಚನಾ ಅವರಿಂದ ಭಕ್ತಿಗೀತೆಗಳು, ಸ್ಥಳ: ರಜತ್ ಸಭಾ ಮಂಟಪ, ಗಣಪತಿ ದೇವಸ್ಥಾನ, ರಾಮಕೃಷ್ಣನಗರ.

ಮೈಸೂರು ಆಕಾಶವಾಣಿ

ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬದುಕು ಬದಲಿಸಿದ ಶೋಧ–ಬಾನುಲಿ ಸರಣಿ, ಪ್ರಸ್ತುತಿ–ಎನ್.ಎನ್.ಸುರೇಂದ್ರನಾಥ್ ಸಾತ್ವಿಕ್, 6.40 ಪದ ಸಂಸ್ಕೃತಿ–ಪರಮೇಶ್ವರ ವಿ. ಭಟ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಮೈಸೂರು ರಂಗಸ್ವಾಮಿ, 9.00 ವೃತ್ತಿ ಮಾರ್ಗದರ್ಶನ–ಸೈಬರ್ ಸೆಕ್ಯುರಿಟಿ ಕ್ಷೇತ್ರದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗದ ಪ್ರೊಫೆಸರ್ ಡಾ.ರಾಮಕೃಷ್ಣ ಹೆಗಡೆ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ರಾಜನ್ ಮಿಶ್ರ ಮತ್ತು ಸಾಜನ್ ಮಿಶ್ರ–ಹಾಡುಗಾರಿಕೆ, 11.00 ಮಿಶ್ರಮಾಧುರ್ಯ **ಮಧ್ಯಾಹ್ನ:** 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 3.00 ಶ್ರೀರಂಗಂ ಗೋಪಾಲರತ್ನಂ–ಹಾಡುಗಾರಿಕೆ, 4.00 ಮಹಿಳಾರಂಗ 'ಸ್ತ್ರೀ ಚೇತನ'. ಭಾಗವಹಿಸುವವರು–ವನ್ಯಜೀವಿ ಛಾಯಾಗ್ರಾಹಕಿ ಛಾಯ ಸುನೀಲ್ ಅವರೊಂದಿಗೆ ಮಾತುಕತೆ, 4.45 ಹಿಂದಿ ಪಾಠ, ಪ್ರಸ್ತುತಿ–ಅನುರಾಧಾ ಮೂರ್ತಿ, 6.50 ಕೃಷಿರಂಗ–ಸಾವಯವ ಸಂಪದ–ಸಾವಯವ ಕೃಷಿ ಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ–ಸಾವಯವ ಕೃಷಿಗೆ ಸೂಕ್ತವಾದ ಪರಿಕರಗಳ ಬಳಕೆ ಈ ಕುರಿತು ಬೆಂಗಳೂರಿನ ಸಾವಯವ ಹಾಗೂ ನೈಸರ್ಗಿಕ ಕೃಷಿ ಕುರಿತ ಪ್ರಾದೇಶಿಕ ಕೇಂದ್ರದ ನಿರ್ದೇಶಕ ಡಾ.ಆರ್.ಎಸ್. ಹರೀಶ್ ಶ್ರೀವತ್ಸ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಲೋಕ್ ಪ್ರಸಾರಕ್ ಕೇ ಸಾಥ್ ಲೋಕ್ ನಿರ್ಣಯ್–2024, 10.00 ಜನಪದ ಗೀತೆ, 10.30 ಸವಿನೆನಪು

ನಕ್ಕರೆ ಅದೇ ಸ್ವರ್ಗ

ಸಂದರ್ಶಕ : (ಆಗಷ್ಟೇ ಡಿಗ್ರಿ ಮುಗಿಸಿ ಬ್ಯಾಂಕ್ ಕೆಲಸವೊಂದರ ಸಂದರ್ಶನಕ್ಕೆ ಹಾಜರಾಗಿದ್ದಾಗ) ಸೈಕ್ಲೋನ್ ಎಂದರೇನು?

ಅಭ್ಯರ್ಥಿ : ಅಷ್ಟೂ ಗೊತ್ತಿಲ್ವಾ ಸಾರ್ ನಂಗೆ....? ಸೈಕಲ್ ತಗೋಳೋಕೆ ಕೊಡೋ ಲೋನ್ ಅಲ್ವಾ ಅದು!"

ಮೈಸೂರು ಮಿತ್ರ

ಮಂಗಳವಾರ, 9 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಸುಖ ಬರಲಿ ಅಥವಾ ಬಾರದಿರಲಿ ಬದುಕಲು ಎಲ್ಲರೂ ಕಲಿಯಬೇಕು.

– ಜಾರ್ಜ್ ಎಲಿಯಟ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಬ್ಬು ರುಚಿ ಅಂತ ಬೇರು ಸಹಿತ ಅಗಿಯುವುದೇ?

ನಿಮ್ಮ ಪತ್ರಗಳು

ಬೇವು ಬೆಲ್ಲದ ಸಂಭ್ರಮವೇ ಯುಗಾದಿ ಹಬ್ಬ!

ಮಾನ್ಯರೆ,



ಚೈತ್ರ ಮಾಸದಲ್ಲಿ ಬರುವ ಮೊದಲ ಹಬ್ಬ ಯುಗಾದಿ. ಹಿಂದೂ ಸಂಪ್ರದಾಯದ ಹೊಸ ವರ್ಷ ಯುಗಾದಿ ಹಬ್ಬ. ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತ್ತಿದೆ. ಹೊಸ ವರುಷಕ್ಕೆ ಹೊಸದು ಹೊಸದು ತರುತ್ತಿದೆ. ಈ ಯುಗಾದಿ ಹಬ್ಬ ನಮಗೆ ಮಾತ್ರವಲ್ಲ, ಪ್ರಕೃತಿಗೂ ಸಹ ಹೊಸ ವರುಷವಾಗಿರುತ್ತದೆ. ಚೈತ್ರ ಮಾಸದಿಂದ ಪ್ರಾರಂಭವಾಗುವ ಈ ಮಾಸದಲ್ಲಿ ಮರ ಗಿಡಗಳು ಚಿಗರೊಡೆದು ಪ್ರಕೃತಿಯೂ ಅಚ್ಚ ಹಸಿರಿನಿಂದ ಕಂಗೊಳಿಸುತ್ತದೆ. ಬೇವು ಬೆಲ್ಲದ ಸಂಭ್ರಮವೇ ಈ ಯುಗಾದಿ ಹಬ್ಬ. ಮನೆಯಂಗಳದಲ್ಲಿ ಸಗಣಿ ಸಾರಿಸಿ ರಂಗೋಲಿ ಬಿಡಿಸಿ ಬಣ್ಣ ಮತ್ತು ಹೂವುಗಳಿಂದ ಅಲಂಕರಿಸಲಾಗುತ್ತದೆ. ಮನೆಯ ಹೊಸ್ತಿಲು ಮತ್ತು ದೇವರ ಕೋಣೆಯನ್ನು ಬೇವು ಮಾವಿನ ತಳಿರು ತೋರಣ ಮತ್ತು ಹೂವುಗಳಿಂದ ಅಲಂಕರಿಸುತ್ತಾರೆ. ಬೇವು ಬೆಲ್ಲವನ್ನು ತಿಂದು ಹಿಂದಿನ ನೋವು ಮರೆತು ಸ್ನೇಹಿತರಿಗೆ ಯುಗಾದಿ ಹಬ್ಬದ ಶುಭಾಷಯಗಳನ್ನು ಹೇಳಿ ಯುಗಾದಿ ಹಬ್ಬ ಆಚರಿಸಲಾಗುತ್ತದೆ. ಕಳೆದ ವರ್ಷದ ಕಹಿ ಘಟನೆಗಳನ್ನು ಮರೆಯೋಣ ಮತ್ತು ಸಿಹಿ ಘಟನೆಗಳನ್ನು ಸವಿಯೋಣ ಎನ್ನುವ ಸಂದೇಶವನ್ನು ಯುಗಾದಿಯಂದು ಬೇವು ಬೆಲ್ಲ ಹಂಚುವುದು ಮೂಲ ಉದ್ದೇಶ. ಜೀವನದಲ್ಲಿ ಕಷ್ಟ ಸುಖಗಳು ಬರುತ್ತಲೇ ಇರುತ್ತವೆ. ಕಷ್ಟ ಬಂದಾಗ ಕುಗ್ಗದೆ ಸುಖ ಬಂದಾಗ ಹಿಗ್ಗದೆ ಸಮಾನವಾಗಿ ತೆಗೆದುಕೊಂಡು ಬಾಳಬೇಕೆಂಬುವ ಸಂಕೇತವನ್ನು ಯುಗಾದಿ ಹಬ್ಬ ಆಚರಣೆಯಿಂದ ತಿಳಿದುಕೊಳ್ಳಬಹುದಾಗಿದೆ. ಬೇವಿನ ಎಲೆ, ಹೂವು ಮತ್ತು ಬೆಲ್ಲದ ತುರಿ ಜೊತೆಗೆ ಸ್ವಲ್ಪ ತುಪ್ಪ ಹಾಕಿ ಕಲಿಸಿದ ಮಿಶ್ರಣವೇ ಬೇವು ಬೆಲ್ಲ ಮನೆಯಲ್ಲಿ ದೇವರಿಗೆ ಪೂಜೆ ಮಾಡಿ ಬೇವು ಬೆಲ್ಲ ಮನೆಯವರೆಲ್ಲ ತಿನ್ನುತ್ತಾರೆ. ಸಾಯಂಕಾಲ ಪಂಚಾಂಗ ಓದುವ ಕಾರ್ಯಕ್ರಮ. ಮನೆಯ ಹಿರಿಯರು ಅಥವಾ ದೇವಸ್ಥಾನದ ಅರ್ಚಕರು ಪಂಚಾಂಗ ಓದುವುದನ್ನು ಎಲ್ಲರೂ ಕೇಳಿಸಿಕೊಳ್ಳುತ್ತಾರೆ. ಈ ಬೇವು ಬೇಲ್ಲದ ಸಂಭ್ರಮವೇ ಯುಗಾದಿ ಹಬ್ಬ.

– ವಿ.ಎಂ.ಎಸ್.ಗೋಪಿ, ಲೇಖಕರು, ಸಾಹಿತಿಗಳು, ಬೆಂಗಳೂರು.

ಯುಗದ ಆದಿ (ಯುಗಾದಿ)

ಮಾನ್ಯರೆ,

ತರಗೆಲೆಯ ಸರಿಸಿ
ಚಿಗುರೆಲೆಯ ಧರಿಸಿ
ಚೈತ್ರದೊಸಗೆಯ ನಿಸರ್ಗವು ಸಾರಿಹುದು
ನವದೊಸಗೆಯಲ್ಲಿ ಪಸಿರ ಕುಪ್ಪಸವತೊಟ್ಟು
ಭೂಮಾತೆಯು ಸಿಂಗಾರ ಗೊಂಡಿಹಳು
ಹಳಮೆಯ ಮರಸಿ ಹೊಸತನವ ಪಸರಿಸಿ
ಏರಿಳಿತಗಳ ಸಮ್ಮಿಲನವ ಬೇವು ಬೆಲ್ಲದಲ್ಲಿರಿಸಿ
ಕಷ್ಟ ಸುಖದಲ್ಲಿ ಸಮನ್ವಯತೆಯಿಂದ ಚಲಿಸಿ
ದಿವ್ಯತೆಯ ಭವವ ಕಾಣಿರೆಂದು
ನವ ಹುರುಪಿನ ಚೈತನ್ಯವ
ಹೊಸ ವರುಷದ ಯುಗದ ಆದಿಗೆ
ಯುಗಾದಿಯ ಶುಭಾಶಯಗಳ ಸಾರುತ್ತಿದೆ
ಸರ್ವರಿಗೂ ಇಂದು ನನ್ನೊಡೆಯ ಗುರು ಮಹಾದೇವ

– ಬಾಗಳಿ ಮಹೇಶ್ (ಬಾಮ)

ರಕ್ಷಣಾ ಸಿಬ್ಬಂದಿ ಕಾರ್ಯಕ್ಕೆ ಪ್ರಶಂಸೆ

ಮಾನ್ಯರೆ,

ವಿಜಯಪುರ ಜಿಲ್ಲೆ ಇಂಡಿ ತಾಲೂಕು ಲಚಣ್ಯ ಗ್ರಾಮದಲ್ಲಿ ಆಕಸ್ಮಿಕವಾಗಿ ಕೊಳವೆ ಬಾವಿಗೆ ಬಿದ್ದಿದ್ದ 2 ವರ್ಷದ ಬಾಲಕನ ರಕ್ಷಣಾ ಕಾರ್ಯಾಚರಣೆ ಯಶಸ್ವಿಯಾಗಿದೆ. ಮಗುವಿನ ರಕ್ಷಣೆಗೆ ಹಗಲಿರುಳು ಎನ್ನದೆ ಶ್ರಮಿಸಿದ ಸಿಬ್ಬಂದಿ ಮತ್ತು ಸಾರ್ವಜನಿಕರ ಕಾರ್ಯಕ್ಷಮತೆ ಪ್ರಶಂಸನೀಯ. ಹಾಗೂ ಕಾರ್ಯಾಚರಣೆ ಯಶಸ್ವಿಯಾಗುವ ತನಕ ಸ್ಥಳದಲ್ಲೇ ಇದ್ದು ಸಹಕಾರ ನೀಡಿದ ಅಧಿಕಾರಿ ವರ್ಗಕ್ಕೂ ಧನ್ಯವಾದಗಳು.

ನೀರು ಬಾರದ ಅಥವಾ ಬತ್ತಿದ ಕೊಳವೆ ಬಾವಿಗಳನ್ನು ಮುಚ್ಚದಿದ್ದರೆ ಯಾರದೋ ಅಮಾಯಕ ಜೀವ ಬಲಿಯಾಗುತ್ತದೆ. ಇಂತಹ ಘಟನೆಗಳು ಕಾಲಕಾಲಕ್ಕೆ ಪುನರಾವರ್ತನೆಯಾಗುತ್ತಿದ್ದರೂ ಜನರು ಜಾಗೃತರಾಗದೆ ನಿರ್ಲಕ್ಷ್ಯ ತೋರುವುದು ಬೇಸರದ ಸಂಗತಿ. ಸಮಾಜ ಈ ಬಗ್ಗೆ ಇನ್ನಾದರೂ ಎಚ್ಚೆತ್ತುಕೊಳ್ಳಬೇಕು. ಸಾವು ಗೆದ್ದು ಬಂದ ಬಾಲಕ ಆದಷ್ಟು ಬೇಗ ಚೇತರಿಸಿಕೊಳ್ಳಲಿ.

–ಕೆ.ಎಸ್.ಸುರೇಶ್, ಶಿಕ್ಷಕರು, ಹೆಚ್ ಡಿ ಕೋಟೆ.

'ಮ್ಯಾಗ್ನಾ ಕಾರ್ಟ'

ಮಾನ್ಯರೆ,

ಇತ್ತೀಚೆಗೆ ನಗರದಲ್ಲಿ 'ವಚನ ಸಾಹಿತ್ಯ : ವರ್ತಮಾನದ ತಲ್ಲಣಗಳು' ಎಂಬ ಅರ್ಥಪೂರ್ಣ ವಿಚಾರ ಸಂಕಿರಣವೊಂದು ನಡೆಯಿತು. (ಶೀರ್ಷಿಕೆಯೇ ತಲ್ಲಣಗೊಳಿಸುವಂತಿದೆಯಲ್ಲವೆ?)

ತಲ್ಲಣ ಎಂದರೆ ಭಯ, ಆತಂಕ, ಪ್ರಶ್ನೆ ಇತ್ಯಾದಿ ನಾನಾರ್ಥಗಳಿವೆ. ಕನ್ನಡ ವಚನ ವಾಙ್ಮಯಕ್ಕೆ ತ್ರಿಕಾಲ ತಲ್ಲಣಗಳನ್ನೂ ಇಲ್ಲಗೈಯಬಲ್ಲ, ತಣ್ಣಗಾಗಿಸಬಲ್ಲ ತಾಕತ್ತಿದೆ! ಅದೊಂದು ವಿಶ್ವ ವಿಸ್ಮಯ ಎಂಬುದು ಹಾಗಿರಲಿ, ಅದು ಕರ್ನಾಟಕದ 'ಮ್ಯಾಗ್ನಾ ಕಾರ್ಟ' ಎಂಬುದು ಮುಖ್ಯವಾದ ಮಾತು.

ಏನೂ 'ಮಾಗ್ನಾ ಕಾರ್ಟ' ಎಂದರೆ? 1215 ರಲ್ಲಿ ಸುಮಾರು ವಚನಕಾರರ ಕಾಲ –ಇಂಗ್ಲೆಂಡಿನ ಜಾನ್ ದೊರೆಯಿಂದ ಆಂಗ್ಲ ಪ್ರಜೆಗಳು ಪಡೆದುಕೊಂಡ **"ವೈಯಕ್ತಿಕ ಮತ್ತು ರಾಜಕೀಯ ಸ್ವಾತಂತ್ರ್ಯದ ಮಹಾಸನ್ನದು"** ಮಹಾ ಸ್ವಾತಂತ್ರ್ಯಶಾಸನ; ಬ್ರಿಟಿಷ್ ಸಾಂವಿಧಾನಿಕತೆಯ ಬುನಾದಿ! ಅದು (ಪರಿಮಿತ) ಪ್ರಜಾಪ್ರಭುತ್ವ ಮತ್ತು ಸಂವಿಧಾನವೇ ಹೌದು. ಈ ಹೊತ್ತು ನಾವು ಸಂವಿಧಾನದ ಬಗೆಗೆ ಬಹಳ ಮಾತನಾಡುತ್ತೇವೆ; ಆದರೆ 'ಮ್ಯಾಗ್ನಾ ಕಾರ್ಟ'ವನ್ನು ಮರೆಯುತ್ತೇವೆ!

ಬಸವಣ್ಣನವರು ಒಂದೆಡೆ "ಕತ್ತೆ ಕುದುರೆಗೆ ಹುಟ್ಟಿದ ವೇಸರನಂತೆ" ಎಂಬ ಉಪಮೆಯೊಂದನ್ನು ಬಳಸುತ್ತಾರೆ. ಹೇಸರ ಕತ್ತೆಯೊಂದು ಸಂಕರ ಪ್ರಾಣಿ. (ಸ್ವತಃ ಅದು ಸಂತಾನಹೀನ). ಇಂದು ನಮ್ಮ ಸಮಾಜ ಇಂಥ ಸಂಕರ ಸ್ಥಿತಿಯಲ್ಲಿದೆ; ಅದು ಶಂಕರ ಸ್ಥಿತಿಗೆ ಸಂಕ್ರಮಿಸಬೇಕು; ಅವರ ಶವ ಸ್ಥಿತಿ ತೊಲಗಿ ಶಿರಸ್ಥಿತಿ ಸಿದ್ಧಿಸಬೇಕು! ನಮ್ಮಲ್ಲಿ ಜಾತೀಯತೆಯೊಂದು ಬೃಹತ್ ತಲ್ಲಣ; ಅದನ್ನು ನಾವು ದಾಟಿ ಮುನ್ನಡೆಯಬೇಕು; ಸ್ಥಾವರವಾಗಿರುವ ಸಮಾಜ ಜಂಗಮವಾಗಬೇಕು. 'ಮ್ಯಾಗ್ನಾಕಾರ್ಟ'ದ ಅನುಸಂಧಾನ ಮತ್ತು ಸಂವಿಧಾನ ಈ ದಿಶೆಯಲ್ಲಿ ನೆರವಾಗಬಲ್ಲುದು.

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

'ಮೈಸೂರು ಮಿತ್ರ' ಸೋಮವಾರದ (ಏ.8) ಸಂಚಿಕೆಯ 7ನೇ ಪುಟದಲ್ಲಿ 'ಪಾರ್ವತಿ ಪೂವಯ್ಯಗೆ ಸರಳ ಬದುಕಿನ ಹಿರಿಮೆ' ಶೀರ್ಷಿಕೆಯಡಿಯ ವರದಿಯಲ್ಲಿ **ಪಂದ್ಯಂಡ ಗಣಪತಿ** ಅವರು ಕೊಡಗಿನ 'ಗಾಂಧಿ' ಎಂದು ಖ್ಯಾತರಾಗಿದ್ದರು ಎಂಬುದನ್ನು **ಪಂದ್ಯಂಡ ಬೆಳ್ಳಿಯಪ್ಪ** ಎಂದು ಓದಿಕೊಳ್ಳುವುದು. **–ಸಂಪಾದಕ**



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಹೊಸ ಹಾದಿ....! ಯುಗಾದಿ



"ಈ ಜೀವನ ಬೇವು ಬೆಲ್ಲ
ಬಲ್ಲಾತಗೆ ನೋವೇ ಇಲ್ಲ
ಬಾ ಧೀರರಿಗೇ ಈ ಕಾಲ
ನಿನಗೆಂತು ಜಯ ನಿನಗಿಲ್ಲ ಭಯ ...."

ಎಷ್ಟೊಂದು ಮಹತ್ವದ ಚೆಂದದ ಸಾಲುಗಳಿವು. ಎಷ್ಟೊಂದು ಅರ್ಥಪೂರ್ಣ ಮಾತುಗಳಿವು. ಚಿತ್ರಗೀತೆಯೊಂದು ಇಡೀ ಬದುಕನ್ನು ಕಟ್ಟಿ ದರ್ಶಿಸುವ, ಸ್ಪರ್ಶಿಸುವ ಪರಿ ಅದ್ಭುತವೇ ಸರಿ! ಯುಗಾದಿಯ ಹಿನ್ನೆಲೆಯಲ್ಲಿ ಇವು ಇನ್ನಷ್ಟು ಮಹತ್ವ ಪಡೆದುಕೊಳ್ಳುತ್ತವೆ. ಬೇವು ದುಃಖವನ್ನು ಸೂಚಿಸಿದರೆ, ಬೆಲ್ಲ ಸುಖವನ್ನು ಸೂಚಿಸುತ್ತದೆ. ಜೀವನವು ಸಿಹಿ– ಕಹಿಗಳ ಮಿಶ್ರಣ. ಕಷ್ಟ– ಸುಖಗಳ ಸಮ್ಮಿಶ್ರಣ. ಬದುಕಿಗೆ ಬೇವೂ ಬೇಕು, ಬೆಲ್ಲವೂ ಬೇಕು. ಒಂದು ಬೇಕು ಒಂದು ಬೇಡ ಅಂದ್ರೆ ಹೇಗೆ? ಎಲ್ಲದರ ಸಂಗಮವೇ ಪರಿಪೂರ್ಣ ಜೀವನ. ಯುಗಾದಿ ಹಬ್ಬದಂದು ಸಾಂಕೇತಿಕವಾಗಿ ಪ್ರಸಾದ ರೂಪವಾಗಿ ಬೇವು– ಬೆಲ್ಲವನ್ನು ತಿನ್ನುವಾಗ "ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯಚ ಸರ್ವಾರಿಷ್ಟ ವಿನಾಶಾಯ ನಿಂಬಕಂ ದಳ ಭಕ್ಷಣಮ್" ಬೇವಿನ ಚಿಗುರನ್ನು ಸಣ್ಣ ಸಂಗತಿಯಲ್ಲ. ಅದರಿಂದ ಆರೋಗ್ಯ– ಆಯುಷ್ಯ ವೃದ್ಧಿಸುತ್ತದೆ. ಅಷ್ಟು ಮಾತ್ರವಲ್ಲ ಶರೀರ ವಜ್ರದಂತೆ ಬಲಗೊಳ್ಳುತ್ತದೆ. ಸಮಸ್ತ ಸಂಪತ್ತನ್ನೂ ತರುತ್ತದಲ್ಲದೆ ಎಲ್ಲ ಅನಿಷ್ಟಗಳನ್ನೂ ನಿವಾರಿಸುತ್ತದೆ.

ಯುಗಯುಗಗಳಲ್ಲಿ ಸಾಗಿ ಬರುತ್ತಿರುವ ಈ ಕತ್ತಲು– ಬೆಳಕುಗಳ ಚಕ್ರ ಬೇವು–ಬೆಲ್ಲ, ಕಷ್ಟ– ಸುಖಗಳ ಏರಿಳಿತಗಳು ನಮ್ಮ ಕಣ್ಣುಗಳಿಗೆ ಅಷ್ಟು ಸುಲಭವಾಗಿ ಕಾಣುವಂಥದ್ದಲ್ಲ. ಆದರೆ ಈ ಪಾಠವನ್ನು ಪ್ರಕೃತಿ ನಮಗೆ ಬಹಳ ಸುಲಭವಾಗಿ ಕಲಿಸಬಲ್ಲದು, ಕಾಣಿಸಬಲ್ಲದು. ಇಂದು ಎಲೆ, ಹೂವು, ಕಾಯಿಗಳಿಂದ ಹಸಿರಿನೊಡನೆ ನಳನಳಿಸುತ್ತಿರುವ ಮರ ಕಾಲಕ್ರಮೇಣ ತನ್ನ ಸೊಬಗನ್ನು ಕಳೆದುಕೊಳ್ಳುತ್ತದೆ. ಬೆತ್ತಲಾಗಿ ನಿಲ್ಲುತ್ತದೆ. ಆದರೆ ಅದು ಪುನಃ ತನ್ನ ವೈಭವವನ್ನು ಪಡೆದುಕೊಳ್ಳುತ್ತದೆ. ದಕ್ಕಿಸಿಕೊಳ್ಳುತ್ತದೆ. ಹಸಿರು ಚಿಗುರೊಡೆದು ಎಲೆಗಳು ಮೂಡಿ ಕಾಯಿ, ಹಣ್ಣುಗಳಿಂದ ತುಂಬಿಕೊಳ್ಳುತ್ತದೆ. ನಮ್ಮ ಜೀವನವೂ ಹೀಗೆಯೇ ಸುಖ ದುಃಖಗಳ ಚಕ್ರದಲ್ಲಿ ಬಂಧಿಯಾಗಿರುತ್ತದೆ. ಆದ್ದರಿಂದ ಸುಖ ಬಂದಾಗ ಹಿಗ್ಗದೆ ದುಃಖ ಬಂದಾಗ ಕುಗ್ಗದೆ ಎಂದಿಗೂ ಯಾವಾಗಲೂ ಧೈರ್ಯವಾಗಿ ಹೆಜ್ಜೆ ಇಡುವುದರಲ್ಲಿಯೇ ಜೀವನದ ಸಾರ್ಥಕತೆ ಅಡಗಿದೆ, ಇದೇ ಯುಗಾದಿಯ ವಿವೇಕ ಹಾಗೂ ವಿಶಿಷ್ಟತೆ.

"ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ, ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ..." ವರಕವಿ ಬೇಂದ್ರೆ ಅವರ ಈ ಹೊನ್ನುಡಿಗಳಂತೆ ಯುಗಾದಿ ಮತ್ತೆ ಬಂದಿದೆ. ಪ್ರತಿವರ್ಷ ಬರುತ್ತಲೇ ಇರುತ್ತದೆ. ಯುಗಾದಿ ಎಂದರೆ ಹಾಗೇನೆ. ಹಣ್ಣೆಲೆ ಉದುರಿ ಚಿಗುರೆಲೆ ನಳನಳಿಸುವ ಸಂಭ್ರಮ. ಭೂ ಮಾತೆ ಹಸಿರು ಮುಕ್ಕಳಿಸುವ ಮಧುರ ಕ್ಷಣ. ಮಧು ಚೆಲ್ಲುವ ಹೂಗಳ ಮೇಲೆ ಝೇಂಕರಿಸುವ ಜೇನ್ದುಂಬಿಗಳ ಸಡಗರ. ನೆತ್ತಿಯ ಮೇಲೆ ಸುಡುವ ಸೂರ್ಯನಿದ್ದರೂ, ತಂಪೆರೆವ ತಂಗಾಳಿಯ ನವೋಲ್ಲಾಸ. ಮುಂಬರುವ ಎಲ್ಲ ಹಬ್ಬಗಳಿಗೂ ಮುನ್ನುಡಿ ಬರೆವ ಕಾಲ. ಕಷ್ಟ–ಸುಖಗಳೆರಡನ್ನೂ ಸಮನಾಗಿ ಸ್ವೀಕರಿಸುವುದರ ಸಂಕೇತವಾಗಿ ಬೇವು–ಬೆಲ್ಲವನ್ನು ಮೆಲ್ಲುವ ದಿನ. ವರುಷಕ್ಕೊಂದು ಹೊಸ ಜನ್ಮ ಪಡೆವ ಪ್ರಕೃತಿ ದೇವಿಗೆ ನಮಿಸುವ ದಿನ. ಇದೆಲ್ಲಕ್ಕೂ ಒಂದೇ ಹೆಸರು ಅದೇ ಯುಗಾದಿ ಅರ್ಥಾತ್ ಉಗಾದಿ.ನಮ್ಮ ಎಲ್ಲ ಧಾರ್ಮಿಕ ಆಚರಣೆ ಹಬ್ಬ–ಹರಿದಿನಗಳಿಗೆ ಪ್ರೇರಣೆಯನ್ನು ನಿಸರ್ಗದಲ್ಲಿ ಕಾಣಬಹುದು. ಹಾಗೆಯೇ ಯುಗಾದಿ ಹಬ್ಬದ ಪ್ರೇರಣೆಗೆ ಮೂಲ ನಿಸರ್ಗವೇ ಆಗಿದೆ.

ವರ್ಷದ ಮೊದಲ ದಿನವನ್ನು ಹೊಸ ವರ್ಷದ ಹಬ್ಬವಾಗಿ ಆಚರಿಸಿ ಸಂಭ್ರಮ ಪಡುವ ಸಂಪ್ರದಾಯ ಜಗತ್ತಿನೆಲ್ಲೆಡೆ ಬಹು ಹಿಂದಿನಿಂದಲೂ ಉಂಟು. ಜನವರಿ ತಿಂಗಳ ಮೊದಲ ದಿನವನ್ನು ವರ್ಷಾರಂಭವೆಂದು ರೋಮನ್ನರು, ಆಂಗ್ಲರು ಸೇರಿದಂತೆ ಪಾಶ್ಚಿಮಾತ್ಯರೆಲ್ಲರೂ ಆಚರಿಸುತ್ತಾರೆ. ಯುಗಾದಿ ಎನ್ನುವುದು ಯುಗದ ಆದಿ. ಯುಗವೆಂದರೆ ಸೃಷ್ಟಿಯ ಕಾಲಮಾನ ಅರ್ಥಾತ್ ಹೊಸ ವರ್ಷ. ಆದಿ ಎಂದರೆ ಆರಂಭ ಅಥವಾ ವರ್ಷದ ಪ್ರಾರಂಭದ ದಿನ. ಅಂದರೆ ಹೊಸ ವರ್ಷದ ಪ್ರಾರಂಭದ ದಿನವೇ ಯುಗಾದಿ. ಹಲವು ಪರಂಪರೆಗಳ ಆಗಮದ ಕಾಲವಾಗಿ ಯುಗಾದಿ ಭಾರತೀಯರಲ್ಲಿ ರೂಢಿಗೆ ಬಂದಿದೆ. ಉತ್ತರ ಭಾರತದಲ್ಲಿ ವಿಕ್ರಮ ಶಕೆಯ ಆರಂಭದ ದಿನ ಕಾರ್ತಿಕ ಶುದ್ಧ ಪಾಡ್ಯವನ್ನು ಯುಗಾದಿ ಹಬ್ಬವಾಗಿ ಆಚರಿಸುತ್ತಾರೆ. ಜ್ಯೋತಿಷ್ಯ ಶಾಸ್ತ್ರದಲ್ಲಿ ಮೂರು ರೀತಿಯ ಲೆಕ್ಕಾಚಾರಗಳುಂಟು. ಅವುಗಳೆಂದರೆ 1. **ಬಾರ್ಹಸ್ಪತ್ಯಮಾನ,** 2. **ಚಾಂದ್ರಮಾನ,** 3. **ಸೌರಮಾನ.** ಉತ್ತರ ಭಾರತದವರು ಬಾರ್ಹಸ್ಪತ್ಯಮಾನದಲ್ಲಿ ಯುಗಾದಿಯನ್ನು ಆಚರಿಸುತ್ತಾರೆ. ವಿಶೇಷವಾಗಿ ದಕ್ಷಿಣ ಭಾರತದ ರಾಜ್ಯಗಳಿಗೆ ಯುಗಾದಿ ಅತ್ಯಂತ ವಿಜೃಂಭಣೆ ಹಬ್ಬವಾಗಿದೆ. ನಮ್ಮಲ್ಲಿ ಯುಗಾದಿ ಹಬ್ಬವನ್ನು ಎರಡೂ ರೀತಿಯಲ್ಲಿ ಆಚರಿಸುವ ಪದ್ಧತಿಯಿದೆ. ಒಂದು ಚಾಂದ್ರಮಾನ ಯುಗಾದಿ ಮತ್ತೊಂದು ಸೌರಮಾನ ಯುಗಾದಿ. ಹೆಸರುಗಳೇ ಹೇಳುವಂತೆ ಮೊದಲನೆಯದು ಚಂದ್ರನನ್ನೂ ಎರಡನೆಯದು ಸೂರ್ಯನನ್ನೂ ಅವಲಂಬಿಸಿವೆ. ಚಂದ್ರನ ಚಲನೆಯನ್ನು ಅನುಸರಿಸಿ ಅಮಾವಾಸ್ಯೆ–ಹುಣ್ಣಿಮೆಗಳ ಆಧಾರದ ಮೇಲೆ ಮಾಸ ಗಣನೆ ಮಾಡುವ ಪದ್ಧತಿಗೆ ಚಾಂದ್ರಮಾನ ಎಂದು ಹೆಸರು. ತಿಂಗಳು ಹೆಸರು ಬಂದಿರುವುದೂ ಚಂದ್ರನಿಂದಲೇ. ಚಂದ್ರನ ಚಲನೆಯಲ್ಲಿ ವ್ಯತ್ಯಾಸವಾಗುವುದರಿಂದ ಚಾಂದ್ರಮಾನ ಯುಗಾದಿ ನಿರ್ದಿಷ್ಟ ಸಮಯದಲ್ಲಿ ಬರುವುದಿಲ್ಲ. ಮೇಷ ರಾಶಿಗೆ ಸೂರ್ಯ ಪ್ರವೇಶಿಸುವ ದಿನ ಸೌರಮಾನ ಯುಗಾದಿಯನ್ನು ಆಚರಿಸಲಾಗುತ್ತದೆ. ಭೂಮಿಯ ಚಲನೆಯಲ್ಲಿ ಹೆಚ್ಚಿನ ವ್ಯತ್ಯಾಸ ಇಲ್ಲದೆ ಇರುವುದರಿಂದ ಸಾಮಾನ್ಯವಾಗಿ ನಿಗದಿತ ಸಮಯದಲ್ಲಿ ಅಂದರೆ ಪ್ರತಿ ವರ್ಷ ಏ.14ರಂದು ಸೌರಮಾನ ಯುಗಾದಿ ಬರುತ್ತದೆ.

> **ಯುಗಯುಗಗಳಿಂದಲೂ ಅತ್ಯಂತ ಮಹತ್ವದ ಕಾರ್ಯಗಳು ಈ ಶುಭ ದಿವಸವೇ ನಡೆದಿವೆ ಎಂದು ಶಾಸ್ತ್ರ ಪುರಾಣಗಳೂ ಹೇಳುತ್ತವೆ. ಹಾಗಾಗಿ ಈಗಲೂ ಸಹ ಯುಗಾದಿಯಂದು ಹೊಸ ಕಾರ್ಯ ಚಟುವಟಿಕೆಗಳಿಗೆ, ಹೊಸ ಪದಾರ್ಥಗಳ ಖರೀದಿಗೆ, ಅವರವರ ಶಕ್ತ್ಯಾನುಸಾರ ಸಣ್ಣ ವ್ಯವಹಾರದಿಂದ ಹಿಡಿದು ದೊಡ್ಡ ದೊಡ್ಡ ವ್ಯವಹಾರಗಳಿಗೆ ನಮ್ಮಲ್ಲಿ ನಾಂದಿ ಹಾಕಲಾಗುತ್ತದೆ. ಅಕ್ಷರಮಟ್ಟಿಗೆ ಯುಗಾದಿ ಜನರಲ್ಲಿ ನವ ಚೈತನ್ಯ ತುಂಬುತ್ತದೆ. ಯುಗಾದಿ ಹಬ್ಬವು ಹಲವು ಪರಂಪರೆಗಳ ಹಬ್ಬಗಳ ಪ್ರಾರಂಭಕ್ಕೆ ಮುನ್ನುಡಿ ಬರೆವ ದಿನವೂ ಹೌದು.**

ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಚಾಂದ್ರಮಾನ ಯುಗಾದಿ ಆಚರಿಸುವ ಪದ್ಧತಿ ಇದೆ. ತಮಿಳುನಾಡು, ಕೇರಳ ಮತ್ತು ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಸೌರಮಾನ ಯುಗಾದಿ ರೂಢಿಯಲ್ಲಿದೆ. ಸಾಮಾನ್ಯವಾಗಿ ಕರ್ನಾಟಕದಲ್ಲಿ ಪ್ರತಿವರ್ಷದ ಚೈತ್ರಮಾಸದಲ್ಲಿ ಬರುವ ಮೊದಲ ದಿನವನ್ನು ಸಂವತ್ಸರಾದಿ ಪಾಡ್ಯಮಿ ಎಂದು ಪರಿಗಣಿಸಿ ಯುಗಾದಿಯನ್ನು ವರ್ಷದ ಮೊದಲ ಹಬ್ಬವಾಗಿ ಚೈತ್ರಮಾಸ ಶುದ್ಧಪಾಡ್ಯಮಿಯಂದು ಆಚರಿಸಲಾಗುತ್ತದೆ. ಈ ಹಬ್ಬವನ್ನು ಆಂಧ್ರದವರು ಉಗಾದಿ ಎನ್ನುತ್ತಾರೆ. ಮಹಾರಾಷ್ಟ್ರೀಯರು ಕೂಡ ಯುಗಾದಿ ಎಂದೇ ಹೇಳುತ್ತಾರೆ. ಸೌರಮಾನ ಯುಗಾದಿ ಆಚರಿಸುವ ಕೇರಳದವರು ಯುಗಾದಿಯನ್ನು 'ವರ್ಷ ಪುರಪ್ಪು' ಎಂದು ಆಚರಿಸಿದರೆ, ಕೆಲವರು ಶ್ರೀ ಕೃಷ್ಣನ ಪೂಜೆ ಮಾಡುತ್ತಾ 'ವೊಲ್ಲವರ್ಷ' ಎಂದೂ ಆಚರಿಸುತ್ತಾರೆ.

ಯುಗಾದಿಗೆ ಗುಡಿಪಾಡ್ಯ, ಪಾಡ್ಯದ ಗುಡಿ ಎಂಬ ಹೆಸರುಗಳೂ ಉಂಟು. ಗುಡಿ ಎಂದರೆ ಬಾವುಟ ಎಂದರ್ಥ. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಹಾಗೂ ನಮ್ಮಲ್ಲೂ ಹಲವು ಕಡೆ ಮನೆ ಮನೆಯ ಮುಂದೆ 'ಪಾಡ್ಯದ ಗುಡಿ' ಕಟ್ಟುತ್ತಾರೆ. ಪಾಡ್ಯದ ಗುಡಿ ಎಂದರೆ ಉದ್ದವಾದ ಕೋಲೊಂದರ ತುದಿಗೆ ಹೊಸಬಟ್ಟೆಯನ್ನು ಕಟ್ಟಿ ಅದರ ಮೇಲೆ ಹಿತ್ತಾಳೆ ಪಾತ್ರೆಯೊಂದನ್ನು ಬೋರಲು ಹಾಕಿರುತ್ತಾರೆ. ಯುಗಾದಿ ದಿನ ಅದಕ್ಕೆ ಪೂಜೆ ಮಾಡಿ ಪ್ರತಿಯೊಂದು ಮನೆ ಮುಂದೆ ಅದನ್ನು ಮೇಲಕ್ಕೆ ಏರಿಸುತ್ತಾರೆ. ಇದನ್ನು 'ಧ್ವಜ' ಎಂದೂ ಕರೆಯುತ್ತಾರೆ. ಇದೇ ಯುಗಾದಿಯ ಧ್ವಜಾರೋಹಣ. ಮಹಾಭಾರತದಲ್ಲೂ ಇದರ ಬಗ್ಗೆ ಉಲ್ಲೇಖವಿದೆ.

ವರ್ಷದಲ್ಲಿ ಬರುವ ಮೂರೂವರೆ ದಿನಗಳ ಶುಭ ಮುಹೂರ್ತ ಜ್ಯೋತಿಷ್ಯ ಶಾಸ್ತ್ರದಲ್ಲಿ ಅತ್ಯಂತ ಶ್ರೇಷ್ಠವಾದದ್ದು. ಅವುಗಳೆಂದರೆ ಯುಗಾದಿ, ಅಕ್ಷಯ ತದಿಗೆ, ವಿಜಯದಶಮಿ ಮತ್ತು ಬಲಿಪಾಡ್ಯಮಿಯ ಅರ್ಧ ದಿವಸ. ಈ ಮೂರೂವರೆ ಶುಭ ಘಳಿಗೆಯಲ್ಲಿ ನಮಗೆ ಯುಗಾದಿಯೇ ವರ್ಷದ ಪ್ರಾರಂಭದ ಶುಭ ದಿನವಾಗಿದೆ. ಈ ದಿವಸ ಏನೇ ಕೆಲಸ ಕಾರ್ಯಗಳನ್ನು ಕೈಗೊಂಡರೂ, ಯಾವುದೇ ಉದ್ದಿಮೆಗಳಲ್ಲಿ ಯೋಜನೆಗಳನ್ನು ಆರಂಭಿಸಿದರೂ ಯಶಸ್ಸು ಕಟ್ಟಿಟ್ಟಬುತ್ತಿ ಎಂಬ ನಂಬಿಕೆ ಇದೆ. ಯುಗಯುಗಗಳಿಂದಲೂ ಅತ್ಯಂತ ಮಹತ್ವದ ಕಾರ್ಯಗಳು ಈ ಶುಭ ದಿವಸವೇ ನಡೆದಿವೆ ಎಂದು ಶಾಸ್ತ್ರ ಪುರಾಣಗಳೂ ಹೇಳುತ್ತವೆ. ಹಾಗಾಗಿ ಈಗಲೂ ಸಹ ಯುಗಾದಿಯಂದು ಹೊಸ ಕಾರ್ಯ ಚಟುವಟಿಕೆಗಳಿಗೆ, ಹೊಸ ಪದಾರ್ಥಗಳ ಖರೀದಿಗೆ, ಅವರವರ ಶಕ್ತ್ಯಾನುಸಾರ ಸಣ್ಣ ವ್ಯವಹಾರದಿಂದ ಹಿಡಿದು ದೊಡ್ಡ ದೊಡ್ಡ ವ್ಯವಹಾರಗಳಿಗೆ ನಮ್ಮಲ್ಲಿ ನಾಂದಿ ಹಾಕಲಾಗುತ್ತದೆ. ಅಕ್ಷರಮಟ್ಟಿಗೆ ಯುಗಾದಿ ಜನರಲ್ಲಿ ನವ ಚೈತನ್ಯವನ್ನು ತುಂಬುತ್ತದೆ.

ಯುಗಾದಿ ಹಬ್ಬವು ಹಲವು ಪರಂಪರೆಗಳ ಹಬ್ಬಗಳ ಪ್ರಾರಂಭಕ್ಕೆ ಮುನ್ನುಡಿ ಬರೆವ ದಿನವೂ ಹೌದು. ಬ್ರಹ್ಮದೇವನು ಈ ಜಗತ್ತನ್ನು ಚೈತ್ರಮಾಸದ ಶುಕ್ಲಪಕ್ಷದ ಮೊದಲನೆಯ ದಿನದ ಸೂರ್ಯೋದಯ ಕಾಲಕ್ಕೆ ಸೃಷ್ಟಿಸಿದ. ಬ್ರಹ್ಮದೇವ ಸೃಷ್ಟಿಯನ್ನು ಆರಂಭಿಸಿದ ದಿನವೇ ಯುಗಾದಿಯಾಗಿದೆ. ಅಂದೇ ಅವನು ಗ್ರಹ, ನಕ್ಷತ್ರ, ಮಾಸ, ಋತು, ವರ್ಷಾಧಿಪತಿಯನ್ನು ಸೃಷ್ಟಿಸಿ ಕಾಲಗಣನೆ ಆರಂಭಿಸಿದನೆಂದು ಹೇಮಾದ್ರಿ ಪಂಡಿತನ 'ಚತುರ್ವರ್ಗ ಚಿಂತಾಮಣಿ' ಎಂಬ ಪುರಾಣ ಗ್ರಂಥದಲ್ಲಿ ಹೇಳಲಾಗಿದೆ. ಶ್ರೀರಾಮನು ರಾವಣನನ್ನು ಸಂಹರಿಸಿ ಅಯೋಧ್ಯೆಗೆ ಬಂದು ರಾಮರಾಜ್ಯವಾಳಲು ಪ್ರಾರಂಭಿಸಿದ್ದು ಈ ಯುಗಾದಿಯಂದೆ. ಶಾಲಿವಾಹನ ಶಕೆ ಆರಂಭವಾದದ್ದು ಸಹ ಈ ಯುಗಾದಿ ದಿವಸವೆ. ಶಾಲಿವಾಹನ ಆ ದಿನ ಪಟ್ಟಾಭಿಷಕ್ತನಾದನೆಂದೂ, ಆದ್ದರಿಂದಾಗಿ ಈ ಚರಿತ್ರೆ ಕಾಲ 'ಶಾಲಿವಾಹನ' ಶಕ ಆಯಿತೆಂದೂ ಹೇಳಲಾಗುತ್ತದೆ. ಕ್ರಿಸ್ತ ವರ್ಷ ಆರಂಭವಾದ ಎಪ್ಪತ್ತೆಂಟು ವರ್ಷಗಳ ನಂತರ ಶಾಲಿವಾಹನ ಶಕೆ ಆರಂಭವಾಗುತ್ತದೆ. ದಕ್ಷಿಣ ಭಾರತದಲ್ಲಿ ಈ ಶಕೆ ಬಳಕೆಯಲ್ಲಿದೆ. ಭಾರತೀಯ ಪಂಚಾಂಗಗಳು ಈ ಶಕೆಯನ್ನು ಪ್ರಸ್ತಾಪಿಸುತ್ತವೆ. ಯುಗಾದಿ ಹಬ್ಬವು ಜೈನರಿಗೂ ಮಹತ್ವದ ಪವಿತ್ರದಿನವಾಗಿದೆ. ಏಕೆಂದರೆ ಮಲ್ಲಿನಾಥನೆಂಬ 14ನೇ ತೀರ್ಥಂಕರ ಹುಟ್ಟಿದ್ದು ಯುಗಾದಿಯಂದೇ. ಹಾಗೆಯೇ ಆದಿ ತೀರ್ಥಂಕರನ ಮಗ ಭರತ ಚಕ್ರವರ್ತಿಯೂ ದಿಗ್ವಿಜಯ ಸಾಧಿಸಿದ ದಿನವಿದು.

ವೇದಗಳ ಕಾಲದಿಂದಲೂ ಯುಗಾದಿಯ ಹಿರಿಮೆ ಗರಿಮೆಗಳು ಅನುರಣಿಸಿಕೊಂಡು ಬಂದಿವೆ. ಅಥರ್ವಣವೇದ, ಶತಪಥ ಬ್ರಾಹ್ಮಣ, ಧರ್ಮಸಿಂಧು, ನಿರ್ಣಯ ಸಿಂಧು ಮುಂತಾದ ಧರ್ಮಶಾಸ್ತ್ರಗ್ರಂಥಗಳಲ್ಲೂ ಯುಗಾದಿಯನ್ನು ಅಭೂತಪೂರ್ವವಾಗಿ ವರ್ಣಿಸಲಾಗಿದೆ. ಬ್ರಹ್ಮಾಂಡ ಮತ್ತು ಮಹಾಭಾರತಗಳಲ್ಲೂ ಯುಗಾದಿ ಪ್ರಸ್ತಾಪಗೊಂಡಿದೆ.

ಯುಗಾದಿಯಂದು ಸೂರ್ಯೋದಯಕ್ಕೂ ಮುನ್ನ ಮುಂಜಾನೆ ಎದ್ದು ಮಂಗಳ ಸ್ನಾನ ಮಾಡಿ ಶ್ರೀರಾಮನನ್ನು ಸ್ಮರಣೆ ಮಾಡಿ ಹೊಸಬಟ್ಟೆ ತೊಟ್ಟು ಮನೆಯನ್ನೆಲ್ಲ ಮಾವು–ಬೇವು ಎಲೆಗಳ ತೋರಣದಿಂದ ಸಿಂಗರಿಸಿ ಹೊಸ ವರ್ಷವನ್ನು ಬರಮಾಡಿಕೊಳ್ಳಲಾಗುತ್ತದೆ. ಬಾವುಟ ಹಾರಿಸುವುದು, ಬೇವು–ಬೆಲ್ಲ ತಿನ್ನುವುದು, ಪಂಚಾಂಗ ಶ್ರವಣ, ವಸಂತ ನವರಾತ್ರಿ ಆರಂಭ ಇಷ್ಟದೇವತಾ ಪೂಜೆಯ ಜೊತೆಗೆ ಸೃಷ್ಟಿಕರ್ತನಾದ ಬ್ರಹ್ಮದೇವನ, ಕಾಲಪುರುಷನ ಮತ್ತು ವರ್ಷಾಧಿಪತಿಯ ಆರಾಧನೆ, ಚಂದ್ರದರ್ಶನ ಇವು ಯುಗಾದಿಯ ವೈಶಿಷ್ಟ್ಯ. ಯುಗಾದಿಯಲ್ಲಿ ಬೇವು–ಬೆಲ್ಲಕ್ಕೆ ತುಸು ಹೆಚ್ಚಿನ ಮಹತ್ವ ಉಂಟು. ಹೋಳಿಗೆ ಸೇರಿದಂತೆ ಹಬ್ಬದ ಸಿಹಿ ಅಡುಗೆ ಎಷ್ಟೇ ಇದ್ದರೂ ಸಹ ಬೇವು–ಬೆಲ್ಲ ಸೇವಿಸಿದಾಗಲೇ ಯುಗಾದಿ ಸಾರ್ಥಕವಾಗುವುದೆಂಬ ಭಾವ ಎಲ್ಲರದು. ಕಷ್ಟ–ಸುಖಗಳೆರಡರ ಸಂಕೇತವೇ ಬೇವು–ಬೆಲ್ಲ. ಜೀವನದಲ್ಲಿ ಎರಡನ್ನೂ ಸಮನಾಗಿ ಸ್ವೀಕರಿಸಿ ಬದುಕಿನ ಬಂಡಿ ನೂಕಬೇಕೆಂಬುದು ಯುಗಾದಿಯ ಆಶಯವಾಗಿದೆ. "ಜೀವನವೆಲ್ಲಾ ಬೇವು–ಬೆಲ್ಲ. ಎರಡೂ ಸವಿದವನೇ ಕವಿಮಲ್ಲ" ಎಂದು ಯುಗದ ಕವಿ ಕುವೆಂಪು ಅವರು ಯುಗಾದಿ ಮತ್ತು ಬೇವು–ಬೆಲ್ಲದ ಮಹತ್ವವನ್ನು ಸಾರಿದ್ದಾರೆ.

ಸಾಮಾನ್ಯವಾಗಿ ಯುಗಾದಿಯಂದು ಜ್ಯೋತಿಷಿಗಳಿಂದ ಹೊಸ ವರ್ಷದ ಫಲಗಳನ್ನು ಕೇಳುವುದು ರೂಢಿಯಲ್ಲಿದೆ. ವರ್ಷದ ಫಲಾಫಲಗಳನ್ನು ತಿಳಿದುಕೊಳ್ಳುವ ಕುತೂಹಲ ಎಲ್ಲರಿಗೂ ಇರುತ್ತದೆ. ಹಾಗಾಗಿ ಯುಗಾದಿ ಸಂದರ್ಭದಲ್ಲಿ ಜ್ಯೋತಿಷಿಗಳಿಗೆ ಬಹಳ ಬೇಡಿಕೆಗಳಿರುತ್ತವೆ. ಅಷ್ಟೇ ಅಲ್ಲ, ಜ್ಯೋತಿಷ್ಯಕ್ಕೆ ಸಂಬಂಧಿಸಿದಂತೆ ಪ್ರತಿಯೊಂದಕ್ಕೂ ಅಂದು ಡಿಮ್ಯಾಂಡ್ ಇದ್ದೇ ಇರುತ್ತದೆ. ಅಂತೆಯೇ ಯುಗಾದಿಯಂದು ಜೂಜು ಆಡುವುದು ಬಹಳಷ್ಟು ಕಡೆ ರೂಢಿಯಲ್ಲಿದೆ. ಎಂದೂ ಜೂಜನ್ನೇ ಆಡದವರು ಕೂಡ ಅಂದು ಜೂಜಾಡಿ ತಮ್ಮ ಅದೃಷ್ಟವನ್ನು ಪರೀಕ್ಷಿಸಿಕೊಳ್ಳುತ್ತಾರೆ. ಕೆಲವು ಕಡೆಯಂತೂ ಮನೆಯವರೆಲ್ಲ, ಊರಿನವರೆಲ್ಲ ಒಂದು ಕಡೆ ಸೇರಿ ಜ್ಯೋತಿಷ್ಯ ಶಾಸ್ತ್ರದಲ್ಲಿ ಪಾರಂಗತರಾದ ಪಂಡಿತರನ್ನು ಆಹ್ವಾನಿಸಿ ಅವರಿಗೆ ಪಾದಪೂಜೆ ಮಾಡಿ ಸನ್ಮಾನಿಸಿ ಪವಿತ್ರ ಸ್ಥಳಗಳಲ್ಲಿ, ಭಕ್ತಿಯ ತಾಣಗಳಲ್ಲಿ, ದೇವಾಲಯಗಳಲ್ಲಿ ಸಂವತ್ಸರ ಕಾಲದಲ್ಲಿ ನಡೆಯುವ ಫಲಿತಾಂಶಗಳನ್ನು ಮೊದಲೇ ತಿಳಿದುಕೊಳ್ಳುತ್ತಾರೆ. ಇದನ್ನು 'ಪಂಚಾಂಗ ಶ್ರವಣ' ಎನ್ನಲಾಗುತ್ತದೆ. ಈ ಪಂಚಾಂಗ ಶ್ರವಣದಲ್ಲಿನ ಅಂಗಗಳಿಂದ ಅಂದರೆ ತಿಥಿಯಿಂದ ಸಂಪತ್ತು, ವಾರದಿಂದ ಆಯಸ್ಸು, ನಕ್ಷತ್ರದಿಂದ ಪಾಪನಾಶ, ಯೋಗದಿಂದ ರೋಗ ದೂರ, ಕರಣದಿಂದ ಗಂಗಾಸ್ನಾನ ಮಾಡಿದಷ್ಟು ಪುಣ್ಯ ಲಭಿಸುತ್ತದೆಂದು ಹೇಳುತ್ತಾರೆ.

ಯುಗಾದಿಯ ಮಾರನೆ ದಿನ 'ವರ್ಷ ತೊಡಕು' ಆಚರಿಸಲಾಗುತ್ತದೆ. ಇದರ ವಿಶೇಷವೆಂದರೆ ತಮ್ಮನ್ನು ತಾವು ಸತ್ಕಾರ್ಯಗಳಿಗೆ ಅರ್ಪಿಸಿಕೊಳ್ಳುವ ದಿನವಿದು. ಅಷ್ಟೇ ಅಲ್ಲ ಇಡೀ ವರ್ಷದ ತೊಡಕುಗಳನ್ನೆಲ್ಲಾ ನಿವಾರಿಸಿಕೊಳ್ಳಲು ದೇವರಲ್ಲಿ ಮೊರೆಯಿಡುವ ದಿನವಿದು. ಹಾಗಾಗಿ ಯುಗಾದಿ ದಿನದಷ್ಟೇ ಈ ದಿನಕ್ಕೂ ಬಹಳ ಮಹತ್ವವಿದೆ. ಅಂದು ವಿವಿಧ ಬಗೆಯ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ರೀತಿಯ ಸ್ಪರ್ಧೆಗಳು ಜರುಗುತ್ತವೆ. ಅಂದು ಯಾರೇ ಆಗಲಿ ಏನೇನು ಒಳ್ಳೆಯ ಕೆಲಸಗಳನ್ನು ಮಾಡುತ್ತಾರೋ ಅದನ್ನು ವರ್ಷಾಂತ್ಯದವರೆಗೂ ಮಾಡುತ್ತಾರೆಂಬ ನಂಬಿಕೆ ಬಹಳ ಜನರಲ್ಲಿದೆ. ಹಾಗೆಯೇ ಅಂದು ಯಾರಿಗೆ ಏನೇನು ಲಭಿಸುತ್ತದೋ ಅದು ವರ್ಷಪೂರ್ತಿ ಲಭಿಸುತ್ತದೆಂಬ ನಂಬಿಕೆ ಪ್ರಚಲಿತದಲ್ಲಿದೆ. ಹೊಸ ಅಳಿಯನನ್ನು ಹಬ್ಬಕ್ಕೆ ಆಹ್ವಾನಿಸಿ ಸತ್ಕರಿಸುವ ಸಂಪ್ರದಾಯವೂ ಯುಗಾದಿಯಲ್ಲಿದೆ. ಎಷ್ಟೋ ಕಡೆ ಯುಗಾದಿಯನ್ನು ಅಳಿಯಂದಿರ ಹಬ್ಬವೆನ್ನುವುದೂ ಉಂಟು. ಅಷ್ಟೇ ಅಲ್ಲದೆ ಅಕ್ಕ ತಂಗಿಯರು, ಅಣ್ಣ ತಮ್ಮಂದಿರನ್ನು ತಮ್ಮ ಮನೆಗಳಿಗೆ ಬರಮಾಡಿಕೊಂಡು ಹಬ್ಬದ ಅಡುಗೆ ಬಡಿಸಿ ಆದರಿಸುವುದೂ ಯುಗಾದಿ ವೈಶಿಷ್ಟ್ಯಗಳಲ್ಲೊಂದು. ಒಟ್ಟಿನಲ್ಲಿ ಹೊಸ ಸೃಷ್ಟಿಗೆ, ಹೊಸ ದೃಷ್ಟಿಗೆ ಶ್ರೀಕಾರ ಬರೆಯುವ ಯುಗಾದಿಯಿಂದ ಎಲ್ಲರೂ ನಿರೀಕ್ಷಿಸುವುದು ಸಂತಸ–ಸಂಭ್ರಮವನ್ನಷ್ಟೇ. ಅದು ಎಲ್ಲರಿಗೂ ಸಿಗಲಿ ಅಷ್ಟೆ. ಪ್ರೇಮಕವಿ ಕೆ.ಎಸ್. ನರಸಿಂಹಸ್ವಾಮಿ ಯುಗಾದಿ ಕುರಿತು ಹೇಳುವ ಬಗೆಯಿದು– "ಮಾವು ನಾವು, ಬೇವು ನಾವು, ನೋವು ನಲಿವು ನಮ್ಮವು. ಹೂವು ನಾವು, ಹಸಿರು ನಾವು, ಬೇವು ಬೆಲ್ಲ ನಮ್ಮವು......" ಕವಿ ಕೆಎಸ್‌ನ ಅವರ ಮಾತುಗಳು ಎಷ್ಟೊಂದು ಅರ್ಥಪೂರ್ಣವಲ್ಲವೇ?



ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ವತಿಯಿಂದ ಜೆಡಿಎಸ್‌ನ ಹಿರಿಯ ನಾಯಕರೂ ಆದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಎಂ.ಜೆ.ಕಿರಣ್‌ಗೌಡ, ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ, ಉಪಾಧ್ಯಕ್ಷರಾದ ಪುನೀತ್‌ಗೌಡ, ಮಧು ಗೌಡ, ಒಕ್ಕಲಿಗರ ಸಂಘದ ನಿರ್ದೇಶಕ ಗಿರೀಶ್‌ಗೌಡ, ಚಾಮರಾಜ ಯುವ ಮೋರ್ಚಾ ಅಧ್ಯಕ್ಷ ಅರ್ಜುನ್‌ಕುಮಾರ್, ಕೆಆರ್. ಕ್ಷೇತ್ರದ ಯುವ ಮೋರ್ಚಾದ ಲಿಖಿತ್‌ಗೌಡ, ಪ್ರಧಾನ ಕಾರ್ಯದರ್ಶಿಗಳಾದ ಭರತ್‌ಕುಮಾರ್, ಸಂತೋಷ್‌ಕುಮಾರ್, ವಿವೇಕ್‌ಗೌಡ ಮತ್ತಿತರರು ಉಪಸ್ಥಿತರಿದ್ದರು

ಲೋಕಸಭಾ ಚುನಾವಣೆ: ನಾಳೆ ಬೈಕ್ ರ್‍ಯಾಲಿ

ಮೈಸೂರು,ಏ.8– ಲೋಕಸಭಾ ಚುನಾವಣೆಯ ಹಿನ್ನೆಲೆ ಮತದಾರರಲ್ಲಿ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸಲು ಹಾಗೂ ಎಲ್ಲರನ್ನು ಒಳಗೊಳ್ಳುವ ಚುನಾವಣೆ ನಡೆಸಲು ಏ.10ರಂದು ಬೆಳಗ್ಗೆ 10 ಗಂಟೆಗೆ ಗನ್‌ಹೌಸ್ ವೃತ್ತದಿಂದ ಕೆಂಪೇಗೌಡ ಸರ್ಕಲ್(ಮಣಿಪಾಲ್ ಆಸ್ಪತ್ರೆ ಜಂಕ್ಷನ್) ವರೆಗೆ ಬೈಕ್ ರ್‍ಯಾಲಿಯನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಆದ ಜಿಲ್ಲಾ ಚುನಾವಣಾಧಿಕಾರಿಗಳು, ನಗರ ಪೊಲೀಸ್ ಆಯುಕ್ತರು, ಸ್ವೀಪ್ ಸಮಿತಿ ಅಧ್ಯಕ್ಷರು ಹಾಗೂ ಜಿಪಂ ಮುಖ್ಯ ಸಿಇಓ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದು, ಜಿಲ್ಲೆಯ ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ತಮ್ಮ ಅಧೀನದ ಜಿಲ್ಲಾ ಮತ್ತು ತಾಲೂಕು ಕಚೇರಿ ಸಿಬ್ಬಂದಿಗಳೊಡನೆ ಕಡ್ಡಾಯವಾಗಿ ಭಾಗವಹಿಸಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮತದಾನ ಬಗ್ಗೆ, ಅರಿವು ಮೂಡಿಸಲು ಜಿಲ್ಲಾಡಳಿತದೊಂದಿಗೆ ಕೈಜೋಡಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಯುಗಾದಿಯಂದು ಮೃಗಾಲಯ ಪ್ರವೇಶಕ್ಕೆ ಮುಕ್ತ

ಮೈಸೂರು,ಏ.8– ಯುಗಾದಿ ಹಬ್ಬದ ಪ್ರಯುಕ್ತ ಪ್ರವಾಸಿಗರು, ಜನಸಾಮಾನ್ಯರು ಹಾಗೂ ಸ್ಥಳೀಯರಿಗೆ ಮೃಗಾಲಯವನ್ನು ವೀಕ್ಷಿಸಲು ಅನುಕೂಲವಾಗುವಂತೆ ಏ.9 ರಂದು ಶ್ರೀ ಚಾಮರಾಜೇಂದ್ರ ಮೃಗಾಲಯ ಹಾಗೂ ಕಾರಂಜಿಕೆರೆ ಪ್ರಕೃತಿ ಉದ್ಯಾನವನವನ್ನು ಸಾರ್ವಜನಿಕರ ವೀಕ್ಷಣೆಗೆ ತೆರೆದಿರಲಾಗುವುದು ಎಂದು ಶ್ರೀ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

8ನೇ ವರ್ಷದ ಸವಿನೆನಪು



ಮಹಾ ಪರಿನಿರ್ವಾಣ – 9/4/16
L.K. ಚಿಕ್ಕಮಾಯಿಗಯ್ಯ
ಶಿಕ್ಷಕರು

ನೀವು ನಮ್ಮನ್ನಗಲಿ ಇಂದಿಗೆ 8 ವರ್ಷವಾದರೂ ಸದಾ ನಿಮ್ಮ ನೆನಪಿನಲ್ಲಿರುವ ಭಾಸ್ಕರ್ C ಮತ್ತು ಕುಟುಂಬವರ್ಗ

ಮೈಸೂರು ಮಿತ್ರ

ವಾರ್ಷಿಕೋತ್ಸವ ವಿಶೇಷ ಸಂಚಿಕೆ

"ಮೈಸೂರು ಮಿತ್ರ" ತನ್ನ ಓದುಗರು ಹಾಗೂ ಜಾಹೀರಾತುದಾರರ ಸೇವೆಯಲ್ಲಿ ಏಪ್ರಿಲ್ 16, 2024ಕ್ಕೆ 44 ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 45ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸುಸಂದರ್ಭದಲ್ಲಿ ವರ್ಣರಂಜಿತ ವಿಶೇಷಾಂಕವನ್ನು ಹೊರತರಲಾಗುತ್ತಿದೆ. ಹಾಗಾಗಿ ಜಾಹೀರಾತುದಾರರಿಗೆ ಇದೊಂದು ಸುಸಮಯ. ಮುದ್ರಣದ ದೃಷ್ಟಿಯಿಂದ ತಮ್ಮ ಜಾಹೀರಾತುಗಳನ್ನು ಏಪ್ರಿಲ್ 10, 2024 ರೊಳಗೆ ನೀಡಬೇಕಾಗಿ ಕಳಕಳಿಯ ಮನವಿ.

ಪ್ರಧಾನ ಕಛೇರಿ
0821-2496522, 2496523, 0821-2496520 (5 ಲೈನುಗಳು)
ಮರಿಯ ಫರ್ನಾಂಡೀಸ್, ಜಾಹೀರಾತು ವ್ಯವಸ್ಥಾಪಕರು: 9448525060
ಜಾಯ್ ಅಂಥೋಣಿ ಡೋಬ್: 8951668960
ಪ್ರೇಮ: 9880549879
ಕೆ.ಆರ್. ಸರ್ಕಲ್ ಕಛೇರಿ: 0821-2431774
ದೇವರಾಜ ಅರಸ್ ರಸ್ತೆ ಕಛೇರಿ: 0821-2428695

ಕೊಡಗು
ಪ್ರಸಾದ್
ಪೂಜಾ ಆರ್ಕೆಡ್,
ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ
9731469871

ಹುಣಸೂರು
ಕೆ. ಕೃಷ್ಣ (ಕೆ.ಕೆ.)
EWS 204,
KHB ಕಾಲೋನಿ, ಹುಣಸೂರು.
9448720626

ಮಂಡ್ಯ
ಕೆ. ಮೋಹನ್‌ರಾಜ್
3ನೇ ಕ್ರಾಸ್, ಅಶೋಕನಗರ, ಮಂಡ್ಯ
8762960325

ಶ್ರೀರಂಗಪಟ್ಟಣ
ವಿನಯ್ ಕಾರೇಕುರ
ಶ್ರೀರಂಗಪಟ್ಟಣ
9686893234

ಯಳಂದೂರು
ವಿ.ನಾಗರಾಜು
ಮೈತ್ರಿ ಮೆಡಿಕಲ್ಸ್
ಬಳೆಪೇಟೆ, ಯಳಂದೂರು
9844349191

ಚಾಮರಾಜನಗರ
ಸಿದ್ದಲಿಂಗಸ್ವಾಮಿ
ಸಿ.ಹೆಚ್.ಆರ್. ಕಾಂಪ್ಲೆಕ್ಸ್,
ಸರ್ಕಾರಿ ಆಸ್ಪತ್ರೆ ಎದುರು, ಚಾಮರಾಜನಗರ
9242265657

ಟಿ. ನರಸೀಪುರ
ಕುಮಾರ್
ಸಾರ್ವಜನಿಕ ಆಸ್ಪತ್ರೆ ರಸ್ತೆ, ಆರ್ಯ ಮಹಲ್
ಛತ್ರದ ಎದುರು, ಟಿ. ನರಸೀಪುರ.
9986719590

ಗುಂಡ್ಲುಪೇಟೆ
ಸೋಮಶೇಖರ್
ದ.ರಾ. ಬೇಂದ್ರೆ ನಗರ,
ಅಶ್ವಿನಿ ಲೇಔಟ್,ಗುಂಡ್ಲುಪೇಟೆ.
9845995426

ಕೆ.ಆರ್. ನಗರ
ಕೆ.ಟಿ. ರಮೇಶ್
ಸ್ನೇಹ ಎಂಟರ್ ಪ್ರೈಸಸ್,
ವಿ.ವಿ.ರಸ್ತೆ, ಕೆ.ಆರ್. ನಗರ.
9448021368

ಮಳವಳ್ಳಿ
ಶಿವಶಂಕರ
ನಂ.47, 1ನೇ ಕ್ರಾಸ್, ಎನ್.ಇ.ಎಸ್
ಮಳವಳ್ಳಿ ಟೌನ್–571430
9632407806

ಕೊಳ್ಳೇಗಾಲ
ರಾಜು
ಮೈಸೂರು ಮಿತ್ರ ರಿಪೋರ್ಟರ್
#101, ಹುರಳೀಕೇರಿ ಬೀದಿ, ಕೊಳ್ಳೇಗಾಲ
9916621007

ಹಾಸನ
ಆರ್.ಎನ್.ಸೋಮೇಶ್‌ಗೌಡ
ಹೋಲಿ ಚಿಲ್ಡನ್ ಶಾಲೆ ಹತ್ತಿರ,
ಜಯನಗರ. 1ನೇ ಹಂತ, 2ನೇ ಕ್ರಾಸ್,
ಹಾಸನ. 9448401175

ಕುಶಾಲನಗರ
ರಘು
ಮೈಸೂರು ಮಿತ್ರ ರಿಪೋರ್ಟರ್
ಮನು ಪ್ರೆಸ್, ಐ.ಬಿ.ರಸ್ತೆ, ಕುಶಾಲನಗರ
9845698401

ಜಯಪುರ
ಬಿಳಿಗಿರಿ
ಜಯಪುರ
9945479288

ಪಿರಿಯಾಪಟ್ಟಣ
ವೀರೇಶ್
ಪಿರಿಯಾಪಟ್ಟಣ
8660057128

ವಿರಾಜಪೇಟೆ
ಮಂಜುನಾಥ
ವಿರಾಜಪೇಟೆ
9900949353

ಕೆ.ಆರ್.ಪೇಟೆ
ಶ್ರೀನಿವಾಸ
ಅಗ್ರಹಾರ ಬಾಚಹಳ್ಳಿ, ಕೆ.ಆರ್.ಪೇಟೆ
9449326847, 7022757438

ಹೆಚ್.ಡಿ.ಕೋಟೆ
ಮಂಜುನಾಥ ಎಸ್.
ಹೆಚ್.ಡಿ.ಕೋಟೆ
9483574452

ಕೆ.ಎಂ.ದೊಡ್ಡಿ
ಸತೀಶ್ ವಿ.ಎಲ್
ಕೆ.ಎಂ.ದೊಡ್ಡಿ
9242120338

ನಂಜನಗೂಡು
ರಂಗಸ್ವಾಮಿ
ನಂ.4565, ಕಬಿನಿ ಕಾಲೋನಿ
ಹಿಂಭಾಗ, ನೀಲಕಂಠ ನಗರ,
ನಂಜನಗೂಡು ಟೌನ್–571301
9901602226

ಹುಣಸೂರು
ಹೆಚ್.ಆರ್. ಕೃಷ್ಣಕುಮಾರ್ (ಜನ್ ರಾಮೇಗೌಡ)
ನಂದಿನಿ ಮಾರಾಟ ಕೇಂದ್ರ
ಮಾರುತಿ ಪೆಟ್ರೋಲ್ ಬಂಕ್ ಹತ್ತಿರ
ಹಳೆಯ ಬಿ.ಎಂ. ರಸ್ತೆ ಹತ್ತಿರ, ಹುಣಸೂರು
9060406093

ಕೊಳ್ಳೇಗಾಲ
ನಾಗೇಂದ್ರ ಸ್ವಾಮಿ
ನಂ.7ಎ, 684, 14 ನೇ ಕ್ರಾಸ್,
ಬಸವೇಶ್ವರ ನಗರ, ಕೊಳ್ಳೇಗಾಲ
9448576247, 7899849858

ಮೈಸೂರು ಮಿತ್ರ



ಸೊಂಟದಲ್ಲಿ ಗನ್ ಇಟ್ಟುಕೊಂಡಿದ್ದ ವ್ಯಕ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಹಾರ ಹಾಕಿ ಅಭಿನಂದನೆ...!



ಬೆಂಗಳೂರು, ಏ.8– ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸೌಮ್ಯಾ ರೆಡ್ಡಿ ಹಾಗೂ ಬೆಂಗಳೂರು ಕೇಂದ್ರ ಕ್ಷೇತ್ರದ ಅಭ್ಯರ್ಥಿ ಮನ್ಸೂರ್ ಅಲಿಖಾನ್ ಪರ ಮತಯಾಚನೆ ನಡೆಸಿದ ವೇಳೆ ಭದ್ರತಾ ವೈಫಲ್ಯವಾಗಿದೆ.

ಭೈರಸಂದ್ರದಲ್ಲಿ ಸಿಎಂ ಪ್ರಚಾರ ಮಾಡುತ್ತಿರುವಾಗ ವ್ಯಕ್ತಿಯೊಬ್ಬ ತನ್ನ ಸೊಂಟಕ್ಕೆ ಗನ್ ಸಿಕ್ಕಿಸಿಕೊಂಡು, ಸಿಎಂ ಇದ್ದ ವಾಹನ ಏರಿದ್ದಾನೆ. ಬಳಿಕ ಸಿಎಂ ಸಿದ್ದರಾಮಯ್ಯ ಅವರಿಗೆ ಹಾರ ಹಾಕಿದ್ದಾನೆ. ಈ ವೇಳೆ ಆತನ ಸೊಂಟದಲ್ಲಿದ್ದ ಗನ್ ಕಾಣಿಸಿದೆ. ಹಾರ ಹಾಕಿದ ವ್ಯಕ್ತಿ, ಬಳಿಕ ಅಲ್ಲಿಂದ ತೆರಳಿದ್ದಾನೆ. ಎಲ್ಲರಿಗೂ ಕಾಣುವಂತೆ ಆತ ಸೊಂಟದಲ್ಲಿ ಗನ್ ಸಿಕ್ಕಿಸಿಕೊಂಡಿದ್ದರೂ ಅದು ಪೊಲೀಸರಿಗೆ ಕಾಣಿಸಲಿಲ್ಲವೇ ಎಂಬ ಪ್ರಶ್ನೆ ಮೂಡಿದೆ.

ಸೊಂಟದಲ್ಲಿ ಗನ್ ಇಟ್ಟುಕೊಂಡು ಬಂದು ಸಿಎಂಗೆ ಹಾರ ಹಾಕಿದ್ದು, ಬೆಂಗಳೂರಿನ ಸಿದ್ದಾಪುರದ ಕಾಂಗ್ರೆಸ್ ಕಾರ್ಯಕರ್ತ ರಿಯಾಜ್. ಆತ ಸುಮಾರು 25 ವರ್ಷಗಳಿಂದಲೂ ಕಾಂಗ್ರೆಸ್‌ನಲ್ಲಿ ಗುರುತಿಸಿಕೊಂಡಿದ್ದಾನೆ. ಘಟನೆ ಬಗ್ಗೆ ಖಾಸಗಿ ಸುದ್ದಿ ವಾಹಿನಿಗೆ ಪ್ರತಿಕ್ರಿಯಿಸಿದ ಆತ, ಈ ಹಿಂದೆ ನನ್ನ ಮೇಲೆ ದಾಳಿ ಯಾಗಿದ್ದರಿಂದ ಪರವಾನಗಿ ಪಡೆದು ಗನ್ ಇಟ್ಟುಕೊಂಡಿದ್ದೆ. ನಾನು ಸಿದ್ದರಾಮಯ್ಯ ಅವರ ಅಭಿಮಾನಿ ಎಂದಿದ್ದಾನೆ. ಆದರೆ ಚುನಾವಣೆ ನೀತಿ ಸಂಹಿತೆ ಜಾರಿಯಾದ ಬೆನ್ನಲ್ಲೇ ಶಸ್ತ್ರಾಸ್ತ್ರಗಳನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಒಪ್ಪಿಸುವಂತೆ ಸೂಚನೆ ನೀಡಲಾಗಿತ್ತು. ಬ್ಯಾಂಕ್ ಭದ್ರತೆ ಸೇರಿದಂತೆ ಅನಿವಾರ್ಯ ಪ್ರಕರಣಗಳಲ್ಲಿ ಅನುಮತಿ ಮೇರೆಗೆ ಶಸ್ತ್ರಾಸ್ತ್ರ ಇಟ್ಟುಕೊಳ್ಳುವ ಅವಕಾಶ ನೀಡಲಾಗಿತ್ತು. ಹಾಗಾಗಿ ಈ ಘಟನೆ ಬಗ್ಗೆ ಪೊಲೀಸರು ಸ್ಪಷ್ಟನೆ ನೀಡಬೇಕಿದೆ.

ಭದ್ರತಾ ವೈಫಲ್ಯ: ಈ ಘಟನೆಗೆ ಸಂಬಂಧಿಸಿದಂತೆ ವಿಪಕ್ಷ ನಾಯಕ ಆರ್. ಅಶೋಕ್ ಪ್ರತಿಕ್ರಿಯಿಸಿ, ಸಿಎಂ ಸಿದ್ದರಾಮಯ್ಯ ಅವರ ಬಳಿ ಯಾರು ಬೇಕಾದರೂ ಹೋಗಬಹುದು. ಆದರೆ ಗನ್ ಹಿಡಿದುಕೊಂಡು, ಹೂಮಾಲೆ ಹಾಕೋಕೆ ಹೋಗುತ್ತಾರೆ ಎಂದರೆ ಇದು ಭದ್ರತಾ ವೈಫಲ್ಯವೇ ಆಗಿದೆ ಚುನಾವಣಾ ನೀತಿ ಸಂಹಿತೆ ಎಲ್ಲಿದೆ ಈ ಕುರಿತು ಚುನಾವಣಾ ಆಯೋಗಕ್ಕೆ ದೂರು ನೀಡುವುದಾಗಿ ಹೇಳಿದ್ದಾರೆ.

ಒಕ್ಕಲಿಗ ಸಮಾಜದ ಬೆಂಬಲ ಕೋರಿದ ಸ್ಟಾರ್ ಚಂದ್ರು



ಕೆ.ಆರ್.ನಗರದಲ್ಲಿ ನಡೆದ ಒಕ್ಕಲಿಗ ಮುಖಂಡರ ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರಿಗೆ ವ್ಯಾಪಕ ಬೆಂಬಲ ವ್ಯಕ್ತವಾಯಿತು. ಅಭಿಮಾನಿಗಳು ಅಭಿನಂದಿಸಿ, ಅವರ ಪರ ಪ್ರಚಾರ ನಡೆಸುವ ಭರವಸೆ ನೀಡಿದರು.

ಕೆ.ಆರ್.ನಗರ, ಏ8– ಎಲ್ಲಾ ಸಮುದಾಯದವರನ್ನು ಒಟ್ಟಿಗೆ ಕರೆದೊಯ್ಯುವ ಪಕ್ಷ ಕಾಂಗ್ರೆಸ್. ಈ ಚುನಾವಣೆಯಲ್ಲಿ ನಾನಾ ಸಮುದಾಯದ ಮುಖಂಡರು ನನ್ನನ್ನು ಬೆಂಬಲಿಸುತ್ತಿದ್ದು ಒಕ್ಕಲಿಗ ಸಮಾಜ ಕೂಡ ನನ್ನನ್ನು ಬೆಂಬಲಿಸಿ ಆಶೀರ್ವದಿಸಬೇಕೆಂದು ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಮನವಿ ಮಾಡಿದರು.

ಪಟ್ಟಣದ ಕೆ.ಆರ್.ನಗರ ಬ್ಲಾಕ್ ಕಾಂಗ್ರೆಸ್ ಹಾಗೂ ಸಾಲಿಗ್ರಾಮ ಬ್ಲಾಕ್ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ಒಕ್ಕಲಿಗ ಸಮಾಜದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ನಾನು ಮಂಡ್ಯ ಜಿಲ್ಲೆಯ ರೈತನ ಮಗ. ನಿಮ್ಮ ಸೇವೆ ಮಾಡಲು ಬಂದಿದ್ದೇನೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ರವಿಶಂಕರ್ ಅವರನ್ನು ಬೆಂಬಲಿಸಿ ಆಶೀರ್ವದಿಸಿದಂತೆ ಈ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸಿ ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡರು.

ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಮಾತನಾಡಿ, ಮಂಡ್ಯ ಲೋಕಸಭಾ ಚುನಾವಣೆ ದೇಶದ ಗಮನ ಸೆಳೆದಿದೆ. ಒಕ್ಕಲಿಗ ಸಮಾಜಕ್ಕೆ 8 ಸ್ಥಾನಗಳನ್ನು ಕೊಡುವ ಮೂಲಕ ಈ ಸಮಾಜಕ್ಕೆ ಶಕ್ತಿ ತುಂಬುವ ಕೆಲಸವನ್ನು ಕಾಂಗ್ರೆಸ್ ಮಾಡಿದೆ ಎಂದರು. ವಿಧಾನಸಭಾ ಚುನಾವಣೆಯಲ್ಲಿ ರವಿಶಂಕರ್ ಅವರಿಗೆ ಒಕ್ಕಲಿಗರು ಬೆಂಬಲ ನೀಡಿದಂತೆ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಒಕ್ಕಲಿಗ ಸಮಾಜ ಕೈ ಹಿಡಿಯಬೇಕು. ಒಕ್ಕಲಿಗ ಸಮಾಜದ ಜೊತೆಗೆ ಇತರೆ ಸಮುದಾಯಗಳು ಕೂಡ ಕಾಂಗ್ರೆಸ್‌ಅನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಕೆ.ಆರ್.ನಗರ ಕ್ಷೇತ್ರದ ಅಭಿವೃದ್ಧಿಗೆ ರವಿಶಂಕರ್ ಅವರು ಸರ್ಕಾರದಿಂದ 200 ಕೋಟಿ ಅನುದಾನವನ್ನು ತಂದಿದ್ದಾರೆ. 1000 ಕೋಟಿ ರೂ. ಅನುದಾನ ಬಿಡುಗಡೆಗೆ ಪ್ರಸ್ತಾವನೆ ಕೂಡ ಸಲ್ಲಿಸಿದ್ದಾರೆ. ಮುಂದಿನ ದಿನಗಳಲ್ಲಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರೂ ಅಭಿವೃದ್ಧಿಗೆ ಕೈಜೋಡಿಸಲಿದ್ದಾರೆ. ಅವರು ಹಣ ಮಾಡಲು ರಾಜಕೀಯಕ್ಕೆ ಬಂದಿಲ್ಲ. ಕೇಂದ್ರ ಸರ್ಕಾರದಿಂದ ಅನುದಾನ ತರುವುದು ಹೇಗೆಂದು ಅವರು ಬಲ್ಲರು. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಕಾಂಗ್ರೆಸ್ ಬೆಂಬಲಿಸಿ ಎಂದರು.

ಶಾಸಕ ರವಿಶಂಕರ್ ಮಾತನಾಡಿ, ಒಕ್ಕಲಿಗ ಸಮಾಜ ಕಾಂಗ್ರೆಸ್ ಬೆಂಬಲಿಸಿದ್ದರಿಂದ ನಾನು ಶಾಸಕನಾಗಿ ಆಯ್ಕೆಯಾದೆ. ವಿಧಾನಸಭೆಯಲ್ಲಿ ಬೆಂಬಲಿಸಿದಂತೆ ಲೋಕಸಭಾ ಚುನಾವಣೆಯಲ್ಲಿ ಸ್ಟಾರ್ ಚಂದ್ರು ಅವರನ್ನು ಬೆಂಬಲಿಸಬೇಕು. ಅವರು ಸರಳ ವ್ಯಕ್ತಿ, ರೈತ ಕುಟುಂಬದಿಂದ ಬಂದವರು ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿಧಾನಪರಿಷತ್ ಮಾಜಿ ಸದಸ್ಯರಾದ ಮರಿತಿಬ್ಬೇಗೌಡ, ಕೆಪಿಸಿಸಿ ಕಾರ್ಯಕಾರಿಣಿ ಸಮಿತಿ ಸದಸ್ಯ ದೊಡ್ಡಸ್ವಾಮೇಗೌಡ ಸೇರಿದಂತೆ ಒಕ್ಕಲಿಗ ಸಮಾಜದ ಮುಖಂಡರು ಕಾರ್ಯಕರ್ತರು ಸಭೆಯಲ್ಲಿದ್ದರು.


ಧಾರವಾಡ ಲೋಕಸಭಾ ಕ್ಷೇತ್ರ; ದಿಂಗಾಲೇಶ್ವರ ಸ್ವಾಮೀಜಿ ಪಕ್ಷೇತರ ಸ್ಪರ್ಧೆ ಘೋಷಣೆ



ಬೆಂಗಳೂರು: ಧಾರವಾಡ ಲೋಕಸಭಾ ಕ್ಷೇತ್ರ ಈ ಬಾರಿ ರಾಜ್ಯದ ಗಮನ ಸೆಳೆಯುತ್ತಿದ್ದು, ಶಿರಹಟ್ಟಿಯ ಪಕೀ ರೇಶ್ವರ ಮಠದ ಶ್ರೀ ದಿಂಗಾಲೇಶ್ವರ ಸ್ವಾಮೀಜಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಘೋಷಿಸಿದ್ದಾರೆ.

ಬೆಂಗಳೂರಿನಲ್ಲಿ ತಮ್ಮ ಭಕ್ತರು, ಬೆಂಬಲಿಗರು, ಹಿತೈಷಿಗಳು, ಅಭಿಮಾನಿಗಳ ಜತೆ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ತಮ್ಮ ಸ್ಪರ್ಧೆಯನ್ನು ಘೋಷಿಸಿದರು. ಧಾರವಾಡ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಿರ್ಧರಿಸಿದ್ದೇನೆ. ತಮ್ಮ ಸ್ಪರ್ಧೆಗೆ ಭಕ್ತರು, ಕ್ಷೇತ್ರದ ಮತದಾರರ ಒತ್ತಡವೇ ಕಾರಣ ಎಂದು ಹೇಳಿದರು. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿಯವರ ಕೈಯಲ್ಲಿ ನೋವು ಅನುಭವಿಸಿದ ಜನರ ಧ್ವನಿಯಾಗಿ ನಾನು ಹೋರಾಟ ನಡೆಸುತ್ತಿದ್ದೇನೆ. ಅವರ ಆಡಳಿತ ವಿನಾಶ ಕಾರಿಯಾಗಿದೆ. ಕ್ಷೇತ್ರದಲ್ಲಿ ಲಿಂಗಾಯತ ಸಮುದಾಯವನ್ನು ಕಡೆಗಣಿಸಲಾಗಿದೆ. ವೀರಶೈವ–ಲಿಂಗಾಯತ ಮತ್ತು ಇತರ ಸಮುದಾಯಗಳನ್ನು ತುಳಿಯಲು ನೋಡುತ್ತಿದ್ದಾರೆ ಮತ್ತು ಲಿಂಗಾಯತ ಮಠಗಳನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ. ಅಧಿಕಾರ ದರ್ಪ ತೋರಿಸುತ್ತಿದ್ದಾರೆ ಎಂದು ಆರೋಪಿಸಿದರು. ಧಾರವಾಡ ಕ್ಷೇತ್ರಕ್ಕೆ ಎರಡೂ ರಾಷ್ಟ್ರೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳನ್ನು ಘೋಷಿಸಿವೆ. ಧಾರವಾಡ ಕ್ಷೇತ್ರ ಮತ್ತು ಸುತ್ತಮುತ್ತಲಿನ ಭಾಗದ ಜನರು ಎರಡೂ ಪಕ್ಷಗಳು ಮ್ಯಾಚ್ ಫಿಕ್ಸಿಂಗ್ ನಂತಹ ಚುನಾವಣಾ ಫಿಕ್ಸಿಂಗ್‌ಗೆ ಇಳಿದಿವೆ ಎಂದು ಭಾವಿಸುತ್ತಾರೆ ಎಂದರು.

ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಿಸಿದ ಮಾಜಿ ಸಿಎಂ ವೀರಪ್ಪ ಮೊಯ್ಲಿ



ಚಿಕ್ಕಬಳ್ಳಾಪುರ: ಮಾಜಿ ಸಿಎಂ, ಕಾಂಗ್ರೆಸ್ ಹಿರಿಯ ನಾಯಕ ಎಂ ವೀರಪ್ಪ ಮೊಯ್ಲಿ ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಿಸಿದ್ದಾರೆ.

ಅವರು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ ಹೈಕಮಾಂಡ್ ಕೊನೆ ಕ್ಷಣದಲ್ಲಿ ಯುವ ನಾಯಕ ರಕ್ಷಾ ರಾಮಯ್ಯಗೆ ನೀಡಿತ್ತು. ಇದರಿಂದ ನಿರಾಸೆಗೊಂಡಿರುವ ಮೊಯ್ಲಿ ಇದೀಗ ಅಂತಿಮವಾಗಿ ರಾಜಕೀಯ ನಿವೃತ್ತಿ ಘೋಷಣೆ ಮಾಡಿದ್ದು, ರಕ್ಷಾ ರಾಮಯ್ಯಗೆ ಬೆಂಬಲ ನೀಡುವುದಾಗಿ ಘೋಷಿಸಿದ್ದಾರೆ.

ಯುಗಾದಿ ಹಬ್ಬದ ನಡುವೆಯೂ ಚುನಾವಣೆ ಪ್ರಚಾರ ಕಾವು ಜೋರು



ಮೈಸೂರು,ಏ.8–ಬೇವು ಬೆಲ್ಲ ವಿತರಿಸಿ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಯ ಕರಪತ್ರ ನೀಡಿ ಮೈಸೂರು– ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರ ಮತಯಾಚಿಸಿದರು.

ಮೈಸೂರಿನ ಗಿರಿದರ್ಶಿನಿ ಲೇಔಟ್‌ನಲ್ಲಿ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್ ಮನೆಮನೆಗೆ ತೆರಳಿ ಬೇವು ಬೆಲ್ಲ ನೀಡಿ ಯುಗಾದಿ ಹಬ್ಬದ ಶುಭ ಕೋರಿ, ನಂತರ ರಾಜ್ಯ ಸರ್ಕಾರದ ಸಾಧನೆಗಳ ಕರಪತ್ರ ನೀಡಿ ಮೈಸೂರು–ಕೊಡಗು ಲೋಕಸಭಾ ಅಭ್ಯರ್ಥಿ ಲಕ್ಷ್ಮಣ್ ಪರ ಮತಯಾಚನೆ ಮಾಡಿದರು. ಬಳಿಕ ಮಾತನಾಡಿದ ಅವರು, ಪಂಚ ಗ್ಯಾರಂಟಿಗಳು ಮತದಾರರಲ್ಲಿ ಉತ್ಸಾಹ ಮೂಡಿಸಿವೆ. ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಪಡೆಯಲಿದೆ ಎಂದರು.

ಈ ವೇಳೆ ನಗರ ಪ್ರಧಾನ ಕಾರ್ಯದರ್ಶಿ ಬಸವರಾಜ್ ನಾಯಕ್, ಮುಖಂಡರಾದ ಕೃಷ್ಣಪ್ಪ, ಲೋಕೇಶ್, ವರುಣಾ ಮಹದೇವ್, ಬಿಎಸ್‌ಎನ್‌ಎಲ್ ಮಾದೇವಯ್ಯ, ಶಿಲ್ಪಾ ರಾಣಿ, ನಿಶಾ, ಜಾನವಿ, ಕೆಂಪಮ್ಮ, ಗೌರಿ ಇನ್ನಿತರರು ಹಾಜರಿದ್ದರು.

ಮೈಸೂರಲ್ಲಿ ವಿವಿಧೆಡೆ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಬಿರುಸಿನ ಪ್ರಚಾರ

ಪಕ್ಷದ ಮುಖಂಡರೊಂದಿಗೆ ಮತಯಾಚನೆ



ಮೈಸೂರಿನ ಜನತಾ ನಗರದಲ್ಲಿ ಸೋಮವಾರ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಮತಯಾಚಿಸಿದರು. ಈ ವೇಳೆ ಮುಡಾ ಅಧ್ಯಕ್ಷ ಮರಿಗೌಡ ಇತರರಿದ್ದಾರೆ.

ಮೈಸೂರು, ಏ.8(ಪಿಎಂ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಸೋಮವಾರ ಬಿರುಸಿನ ಪ್ರಚಾರ ನಡೆಸಿ, ಮತಯಾಚಿಸಿದರು. ಇದೇ ವೇಳೆ ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ, ಮುಡಾ ಅಧ್ಯಕ್ಷ ಕೆ.ಮರಿಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಸೇರಿದಂತೆ ಹಲವು ಮುಖಂಡರು ಲಕ್ಷ್ಮಣ್‌ಗೆ ಸಾಥ್ ನೀಡಿದರು.

ಚಾಮುಂಡೇಶ್ವರಿ ಕ್ಷೇತ್ರದ ವಾರ್ಡ್ ನಂ. 44ರ ಜನತಾನಗರದಲ್ಲಿ ಲಕ್ಷ್ಮಣ್ ಮತಯಾಚಿಸಿದರು. ಇದಕ್ಕೂ ಮುನ್ನ ಶ್ರೀ ಮಲೆ ಮಹದೇಶ್ವರ ದೇವಸ್ಥಾನಕ್ಕೆ ತೆರಳಿ ಸ್ವಾಮಿಯ ದರ್ಶನ ಪಡೆದರು. ನಂತರ ದೇವಸ್ಥಾನದ ಆವರಣದಲ್ಲಿ ಕಾರ್ಯಕರ್ತರ ಸಭೆ ಮತ್ತು ಪ್ರಚಾರ ಕಾರ್ಯಕ್ರಮ ನಡೆಸಿದರು. ಇದೇ ವೇಳೆ ರಾಜ್ಯ ಸರ್ಕಾರದ ಪ್ರಸ್ತುತ ಗ್ಯಾರಂಟಿ ಮತ್ತು ಲೋಕಸಭಾ ಚುನಾವಣೆಯ ಕಾಂಗ್ರೆಸ್ ಪ್ರಣಾಳಿಕೆಯ ಯೋಜನೆಗಳ ಬಗ್ಗೆ ತಿಳಿಸಿ ಮತ ನೀಡುವಂತೆ ಸಾರ್ವಜನಿಕರಲ್ಲಿ ಕೋರಿದರು.

ಇದೇ ವೇಳೆ ಮುಡಾ ಅಧ್ಯಕ್ಷ ಕೆ.ಮರಿಗೌಡ ಮಾತನಾಡಿ, ನಮ್ಮ ಪಕ್ಷದ ಅಭ್ಯರ್ಥಿ ಲಕ್ಷ್ಮಣ್ ನಿಮ್ಮ ಬಳಿ ಮತಯಾಚನೆಗೆ ಬಂದಿದ್ದಾರೆ. ಹಬ್ಬದ ಸಂದರ್ಭದಲ್ಲೂ ನಮ್ಮ ರಾಜ್ಯ ಸರ್ಕಾರದ ಜನಪರ ಯೋಜನೆಗಳನ್ನು ನೋಡಿ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಇಲ್ಲಿ ಸೇರಿರುವುದು ನಮ್ಮಲ್ಲಿ ಗೆಲುವಿನ ವಿಶ್ವಾಸ ಮೂಡಿಸಿದೆ ಎಂದರು.

ಎಂ.ಲಕ್ಷ್ಮಣ್ ಒಬ್ಬ ನಿಷ್ಠಾವಂತ ಜನಪರ ಹೋರಾಟಗಾರ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಾಮಾನ್ಯ ಕಾರ್ಯಕರ್ತರಾದ ಲಕ್ಷ್ಮಣ್ ಅವರನ್ನು ನಿಮ್ಮ ಮುಂದೆ ನಿಲ್ಲಿಸಿದ್ದಾರೆ. ಲಕ್ಷ್ಮಣ್ ಅವರಿಗೆ ಮತ ಯಾಚಿಸುವ ಹಕ್ಕಿದೆ. ಏಕೆಂದರೆ ಕಾಂಗ್ರೆಸ್ ರಾಜ್ಯ ಸರ್ಕಾರ ನುಡಿದಂತೆ ಐದು ಗ್ಯಾರಂಟಿ ಜಾರಿಗೊಳಿಸಿದೆ. ಆ ಮೂಲಕ ನಾಡಿನ ಸಾಮಾನ್ಯ ಜನತೆಯ ಜೀವನ ಸುಧಾರಣೆಗೆ ಮಹತ್ವದ ಕೊಡುಗೆ ನೀಡಿದೆ. ಅಂತೆಯೇ ಈ ಲೋಕಸಭಾ ಚುನಾವಣೆಯಲ್ಲಿ ಜನಾದೇಶ ಕಾಂಗ್ರೆಸ್ ಪರವಾಗಿ ಬರುವ ವಿಶ್ವಾಸವಿದ್ದು, ಆ ಮೂಲಕ ಇಡೀ ದೇಶಕ್ಕೆ ಗ್ಯಾರಂಟಿ ಜಾರಿಗೊಳಿಸುವ ಕಾಲವೂ ಸಮೀಪದಲ್ಲೇ ಇದೆ ಎಂದು ಅತೀವ ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, 3 ಲಕ್ಷದ 50 ಸಾವಿರ ಮತದಾರರು ಈ ವಾರ್ಡಿನಲ್ಲಿ ಇದ್ದಾರೆ. ನಾನು ವಿದ್ಯಾರ್ಥಿಯಾಗಿದ್ದಾಗ ಚಿಕ್ಕಣ್ಣ ಅವರ ಜೊತೆ ಕೆಲಸ ಮಾಡಿದ್ದೆ. ನನಗೆ ಈ ಭಾಗದಲ್ಲಿ ಹೆಚ್ಚು ಒಡನಾಟ ಇದೆ. ಇಲ್ಲಿ ಕೇಂದ್ರದ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್ ಕೊಡಲು ಸಿದ್ಧತೆ ನಡೆದಿದೆ. ಲಕ್ಷ್ಮಣ್ ಅವರನ್ನು ಸಂಸತ್‌ಗೆ ಕಳುಹಿಸುವ ನಿಟ್ಟಿನಲ್ಲಿ ಈ ವಾರ್ಡಿನ್‌ನಿಂದ ಅತ್ಯಂತ ಲೀಡ್‌ನಲ್ಲಿ ಮತಗಳನ್ನು ನೀಡಬೇಕೆಂದು ಕೋರಿದರು. ಪಕ್ಷದ ಮುಖಂಡರಾದ ಕೃಷ್ಣ, ಸುಮಲತಾ, ಹೇಮಾವತಿ, ಕೆ.ವಿ.ಮಲ್ಲೇಶ್ ಸೇರಿದಂತೆ ಹಲವು ಮುಖಂಡರು ಹಾಜರಿದ್ದರು.


ಅದ್ಧೂರಿ ಸ್ವಾಗತ: ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ರಾಜರಾಜೇಶ್ವರಿನಗರದ ವಾರ್ಡ್ 45ಕ್ಕೆ ಭೇಟಿ ನೀಡಿದ ಲಕ್ಷ್ಮಣ್, ಜನ ಸಂಪರ್ಕ ಸಭೆ ನಡೆಸಿದರು. ಇದಕ್ಕೂ ಮುನ್ನ ವಾರ್ಡಿನ ಜನತೆಯಿಂದ ಲಕ್ಷ್ಮಣ್ ಅವರಿಗೆ ಅದ್ಧೂರಿ ಸ್ವಾಗತ ನೀಡಲಾಯಿತು. ಅಲ್ಲದೆ, ಸಾರ್ವಜನಿಕರು ಲಕ್ಷ್ಮಣ್ ಅವರೊಂದಿಗೆ ಫೋಟೋ ಕ್ಲಿಕ್ಕಿಸಿಕೊಂಡರು. ಜಿಪಂ ಮಾಜಿ ಸದಸ್ಯ ಅರುಣ್ ಕುಮಾರ್, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ಸಿ.ಕೃಷ್ಣಕುಮಾರ ಸಾಗರ್, ನಗರ ಪಾಲಿಕ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಬ್ಲಾಕ್ ಅಧ್ಯಕ್ಷ ಸತೀಶ್, 45ನೇ ವಾರ್ಡ್ ಅಧ್ಯಕ್ಷ ಮಾದೇವಣ್ಣ ಮತ್ತಿತರರು ಹಾಜರಿದ್ದರು.

ನನಗೊಂದು ಅವಕಾಶ ಕೊಡಿ: ಚಾಮುಂಡೇಶ್ವರಿ ಕ್ಷೇತ್ರದ ನಿವೇದಿತಾ ನಗರದ ಪಾರ್ಕ್‌ಗೆ ಭೇಟಿ ನೀಡಿ ಕಾರ್ಯಕರ್ತರ ಸಭೆ ಮತ್ತು ಪ್ರಚಾರ ಕಾರ್ಯಕ್ರಮ ನಡೆಸಿದರು. ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 5 ನ್ಯಾಯ, 21 ಗ್ಯಾರಂಟಿ ಯೋಜನೆಗಳು ಜಾರಿಗೊಳ್ಳುವ ಮೂಲಕ ಜನತೆಗೆ ಉಪಯೋಗ ಆಗಲಿದೆ ಎಂದು ತಿಳಿಸಿದ ಲಕ್ಷ್ಮಣ್, ನನಗೊಂದು ಅವಕಾಶ ಕೊಡಿ ಎಂದು ಕೋರಿದರು.

ಜನ ಸಂಪರ್ಕ ಸಭೆ: ಎಂ.ಲಕ್ಷ್ಮಣ್ ವಾರ್ಡ್ 45ರ ನಿವೇದಿತಾನಗರದಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಪಾಲ್ಗೊಂಡಿದ್ದರು. ಬಡಾವಣೆ ಜನರು ಭರ್ಜರಿ ಹಾರ ಹಾಕಿ ಸ್ವಾಗತ ಕೋರಿದರು. ಇದೇ ವೇಳೆ ಮಾತನಾಡಿದ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಜನಪರ ಕಾರ್ಯಕ್ರಮಗಳ ಮೂಲಕ ಉತ್ತಮ ಆಡಳಿತ ನೀಡುತ್ತಿದ್ದು, ಕೇಂದ್ರದಲ್ಲೂ ಅಂತಹ ಉತ್ತಮ ಆಡಳಿತ ಬರಬೇಕಿದೆ. ಈ ನಮ್ಮ ಅಭ್ಯರ್ಥಿ ಗೆಲ್ಲಿಸಿ ಸಂಸತ್ತಿಗೆ ಕಳುಹಿಸಿಕೊಡಿ ಎಂದು ಮನವಿ ಮಾಡಿದರು. ಮಾಜಿ ಮೇಯರ್ ಚಿಕ್ಕಣ್ಣ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಭಾಸ್ಕರ್‌ಗೌಡ, ಬ್ಲಾಕ್ ಅಧ್ಯಕ್ಷ ಗುರುಸ್ವಾಮಿ, ಜಿಪಂ ಮಾಜಿ ಸದಸ್ಯ ಜವರಪ್ಪ, ಮುಖಂಡ ಅರುಣ್‌ಕುಮಾರ್ ಮತ್ತಿತರರು ಹಾಜರಿದ್ದರು.

ಜನಪರ ಕೆಲಸಕ್ಕೆ ನನಗೊಂದು ಅವಕಾಶ ನೀಡಿ; ಎಂ.ಲಕ್ಷ್ಮಣ್

ಕ್ಷೇತ್ರದ ಅಭಿವೃದ್ಧಿಗೆ ಶೀಘ್ರ ಪ್ರಣಾಳಿಕೆ ಬಿಡುಗಡೆ



ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಗ್ಯಾರಂಟಿ ಕಾರ್ಡ್ ಪ್ರದರ್ಶಿಸಿದರು.

ಮೈಸೂರು,ಏ.8(ಪಿಎಂ)– ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ನಾಯಕರೊಂದಿಗೆ ಚರ್ಚಿಸಿ ಕ್ಷೇತ್ರದ ಅಭಿವೃದ್ಧಿಗೆ ಶೀಘ್ರವೇ ಪ್ರಣಾಳಿಕೆ ಬಿಡುಗಡೆ ಮಾಡಲಾಗುವುದು. ಕಾಂಗ್ರೆಸ್ ಪಕ್ಷದಲ್ಲೇ ಸುಳ್ಳು ಎಂಬುದಿಲ್ಲ. ಜನಪರವಾಗಿ ಕೆಲಸ ಮಾಡಲು ನನಗೊಂದು ಅವಕಾಶ ನೀಡಬೇಕೆಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಕೋರಿದರು.

ಮೈಸೂರು ನಗರದ ವಿವಿಧೆಡೆ ಸೋಮವಾರ ಮತ ಯಾಚಿಸುವ ವೇಳೆ ಮಾತನಾಡಿದ ಅವರು, ಮೈಸೂರು ಸೇರಿದಂತೆ ಇಡೀ ಕ್ಷೇತ್ರದ ಅಭಿವೃದ್ಧಿಗೆ ನಾನೊಂದು ಪ್ರಣಾಳಿಕೆ ಸಿದ್ಧಪಡಿಸುತ್ತಿದ್ದು, ಶೀಘ್ರವೇ ಬಿಡುಗಡೆ ಮಾಡಲಾಗುವುದು. ನಾನು ಮೂಲತಃ ಮೈಸೂರಿನವನು. ಕಾಂಗ್ರೆಸ್ ಪಕ್ಷ ಸಾಮಾನ್ಯ ಕಾರ್ಯಕರ್ತನಾದ ನನ್ನನ್ನು ಗುರುತಿಸಿ ಟಿಕೆಟ್ ನೀಡಿದೆ. ನನ್ನನ್ನು ಹಲವು ಜನಸಾಮಾಜಿಕ ಜಾಲತಾಣದಲ್ಲಿ ಗೆದ್ದರೆ ನಿಮ್ಮ ಚಿಂತನೆ ಏನೆಂದು ಕೇಳುತ್ತಿದ್ದಾರೆ. ಹೀಗಾಗಿ ಕ್ಷೇತ್ರದ ಅಭಿವೃದ್ಧಿಯ ಪ್ರಣಾಳಿಕೆ ಸಿದ್ಧಪಡಿಸುತ್ತಿದ್ದೇನೆ. ಅದನ್ನು ಮೈಸೂರಿನಲ್ಲಿ ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದರು.

ಕಾಂಗ್ರೆಸ್ ರಕ್ತದಲ್ಲೇ ಸುಳ್ಳು ಎಂಬುದಿಲ್ಲ. ಕಳೆದ ವಿಧಾನಸಭೆ ಚುನಾವಣೆ ವೇಳೆ ಐದು ಗ್ಯಾರಂಟಿಯ ಭರವಸೆ ನೀಡಿದ್ದೆವು. ಅದರಂತೆ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಬದ್ಧತೆಯಿಂದ ಗ್ಯಾರಂಟಿ ಜಾರಿಗೊಳಿಸಿ ಜನ ಜೀವನದ ಸುಧಾರಣೆಗೆ ನಾಂದಿ ಹಾಡಿದ್ದಾರೆ. ಇದೀಗ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಬಡವರಿಗೆ ಅನುಕೂಲವಾಗುವಂತೆ ಕಾಂಗ್ರೆಸ್ 5 ನ್ಯಾಯಗಳನ್ನು ಕೊಡಲಿದೆ ಎಂದು ಹೇಳಿದರು.

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರದ ಗದ್ದುಗೆ ಏರಿದರೆ ಮೊದಲಿಗೆ ಮಹಾಲಕ್ಷ್ಮೀ ಯೋಜನೆ ಜಾರಿಗೊಳ್ಳಲಿದೆ. ಆ ಮೂಲಕ ವರ್ಷಕ್ಕೆ ಲಕ್ಷ ನಗದು ಮನೆ ಯಜಮಾನಿಗೆ ದೊರೆಯುವಂತಾಗಲಿದೆ. ನನ್ನನ್ನು ಬೆಂಬಲಿಸುವ ಮೂಲಕ ದೇಶದಲ್ಲಿ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು. ಪ್ರಸ್ತುತದ ದೇಶದ ಯುವ ಜನತೆ ನಿರುದ್ಯೋಗದಿಂದ ಕಂಗೆಟ್ಟಿದೆ. ಉದ್ಯೋಗ ಸೃಷ್ಟಿಸಿಯುವ ಜನತೆಯ ಶ್ರೇಯೋಭಿವೃದ್ಧಿಗೆ ಕಾಂಗ್ರೆಸ್ ಮುಂದಾಗಲಿದೆ ಎಂದರು.

ನುಡಿದಂತೆ ನಡೆದಿದ್ದೇವೆ: ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನನ್ನನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದ್ದಾರೆ. ರಾಜ್ಯದಲ್ಲಿ ಐದು ಗ್ಯಾರಂಟಿಗಳನ್ನು ನಮ್ಮ ಸರ್ಕಾರ ಜಾರಿಗೊಳಿಸಿದ್ದು, ಇದರ ಪ್ರಯೋಜನೆ ಜನ ಸಮುದಾಯಕ್ಕೆ ಆಗುತ್ತಿದೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪ್ರಣಾಳಿಕೆ ಬಿಡುಗಡೆಗೆ ಮುನ್ನವೆ ಪ್ರತಿ ಮನೆ ಮನೆಗೂ ಗ್ಯಾರಂಟಿ ಕಾರ್ಡ್ ತಲುಪಿಸಿದ್ದೇವು. ಗೆದ್ದ ನಂತರ ಗ್ಯಾರಂಟಿ ಜಾರಿ ಮಾಡಿದ್ದು, ನಾವು ನುಡಿದಂತೆ ನಡೆದಿದ್ದೇವೆ ಎಂದು ಲಕ್ಷ್ಮಣ್ ಹೇಳಿದರು.



ಮೈಸೂರಿನ ವಿವಿಧೆಡೆ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಸೋಮವಾರ ಮತ ಯಾಚಿಸಿದರು.

ಇದೀಗ ಐದು ನ್ಯಾಯಗಳ ಸಂಬಂಧ ಗ್ಯಾರಂಟಿ ಕಾರ್ಡ್‌ಗಳನ್ನು ಮನೆ ಮನೆಗೆ ತಲುಪಿಸುತ್ತಿದ್ದೇವೆ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಐದು ನ್ಯಾಯಗಳು ಜನರಿಗೆ ದೊರೆಯಲಿವೆ. ಇದಕ್ಕೆ ನಮ್ಮ ಪಕ್ಷ ಬದ್ಧವಾಗಿದೆ. ಮಹಾಲಕ್ಷ್ಮೀ ಯೋಜನೆಯಡಿ ಮನೆ ಯಜಮಾನಿಗೆ ವರ್ಷಕ್ಕೆ ಲಕ್ಷ ರೂ. ನಗದು ಜಾರಿಯಾಗಲಿದೆ. ಕೃಷಿ ಕಾರ್ಮಿಕರ ಕೂಲಿ ಏರಿಕೆಯಾಗಲಿದೆ. ಆದರೆ ಮತ್ತೆ ಬಿಜೆಪಿಗೆ ಅಧಿಕಾರ ದೊರೆತರೆ ಈ ಯಾವುದಕ್ಕೂ ಅವಕಾಶ ಇರುವುದಿಲ್ಲ ಎಂದರು.

ಕಾಂಗ್ರೆಸ್ ಎಂದಿಗೂ ದೀನದಲಿತರ ಪಕ್ಷ. ಬಡವರ ಪರವಾಗಿ ಕೆಲಸ ಮಾಡಲಿದೆ. ಆದರೆ ಬಿಜೆಪಿಯವರನ್ನು ಪ್ರಶ್ನೆ ಕೇಳಿದರೆ 'ಮೋದಿ ಮೋದಿ' ಎಂದು ಹೇಳುತ್ತಾರೆ. ನಾನು ಸಾಮಾನ್ಯ ಕಾರ್ಯಕರ್ತ, ಬೀದಿಯಲ್ಲಿ ನಿತ್ಯ ನಾಲ್ಕಾರು ಜನಕ್ಕೆ ದೊರೆಯುವಂತ ವ್ಯಕ್ತಿಯಾಗಿದ್ದೇನೆ. ಆದರೆ ಬಿಜೆಪಿ ಅಭ್ಯರ್ಥಿ ಅರಮನೆಯಲ್ಲಿ ಇರುವ ಅಭ್ಯರ್ಥಿಯಾಗಿದ್ದು, ಅರಮನೆಗೆ ಉಚಿತ ಪ್ರವೇಶ ಸಾಧ್ಯವೇ ಎಂದು ಪ್ರಶ್ನಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ 2013ರಿಂದ ಮೈಸೂರಿಗೆ 3,800 ಕೋಟಿ ಕೊಟ್ಟಿದ್ದಾರೆ. ನಗರಕ್ಕೆ 53 ಯೋಜನೆ ನೀಡಿದ್ದಾರೆ. ನಾನು ಐದು ವರ್ಷಗಳಲ್ಲಿ ಕ್ಷೇತ್ರದ ಜನತೆಯ ನಂಬಿಕೆಗೆ ಬದ್ಧನಾಗಿ ಕೆಲಸ ಮಾಡುತ್ತೇನೆ. ನನಗೆ ಬೆಂಬಲ ನೀಡಿ ಎಂದು ಕೋರಿದರು.





ಚುನಾವಣಾ ಅಕ್ರಮಗಳ ಬಗ್ಗೆ ಮಾಹಿತಿ ನೀಡಿ

●ನಿಮ್ಮ ಮಾಹಿತಿ ಗೌಪ್ಯವಾಗಿಡಲಾಗುವುದು ●ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮನವಿ

●ಮಾಹಿತಿದಾರರ ಗೌಪ್ಯತೆ ಕಾಪಾಡಲಾಗುವುದು ●ಈ ಬಾರಿ ಶೇ.85ರಷ್ಟು ಮತದಾನದ ಗುರಿ ದಾಟಲೇಬೇಕು
●ಚುನಾವಣಾ ಆ್ಯಪ್‌ಗಳನ್ನು ಸದುಪಯೋಗ ಮಾಡಿಕೊಳ್ಳಿ ●ಮತದಾನದಲ್ಲಿ ಜಾತಿ, ಧರ್ಮ ಭೇದಭಾವ ಮಾಡಬೇಡಿ



ಮೈಸೂರಿನ ಕಲಾಮಂದಿರದಲ್ಲಿ ನಡೆದ ಚುನಾವಣಾ ಹಬ್ಬ ಕಾರ್ಯಕ್ರಮದಲ್ಲಿ ಚುನಾವಣಾ ಲೋಗೋ, ಆ್ಯಪ್ ಹಾಗೂ ಹೆಲ್ಪ್ ಲೈನ್ ಇರುವ ಫಲಕವನ್ನು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅನಾವರಣಗೊಳಿಸಿದರು.

ಮೈಸೂರು, ಏ.8(ಬಿಎಲ್‌ಯು)- ಚುನಾವಣಾ ಅಕ್ರಮಗಳು ನಡೆಯುತ್ತಿದ್ದರೆ ಕೂಡಲೇ ಸಿ ವಿಜಿಲ್ ಆ್ಯಪ್‌ನಲ್ಲಿ ವಿಡಿಯೋ, ಆಡಿಯೋ, ಫೋಟೋ ಹಾಗೂ ಜಿಪಿಎಸ್ ಮೂಲಕ ಮಾಹಿತಿ ನೀಡಿ ಎಂದು ಜಿಲ್ಲಾಧಿಕಾರಿಗಳೂ ಆದ ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಜನರಿಗೆ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಯುಗಾದಿ ಹಬ್ಬದ ಮುನ್ನಾ ದಿನವಾದ ಇಂದು ಲೋಕಸಭಾ ಚುನಾವಣೆ ಹಿನ್ನೆಲೆ ಜಿಲ್ಲಾಡಳಿತ ಮತ್ತು ಜಿಲ್ಲಾ ಸ್ವೀಪ್ ಸಮಿತಿ ಸಂಯುಕ್ತವಾಗಿ ಆಯೋಜಿಸಿದ್ದ ಚುನಾವಣಾ ಹಬ್ಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಹೀಗೆ ಮಾಹಿತಿ ನೀಡುವವರ ಹೆಸರು ಹಾಗೂ ವಿಳಾಸ ಬಹಿರಂಗಪಡಿಸದೆ ಗೌಪ್ಯತೆ ಕಾಪಾಡಲಾಗುವುದು. ಈ ಹಿನ್ನೆಲೆಯಲ್ಲಿ ನಿರ್ಭಯವಾಗಿ ಭಯವಿಲ್ಲದೆ ಚುನಾವಣಾ ಅಕ್ರಮಗಳ ಬಗ್ಗೆ ಚುನಾವಣಾ ಆಯೋಗಕ್ಕೆ ಮಾಹಿತಿ ನೀಡಿ ಎಂದು ಮನವಿ ಮಾಡಿದರು.

ಜೊತೆಗೆ ತಮ್ಮ ಸನಿಹದ ಮತಗಟ್ಟೆಯಲ್ಲಿ ಯಾವುದಾದರೂ ನ್ಯೂನತೆಗಳಿದ್ದರೆ, ಲೋಪದೋಷಗಳು ಕಂಡು ಬಂದರೆ ಚುನಾವಣಾ ಆಯೋಗದ ನೋ ಯುವರ್ ಪೋಲ್ಲಿಂಗ್ ಸ್ಟೇಷನ್ ಅಭಿಯಾನದಡಿ ಸ್ಥಳೀಯ ಚುನಾವಣಾಧಿಕಾರಿಗಳ ಗಮನಕ್ಕೆ ತಂದು ನ್ಯೂನತೆ ಸರಿಪಡಿಸಿಕೊಳ್ಳಬೇಕು. ಅದಾಗಿಯೂ ಸಮಸ್ಯೆ ಪರಿಹಾರ ಆಗದಿದ್ದರೆ ನೇರವಾಗಿ ಜಿಲ್ಲಾಧಿಕಾರಿ ಕಚೇರಿಗೆ ದೂರು ನೀಡಬಹುದು. ಸಮುದಾಯದ ಸಹಭಾಗಿತ್ವ ಇಲ್ಲದಿದ್ದರೆ ಯಾವುದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟರು.

ಶೇ.85 ಮತದಾನ ಗುರಿ: ಕಳೆದ ಬಾರಿಯ 2019ರ ಲೋಕಸಭಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆಯಲ್ಲಿ ಶೇ.70ರಷ್ಟು ಮತದಾನವಾಗಿತ್ತು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಶೇ.75ರಷ್ಟು ಮತದಾನವಾಗಿತ್ತು. ಆದರೆ ಈ ಬಾರಿ ಮತದಾನದಲ್ಲಿ ಶೇ.85ರಷ್ಟು ಗುರಿ ದಾಟಲೇಬೇಕು. ಈ ನಿಟ್ಟಿನಲ್ಲಿ ಚುನಾವಣಾ ಆಯೋಗ ಪರಿಣಾಮಕಾರಿ ಜಾಗೃತಿ ಸೇರಿದಂತೆ ಹಲವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ. ನಾವು ಹಮ್ಮಿಕೊಳ್ಳುವ ಪ್ರತಿಯೊಂದು ಕಾರ್ಯಕ್ರಮಕ್ಕೆ ಜನರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ತಿಳಿಸಿದರು.

ಚುನಾವಣೆ ಎಂಬುದು ಪ್ರಜಾಪ್ರಭುತ್ವದ ಹಬ್ಬವಾಗಿದ್ದು, ಇದರಲ್ಲಿ ಯಾವುದೇ ಜಾತಿ, ಧರ್ಮ, ಮತಗಳ ಭೇದ ಭಾವವಿಲ್ಲದೆ ಜನರು ಮತದಾನದಲ್ಲಿ ಭಾಗಿಯಾಗಬೇಕು. ಸೂಕ್ತವಾದ ಅಭ್ಯರ್ಥಿಗೆ ಮತ ಹಾಕಿ ಪ್ರಜಾಪ್ರಭುತ್ವ ಹಬ್ಬವನ್ನು ಯಶಸ್ವಿಗೊಳಿಸಬೇಕು ಎಂದು ಸಲಹೆ ನೀಡಿದರು.

ಪ್ರಜಾಪ್ರಭುತ್ವದಲ್ಲಿ ಬಹಳ ಮುಖ್ಯವಾದ ಮತದಾನದ ಮಹತ್ವ ಅರಿತು ನೀವು ಮತದಾನ ಮಾಡಬೇಕು, ಜೊತೆಗೆ ನಿಮ್ಮ ಸುತ್ತಮುತ್ತಲು ಮತದಾನದ ಬಗ್ಗೆ ಜಾಗೃತಿ ಮೂಡಿಸಬೇಕು. ಪ್ರಮುಖವಾಗಿ ವಿದ್ಯಾವಂತರು ಮತದಾನದ ಹಕ್ಕಿನ ಮೌಲ್ಯವನ್ನು ಜನರಿಗೆ ತಿಳಿಸಿ ಪ್ರತಿಯೊಬ್ಬರು ಕಡ್ಡಾಯವಾಗಿ ನೈತಿಕ ಮತದಾನ ಮಾಡುವಂತೆ ಉತ್ತೇಜಿಸಬೇಕು ಎಂದು ಕೋರಿದರು.

ಮತದಾರರ ಗುರುತಿನ ಚೀಟಿಗೆ ಅರ್ಜಿ ಸಲ್ಲಿಸಿರುವವರಿಗೆ ಅಂಚೆ ಮೂಲಕ ಮತದಾರರ ಗುರುತಿನ ಚೀಟಿ ಅವರ ಮನೆಗೆ ತಲುಪಿಸಲಾಗುವುದು. ಒಂದು ವೇಳೆ ನಿಮ್ಮ ಅರ್ಜಿ ನೋಂದಣಿಯಾಗಿ ಗುರುತಿನ ಚೀಟಿ ಬರದಿದ್ದರೆ ಅಂತಹ ಮತದಾರರು ತಮ್ಮಲ್ಲಿರುವ ಆಧಾರ್ ಕಾರ್ಡ್, ಪಾನ್ ಕಾರ್ಡ್, ರೇಷನ್ ಕಾರ್ಡ್ ಸೇರಿದಂತೆ ಇತರೆ ಗುರುತಿನ ದಾಖಲಾತಿ ತೆಗೆದುಕೊಂಡು ಹೋಗಿ ಮತದಾನ ಮಾಡಬೇಕು. ಆದರೆ ಚುನಾವಣಾ ಗುರುತಿನ ಚೀಟಿ ಇದ್ದಾಗಿಯೂ ಅದನ್ನು ಮನೆಯಲ್ಲಿಟ್ಟು ಬೇರೆ ಗುರುತಿನ ಚೀಟಿ ತೆಗೆದುಕೊಂಡು ಹೋಗಬಾರದು ಎಂದು ಕಿವಿಮಾತು ಹೇಳಿದರು.

ಮತಗಟ್ಟೆ ಪರಿಸ್ಥಿತಿ ಅರಿಯಬೇಕೆ?: ಮತಗಟ್ಟೆಯಲ್ಲಿ ಮತದಾನ ಮಾಡಲು ಹೆಚ್ಚು ಕ್ಯೂ ಇದೆ ಎಂದು ಮತದಾನದಿಂದ ಯಾರೂ ಹಿಂದೆ ಸರಿಯಬಾರದು. ಚುನಾವಣಾ ಆಯೋಗ ಕ್ಯೂ ಮ್ಯಾನೇಜ್‌ಮೆಂಟ್ ಆ್ಯಪ್ ಹೊರ ತಂದಿದ್ದು, ಇದರಿಂದ ಮತದಾರರು ತಮ್ಮ ಮತಗಟ್ಟೆಯಲ್ಲಿ ಎಷ್ಟು ಕ್ಯೂ ಇದೆ ಎಂದು ತಿಳಿದುಕೊಳ್ಳಬಹುದು. ಇಂತಹ ತಾಂತ್ರಿಕ ಸೌಲಭ್ಯ ಬಳಸಿಕೊಂಡು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ತಿಳಿಹೇಳಿದರು.

80 ವರ್ಷ ಮೇಲ್ಪಟ್ಟವರಿಗೆ ಹಾಗೂ ಶೇಕಡ 40ಕ್ಕಿಂತ ಹೆಚ್ಚು ಅಂಗವಿಕಲತೆ ಹೊಂದಿರುವವರ ಮನೆಗೆ ಚುನಾವಣಾ ಸಿಬ್ಬಂದಿ ಬಂದು ಮತದಾನಕ್ಕೆ ಅವಕಾಶ ಕಲ್ಪಿಸುತ್ತಾರೆ. ದೃಷ್ಟಿ ಇಲ್ಲದವರಿಗೆ ಬ್ರೈನ್ ಲಿಪಿ ಇರುವ ಬ್ಯಾಲೆಟ್ ಪೇಪರ್ ನೀಡಲಿದ್ದು, ಇದರ ಸದುಪಯೋಗ ಮಾಡಿಕೊಂಡು ಮತದಾನ ಮಾಡಬೇಕು ಎಂದು ಡಾ.ರಾಜೇಂದ್ರ ಸಲಹೆಯಿತ್ತರು.

ಹಸ್ತಾಕ್ಷರ ಸಂಗ್ರಹ ಅಭಿಯಾನದಡಿ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಸೇರಿದಂತೆ ಇತರರು ಫಲಕದಲ್ಲಿ ಸಹಿ ಮಾಡಿದರು. ತರುವಾಯ ಚುನಾವಣಾ ಲೋಗೋ, ಚುನಾವಣಾ ಹೆಲ್ಪ್ ಲೈನ್ ಫಲಕವನ್ನು ಅನಾವರಣ ಮಾಡಿದರು.

ಈ ವೇಳೆ ಚುನಾವಣಾ ಜಾಗೃತಿ ಗೀತೆಗಳನ್ನು ಹಾಡಲಾಯಿತು. ಮತದಾನದ ಹಕ್ಕಿನ ಮೌಲ್ಯ ತಿಳಿಸುವ ಕಿರು ನಾಟಕ ಕೂಡ ಪ್ರಸ್ತುತಪಡಿಸಲಾಯಿತು.

ಚುನಾವಣಾ ರಾಯಭಾರಿ ತನಿಷ್ಕಾ ಮೂರ್ತಿ, ಮೊದಲ ಬಾರಿಗೆ ಮತದಾನ ಮಾಡುತ್ತಿರುವ ಯುವ ಮತದಾರರನ್ನು ಸಾಂಕೇತಿಕವಾಗಿ ವೇದಿಕೆಗೆ ಕರೆದು ಮತದಾನ ಮಾಡುವಂತೆ ಉತ್ತೇಜಿಸಿದರು.

ವಿದ್ಯಾರ್ಥಿಗಳು ಸೇರಿದಂತೆ ಸಾವಿರಕ್ಕೂ ಹೆಚ್ಚು ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ನಗರ ಪಾಲಿಕೆ ಆಯುಕ್ತೆ ಡಾ.ಎನ್.ಎನ್.ಮಧು, ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್, ಸಿಎಫ್‌ಟಿಆರ್‌ಐ ನಿರ್ದೇಶಕಿ ಡಾ.ಶ್ರೀದೇವಿ ಅನ್ನಪೂರ್ಣ ಸಿಂಗ್, ಆಯಿಷ್ ಸಂಸ್ಥೆ ನಿರ್ದೇಶಕಿ ಡಾ.ಪುಷ್ಪಾವತಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಗಾಯಿತ್ರಿ, ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಕ್ಷೇತ್ರ ಪ್ರಚಾರಾಧಿಕಾರಿ ಶೃತಿ, ಮೈಸೂರು ಆಕಾಶವಾಣಿ ನಿಲಯ ನಿರ್ದೇಶಕ ಉಮೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಇವರಲ್ಲದೆ ಚುನಾವಣಾ ರಾಯಭಾರಿಗಳಾದ ಕೃಪಾಕರ, ಸೇನಾನಿ, ಮಹೇಂದ್ರ, ಶ್ರೀನಿವಾಸ್, ಆನಂದ್ ರಾಜ್ ರೂನ್‌ವಾಲ, ಮಧುಸೂದನ್ ಸೇರಿದಂತೆ ಇತರರು ಚುನಾವಣಾ ಜಾಗೃತಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.



ಮೊದಲ ಬಾರಿಗೆ ಮತದಾನ ಮಾಡುತ್ತಿರುವ ಯುವತಿಯರು ಮತದಾನ ಜಾಗೃತಿಯಲ್ಲಿ ಭಾಗವಹಿಸಿರುವುದನ್ನು ಕಾಣಬಹುದು.

ಮತದಾನ ಬಿಟ್ಟು ಟ್ರಿಪ್‌ಗೆ ಹೋಗಬೇಡಿ

ಚುನಾವಣೆಯಲ್ಲಿ ಮತದಾನ ಮಾಡುವಂತೆ ರಜೆ ನೀಡಲಾಗುವುದು. ಈ ವೇಳೆ ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು. ಅದು ಬಿಟ್ಟು ಒಂದು ದಿನ ರಜೆ ಸಿಕ್ಕಿದೆ ಎಂದು, ಹಿಂದೆ ಮುಂದೆ ಎರಡು ದಿನ ರಜೆ ಹಾಕಿಕೊಂಡು 3 ದಿನ ಟ್ರಿಪ್‌ಗೆ ಹೋಗಬಾರದು ಎಂದು ಡಿಸಿ ಡಾ.ರಾಜೇಂದ್ರ ಸಲಹೆ ನೀಡಿದರು.

ಚುನಾವಣೆಯಲ್ಲಿ ಮತದಾನ ಮಾಡಲು ಬೆಳಿಗ್ಗೆ 7 ರಿಂದ ಸಂಜೆ 6 ಗಂಟೆ ತನಕ ಅವಕಾಶವಿದೆ. ಈ ಸಮಯದಲ್ಲಿ ಆನಂತರ ಮತದಾನ ಮಾಡಿದರಾಯಿತು ಎಂದು ಸಿನಿಮಾ ನೋಡಲು ಅಥವಾ ಇನ್ನಿತರ ಕೆಲಸ ಕಾರ್ಯದಲ್ಲಿ ತೊಡಗಬಾರದು. ಆ ದಿನ ಮತದಾನ ಮಾಡುವ ಮೊದಲ ಜವಾಬ್ದಾರಿ ನಿರ್ವಹಿಸಬೇಕು. ನಿಮ್ಮ ಮತಗಟ್ಟೆ ಸ್ಥಳ ಬದಲಾಗುವ ಸಾಧ್ಯತೆ ಇದೆ. ಈ ಹಿನ್ನೆಲೆ ಮತದಾನಕ್ಕೆ ಮುನ್ನಾ ದಿನ ವಾಯು ವಿಹಾರಕ್ಕೆ ಹೋಗುವ ವೇಳೆ ನಿಮ್ಮ ಮತಗಟ್ಟೆ ಯಾವುದು ಎಂದು ಖಚಿತಪಡಿಸಿಕೊಳ್ಳಿ. ಜೊತೆಗೆ ಓಟಿಂಗ್ ಹೆಲ್ಪಿಂಗ್ ಆ್ಯಪ್ ಮೂಲಕ ತಮ್ಮ ಹೆಸರು ಹಾಗೂ ಕುಟುಂಬದ ಹೆಸರು ಮತದಾರರ ಪಟ್ಟಿಯಲ್ಲಿದೆಯೇ ಎಂದು ತಿಳಿದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ತಿಳಿಸಿದರು.

ಆಮಿಷಗಳಿಗೆ ಒಳಗಾಗಬೇಡಿ, ಭವಿಷ್ಯ ಮಾರಿಕೊಳ್ಳಬೇಡಿ

ಮತದಾನಕ್ಕೆ ಅವಕಾಶ ಇಲ್ಲದಿದ್ದರೂ 18 ವರ್ಷ ಕೆಳಗಿನ ಭವಿಷ್ಯದ ಮತದಾರರು ಮತದಾನದ ಮೌಲ್ಯ ತಿಳಿಸುವ ಜಾಗೃತಿಯಲ್ಲಿ ಭಾಗಿಯಾಗಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸಲಹೆ ನೀಡಿದರು.

ಸೀರೆ, ಕುಕ್ಕರ್ ಸೇರಿದಂತೆ ಯಾವುದೇ ಉಡುಗೊರೆ ಪಡೆಯದಂತೆ ನಿಮ್ಮ ಪೋಷಕರಿಗೆ ತಿಳಿಹೇಳಿ. ಇಂತಹ ಆಸೆ ಆಮಿಷಗಳಿಗೆ ಒಳಗಾಗಿ ಭವಿಷ್ಯ ಮಾರಿಕೊಳ್ಳಬೇಡಿ ಎಂದು ಮನವರಿಕೆ ಮಾಡಿ. ಮತದಾನ ನಿಮ್ಮ ಹಕ್ಕು, ಮತದಾನದ ಜವಾಬ್ದಾರಿಯನ್ನು ನೀವು ಮರೆತರೆ ನಿಮ್ಮಿಂದ ಆಯ್ಕೆಯಾಗುವವರು ಜವಾಬ್ದಾರಿ ಮರೆಯುತ್ತಾರೆ ಎಂಬ ವಾಸ್ತವತೆಯನ್ನು ನಿಮ್ಮ ತಂದೆ-ತಾಯಿಗಳಿಗೆ ತಿಳಿಸಿ ಹೇಳಬೇಕು ಎಂದರು.

ನಿಮ್ಮ ವಾಸ ಸ್ಥಾನದಿಂದ ಯಾವುದೇ ಮತಗಟ್ಟೆಯಾದರೂ ಒಂದು ಕಿಲೋ ಮೀಟರ್ ವ್ಯಾಪ್ತಿ ಒಳಗೆ ಇರುತ್ತದೆ. ಅಷ್ಟು ದೂರ ಹೋಗಿ ಮತ ಹಾಕಬೇಕೆ ಎಂಬ ನಿರ್ಲಕ್ಷ್ಯ ತೋರಬಾರದು. ಮತದಾನ ನನ್ನ ಹಕ್ಕು ಎಂದು ಭಾವಿಸಿ ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ಡಾ.ರಾಜೇಂದ್ರ ಹೇಳಿದರು.

ಚುನಾವಣಾ ಪರ್ವ, ದೇಶದ ಗರ್ವ



ಚುನಾವಣಾ ಹಬ್ಬ ಕಾರ್ಯಕ್ರಮದಲ್ಲಿ ಮತದಾನದ ಮೌಲ್ಯ ತಿಳಿಸುವ ಬಗ್ಗೆ ಆಯೋಜಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಚುನಾವಣಾ ಪರ್ವ, ದೇಶದ ಗರ್ವ ಎಂಬ ಘೋಷವಾಕ್ಯದೊಂದಿಗೆ ಜನರಲ್ಲಿ ಮತದಾನದ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.

ಮೈಸೂರಿನ ಕಲಾಮಂದಿರದಲ್ಲಿ ನಡೆದ ಚುನಾವಣಾ ಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಕಲಾಮಂದಿರದ ದ್ವಾರದಿಂದ ವೇದಿಕೆ ತನಕ ಹಾಗೂ ಸಭಾಂಗಣದಲ್ಲಿ ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಯುಗಾದಿ ಹಬ್ಬದ ಸಂಕೇತವಾದ ಬೇವು, ಬೆಲ್ಲವನ್ನು ವೇದಿಕೆಯಲ್ಲಿ ಇಡಲಾಗಿತ್ತು.

ಮತದಾನದ ಬಗ್ಗೆ ಪರಿಣಾಮಕಾರಿ ಜಾಗೃತಿಗಾಗಿ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. ಪ್ರತಿಭಾನ್ವಿತ ಮಕ್ಕಳು ಕಡ್ಡಾಯ ಮತದಾನ ಹಾಗೂ ಮತದಾನದ ಮೌಲ್ಯ ಸಾರುವ ಕುರಿತಂತೆ ತಮ್ಮದೆ ಆದ ಪರಿಕಲ್ಪನೆಯಲ್ಲಿ ಹಲವು ಚಿತ್ರಗಳಿಗೆ ರೂಪ ನೀಡಿದರು.

ಒಗ್ಗಟ್ಟಿನ ಭಾರತಕ್ಕಾಗಿ ನಮ್ಮ ಮತ, ನಾನು ಮತ ಹಾಕುವೆ, ನೀವು ಮತ ಹಾಕಿ, ಬಲಿಷ್ಟ ಪ್ರಜಾಪ್ರಭುತ್ವಕ್ಕಾಗಿ ಮತದಾನ, ದೇಶದ ಸುರಕ್ಷತೆಗಾಗಿ ಮತದಾನ, ಅಭಿವೃದ್ಧಿಗಾಗಿ ಮತದಾನ, ಮತದಾನ ನಮ್ಮ ಶ್ರೇಷ್ಠ ಹಕ್ಕು, ಮತದಾನ ಮಾಡಿದರೆ ಅಭಿವೃದ್ಧಿ ಪರ್ವದಲ್ಲಿ ಸಾಗಬಹುದು, ನಮ್ಮ ಮತ, ನಮ್ಮ ಹಕ್ಕು ಎಂಬ ಅರ್ಥವನ್ನು ಸಾರುವಂತೆ ತಮ್ಮದೆ ವಿಶಿಷ್ಟ ಪರಿಕಲ್ಪನೆಯಲ್ಲಿ ಮಕ್ಕಳು ಚಿತ್ರಗಳನ್ನು ಬಿಡಿಸಿದರು.

ರಾಜ್ಯದ ಜನರ ಜೀವನಕ್ಕೆ ಗ್ಯಾರಂಟಿಯಾದ ಮುಖ್ಯಮಂತ್ರಿ ಸಿದ್ದರಾಮಯ್ಯರ ಬೆಂಬಲಿಸಿ

ಮತದಾರರಲ್ಲಿ ಮರೀಗೌಡರ ಮನವಿ

ಮೈಸೂರು, ಏ.8(ಎಸ್‌ಪಿಎನ್)- ಮೈಸೂರು- ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರನ್ನು ಹೆಚ್ಚು ಅಂತರದಿಂದ ಗೆಲ್ಲಿಸುವಂತೆ ಮುಡಾ ಅಧ್ಯಕ್ಷ ಕೆ.ಮರೀಗೌಡ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಮೈಸೂರಿನ ರಾಮಕೃಷ್ಣನಗರದಲ್ಲಿ ಸೋಮವಾರ ನಡೆದ ಜನ ಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಎಲ್ಲರ ಖಾತೆಗೆ 15 ಲಕ್ಷ ಹಣ ಹಾಕುತ್ತೇವೆ, ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ ಮಾಡುತ್ತೇವೆ ಎಂದು ಸುಳ್ಳು ಭರವಸೆ ನೀಡಿದರು. ಬಿಜೆಪಿ ಸರ್ಕಾರವನ್ನು ಮತ್ತೆ ನಂಬಬೇಡಿ. ನುಡಿದಂತೆ ನಡೆದು ಅಧಿಕಾರಕ್ಕೆ ಬಂದ 9 ತಿಂಗಳಲ್ಲಿಯೇ ರಾಜ್ಯದಲ್ಲಿ 5 ಗ್ಯಾರಂಟಿಗಳನ್ನು ಜಾರಿಗೊಳಿಸಿದ ಕಾಂಗ್ರೆಸ್ ಪಕ್ಷದ ಮೇಲೆ ನಂಬಿಕೆಯಿಡಿ. ಎಂ.ಲಕ್ಷ್ಮಣ ಅವರು ಸರಳ ವ್ಯಕ್ತಿ. ಎಲ್ಲರ ಕಷ್ಟ-ಸುಖಗಳಿಗೆ ಸ್ಪಂದಿಸುವ ಸಾಮಾನ್ಯ ಕಾರ್ಯಕರ್ತ. ಇವರನ್ನು ಹೆಚ್ಚು ಮತಗಳಿಂದ ಗೆಲ್ಲಿಸಿ ಎಂದು ಕೋರಿದರು.

ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಿರುವ 5 ಗ್ಯಾರಂಟಿಗಳು ಪ್ರತಿ ಮನೆಯನ್ನೂ ತಲುಪಿವೆ. ಶಕ್ತಿ ಯೋಜನೆಯಡಿ ಕೋಟ್ಯಾಂತರ ಮಹಿಳೆಯರು ಬಸ್ಸಿನಲ್ಲಿ ಉಚಿತವಾಗಿ ಪ್ರಯಾಣ ಮಾಡಿದ್ದಾರೆ. ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಬಡ ಕುಟುಂಬದ ಹಿರಿಯ ಮಹಿಳೆಗೆ ಮಹಾಲಕ್ಷ್ಮಿ ಯೋಜನೆಯಡಿ ವರ್ಷಕ್ಕೆ 1 ಲಕ್ಷ ರೂ. ನೀಡುತ್ತೇವೆ ಎಂದರು.

ಸಿದ್ದರಾಮಯ್ಯನವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಮೈಸೂರಿಗೆ 8 ಆಸ್ಪತ್ರೆ ಕಟ್ಟಡಗಳು, ಮಹಾರಾಣಿ ಕಾಲೇಜು, ಹಾಸ್ಟೆಲ್, ಕಾಂಕ್ರೀಟ್ ರಸ್ತೆ ನಿರ್ಮಾಣ, 24 ಗಂಟೆ ಕುಡಿಯುವ ನೀರು ಸೌಲಭ್ಯ ನೀಡಿದರು. ದಯವಿಟ್ಟು ಬಿಜೆಪಿಯವರ ಬಣ್ಣದ ಮಾತಿಗೆ ಮರುಳಾಗದೆ, ಭಾವನಾತ್ಮಕ ವಿಚಾರಗಳಿಗೆ ಕಿವಿಗೊಡದೆ ನನಗೆ ಆಶೀರ್ವದಿಸುವ ಮೂಲಕ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿ. ನಿಮ್ಮ ಸೇವೆ ಮಾಡಲು ಅವಕಾಶ ಮಾಡಿಕೊಡಿ ಎಂದರು. ಈ ವೇಳೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಗುರುಸ್ವಾಮಿ, ನಗರ ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ, ಉದ್ಯಮಿ ಕೃಷ್ಣಕುಮಾರ್ ಸಾಗರ್, ಡಿಸಿಸಿ ಸದಸ್ಯ ಬಿ.ರವಿ, ಬಿಎಸ್‌ಎನ್‌ಎಲ್ ಮಾದೇಗೌಡ, ಕೊಪ್ಪಲು ರಾಜಣ್ಣ, ದಡದಹಳ್ಳಿ ಮಹದೇವ, ಕ್ಯಾತನಹಳ್ಳಿ ಪ್ರಕಾಶ್, ಮಹದೇವ್, ಮಲ್ಲೇಶ್, ಫರ್ಜಾನಾ, ಆನಂದೂರು ರಾಮೇಗೌಡ, ರುದ್ರ ಕುಮಾರ್, ಪ್ರಕಾಶ್, ಧನಗಳ್ಳಿ ಬಸವರಾಜು, ರಾಜೇಶ್, ಚಂದ್ರು ಮತ್ತಿತರರು ಉಪಸ್ಥಿತರಿದ್ದರು.

ವಾರ್ಡ್ ನಂ.50ರಲ್ಲಿ ಮತಯಾಚನೆ: ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ.50ರ ರೆಹಮಾನಿಯಾ ಮೊಹಲ್ಲಾದ ಶ್ರೀ ಮಹದೇಶ್ವರ ಸ್ವಾಮಿ ದೇವಸ್ಥಾನಕ್ಕೆ ಎಂ. ಲಕ್ಷ್ಮಣ್ ಭೇಟಿ ನೀಡಿ, ಪೂಜೆ ಸಲ್ಲಿಸಿದರು. ಇದೇ ವೇಳೆ ದೇವಾಲಯದ ಆವರಣದಲ್ಲಿದ್ದ ವಾಲ್ಮೀಕಿ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು. ಈ ವೇಳೆ ಶಾಸಕ ಹರೀಶ್ ಗೌಡರು ಲಕ್ಷ್ಮಣ ಅವರಿಗೆ ಹಾರ ಹಾಕಿ, ಗೌರವಿಸಿದರು. ಕಾಂಗ್ರೆಸ್ ಮುಖಂಡ ರಾದ ಶಿವಣ್ಣ, ರಾಮು ಮತ್ತಿತರರಿದ್ದರು.



ಮೈಸೂರಿನ ರಾಮಕೃಷ್ಣನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಹಾಗೂ ಮುಖಂಡರು ಮತಯಾಚಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪರ ಮುಡಾ ಅಧ್ಯಕ್ಷ ಮರೀಗೌಡರ ಪ್ರಚಾರ

ಮೈಸೂರು, ಏ.8(ಎಸ್‌ಬಿಡಿ)-ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರೊಂದಿಗೆ ಮುಡಾ ಅಧ್ಯಕ್ಷ ಕೆ.ಮರೀಗೌಡ, ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮತ್ತಿತರ ಮುಖಂಡರು ಮೈಸೂರಿನ ದಟ್ಟಗಳ್ಳಿಯಲ್ಲಿ ಸೋಮವಾರ ಪ್ರಚಾರ ನಡೆಸಿದರು.

ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ದಟ್ಟಗಳ್ಳಿ 4ನೇ ಹಂತದ ಓಂ ಶ್ರೀ ಸಾಯಿ ಟ್ರಸ್ಟ್‌ಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಭ್ಯರ್ಥಿ ಹಾಗೂ ಮುಖಂಡರಿಗೆ ಹಾರ ಹಾಕಿ ಆತ್ಮೀಯವಾಗಿ ಬರಮಾಡಿ ಕೊಳ್ಳಲಾಯಿತು. ಬಳಿಕ ಮಹಾತ್ಮಗಾಂಧಿ ಫೋಟೋಗೆ ಪುಷ್ಪ ನಮನ ಸಲ್ಲಿಸಿ, ಮತದಾನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದರ ಜೊತೆಗೆ ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಿದರು. ಈ ವೇಳೆ ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯ್‌ಕುಮಾರ್ ಮಾತನಾಡಿ, ನಗರದ ನಾಲ್ಕು ವಾರ್ಡ್‌ಗಳು ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯಲ್ಲಿವೆ. ಎಲ್ಲಾ ವಾರ್ಡ್‌ಗಳ ಮನೆ ಮನೆಗೆ ಭೇಟಿ ನೀಡಿ, ಲಕ್ಷ್ಮಣ ಅವರ ಪರ ಮತಯಾಚಿಸಬೇಕು.



ಇಲ್ಲಿನ ನಿವಾಸಿಗಳ ಮೇಲೆ ನಮಗೆ ಅಪಾರವಾದ ವಿಶ್ವಾಸವಿದೆ. ಕಾಂಗ್ರೆಸ್ ಅಭ್ಯರ್ಥಿಗೆ ಹೆಚ್ಚು ಮತಗಳನ್ನು ನೀಡುತ್ತೀರೆಂಬ ನಂಬಿಕೆ ಇದೆ. ನಗರದ ಎರಡು ಕ್ಷೇತ್ರಗಳಲ್ಲಿ ನಮ್ಮ ಪಕ್ಷದ ಶಾಸಕರಿದ್ದು, ಇಡೀ ನಗರದಲ್ಲಿ ಹೆಚ್ಚು ಲೀಡ್ ನೀಡುವ ಮೂಲಕ ಲಕ್ಷ್ಮಣ ಅವರನ್ನು ಗೆಲ್ಲಿಸುವಂತೆ ಕೋರಿದರು. ಮುಡಾ ಅಧ್ಯಕ್ಷ ಕೆ.ಮರೀಗೌಡ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಕೊಡುಗೆಯನ್ನು ಮೈಸೂರಿನ ಜನ ಎಂದಿಗೂ ಮರೆಯುವುದಿಲ್ಲ. ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿಗಳಿಂದ ಬಡ ಕುಟುಂಬಗಳಿಗೆ ಆರ್ಥಿಕ ಶಕ್ತಿ ದೊರೆತಿದೆ. ಖಂಡಿತವಾಗಿ ನಮ್ಮ ಅಭ್ಯರ್ಥಿ ಎಂ.ಲಕ್ಷ್ಮಣ ಅವರಿಗೆ ಮತ ನೀಡಿ, ಆಶೀರ್ವದಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ಕಾಂಗ್ರೆಸ್ ಕೊಟ್ಟ ಮಾತಿನಂತೆ ರಾಜ್ಯದಲ್ಲಿ ಜಾರಿಗೊಳಿಸಿದ ಐದು ಗ್ಯಾರಂಟಿಗಳಿಂದ ಜನರಿಗೆ ತುಂಬಾ ಅನುಕೂಲವಾಗಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದರೆ 5 ನ್ಯಾಯ ಹಾಗೂ 24 ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿದರೆ ಮತ್ತಷ್ಟು ಅನುಕೂಲವಾಗಲಿದೆ ಎನ್ನುವುದನ್ನು ಯೋಚಿಸಿ, ನಿಮ್ಮ ಸೇವಕನಾಗಿ ದುಡಿಯಲು ನನಗೊಂದು ಅವಕಾಶ ನೀಡಬೇಕೆಂದು ಮನವಿ ಮಾಡಿದರು. ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರಾದ ಭಾಸ್ಕರ್ ಗೌಡ, ಕೃಷ್ಣ, ಸುಮಲತಾ, ಹೇಮಾವತಿ, ಕೆ.ವಿ.ಮಲ್ಲೇಶ್, ಹೇಮಂತ್, ವಿಕ್ಕಿವಾಸು, ರಾಣಿಪ್ರಭಾ, ಹರೀಶ್ ಮತ್ತಿತರರಿದ್ದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕೊಡಗಲ್ಲಿ ಬುದ್ಧಿವಂತ ಮತದಾರರಿದ್ದಾರೆ

• ಹೆಚ್ಚು ಮತಗಳ ಅಂತರದಿಂದ ಬಿಜೆಪಿ ಜಯ • ಮಾಜಿ ಡಿಸಿಎಂ ಡಾ.ಸಿ.ಅಶ್ವತ್ಥ್ ನಾರಾಯಣ ವಿಶ್ವಾಸ



ಸೋಮವಾರಪೇಟೆಯ ಜೇಸಿ ವೇದಿಕೆಯಲ್ಲಿ ನಡೆದ ಬಿಜೆಪಿ ಮತ್ತು ಜೆಡಿಎಸ್ ಪ್ರಮುಖರ ಪ್ರಚಾರ ಸಭೆಯಲ್ಲಿ ಡಾ.ಸಿ.ಅಶ್ವತ್ಥ್ ನಾರಾಯಣ, ಯದುವೀರ್, ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ಎಸ್.ರಾಮದಾಸ್, ಸುಜಾ ಕುಶಾಲಪ್ಪ, ಸಿ.ಎಲ್.ವಿಶ್ವ, ಎಸ್.ಜಿ.ಮೇದಪ್ಪ ಇದ್ದರು.

ಮಡಿಕೇರಿ, ಏ.8–ಬುದ್ಧಿವಂತ ಮತದಾರರಿರುವ ಕೊಡಗಿನಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅತ್ಯಧಿಕ ಮತಗಳ ಅಂತರದಿಂದ ಜಯಗಳಿಸಲಿದ್ದಾರೆ ಎಂದು ಮಾಜಿ ಉಪ ಮುಖ್ಯಮಂತ್ರಿ ಹಾಗೂ ಬಿಜೆಪಿ ಚುನಾವಣಾ ಉಸ್ತುವಾರಿ ಡಾ.ಸಿ.ಅಶ್ವತ್ಥ್ ನಾರಾಯಣ ವಿಶ್ವಾಸ ವ್ಯಕ್ತಪಡಿಸಿದರು.

ಸೋಮವಾರಪೇಟೆಯ ಜೇಸಿ ವೇದಿಕೆಯಲ್ಲಿ ನಡೆದ ಬಿಜೆಪಿ ಮತ್ತು ಜೆಡಿಎಸ್ ಪ್ರಮುಖರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಮಾಹಿತಿ ತಂತ್ರಜ್ಞಾನದ ಬಗ್ಗೆ ಅಪಾರ ಜ್ಞಾನ ಹೊಂದಿರುವ ಹಾಗೂ ಸುಸಂಸ್ಕೃತ ಕುಟುಂಬದ ಹಿನ್ನೆಲೆಯುಳ್ಳ ಯದುವೀರ್ ಉತ್ತಮ ಅಭ್ಯರ್ಥಿಯಾಗಿದ್ದು, ಹೆಚ್ಚು ಮತಗಳ ಅಂತರದಿಂದ ಜಯಗಳಿಸಲಿದ್ದಾರೆ. ದೇಶಕ್ಕೆ ಮೋದಿ ಎಂಬ ಶಕ್ತಿ ಅನಿವಾರ್ಯವಾಗಿದೆ. ಈ ಶಕ್ತಿಗೆ ಪರ್ಯಾಯ ಪದವೇ ಉದ್ಭವಿಸುವುದಿಲ್ಲ. ಚುನಾವಣಾ ಹಬ್ಬದಲ್ಲಿ ಕಮಲ ಅರಳುವುದು ಗ್ಯಾರಂಟಿ ಎಂಬುದು ಈಗಾಗಲೇ ಖಚಿತವಾಗಿದೆ ಎಂದು ಹೇಳಿದರು.

ದೇಶದಾದ್ಯಂತ ಮೋದಿ ಬೇಕು ಎಂಬ ಕೂಗು ಮಾರ್ದನಿಸುತ್ತಿದೆ. ವಿಶ್ವದಲ್ಲೇ ಸಮರ್ಥ ನಾಯಕತ್ವದ ಗುಣ ಹೊಂದಿರುವ ಮೋದಿಯಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂಬುದನ್ನು ಜನರು ಅರಿತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯಗೆ ದಿಢೀರ್ ಆಗಿ ಒಕ್ಕಲಿಗರ ಮೇಲೆ ಪ್ರೀತಿ ಬಂದಿದೆ. ಆದರೆ, ಒಕ್ಕಲಿಗರ ಜಾತಿ ಕಾರ್ಡ್ ಬಳಸಿ ಚುನಾವಣಾ ತಂತ್ರಗಾರಿಕೆ ನಡೆಸುತ್ತೇವೆ ಎಂಬುದು ಕೇವಲ ಭ್ರಮೆ. ಒಕ್ಕಲಿಗರನ್ನು ಈ ಕ್ಷೇತ್ರದಲ್ಲಿ ಅಭ್ಯರ್ಥಿಯನ್ನಾಗಿಸಲು ಕಾಂಗ್ರೆಸ್‌ಗೆ 4 ದಶಕಗಳು ಬೇಕಾಯಿತೇ? ಎಂದು ಪ್ರಶ್ನಿಸಿದರು.

ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಭವಿಷ್ಯದಲ್ಲಿ ಶ್ರೇಷ್ಠ ಭಾರತ ನಿರ್ಮಾಣ ಮೋದಿಯಿಂದ ಮಾತ್ರ ಸಾಧ್ಯವಾಗಲಿದೆ. ಇಂದು ದೇಶ ಸಾಮಾಜಿಕ, ಆರ್ಥಿಕವಾಗಿ ಮುಂದುವರೆಯುತ್ತಿದ್ದು, ಮಾಹಿತಿ ಮತ್ತು ತಂತ್ರಜ್ಞಾನ ಕ್ಷೇತ್ರ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಮಂಚೂಣಿಯಲ್ಲಿದೆ. ಇದಕ್ಕೆ ಪ್ರಧಾನಿ ನರೇಂದ್ರ ಮೋದಿಯವರೇ ಕಾರಣರಾಗಿದ್ದಾರೆ ಎಂದು ಹೇಳಿದರು.

ಭಾರತದ ಸಂಸ್ಕೃತಿ, ಪರಂಪರೆಯ ರಕ್ಷಣೆ, ಶ್ರೇಷ್ಠ ಭಾರತ ನಿರ್ಮಾಣವಾಗಬೇಕಾದರೆ ಕೊಡಗು ಜಿಲ್ಲೆಯ ಪ್ರಬುದ್ಧ ಮತದಾರರು ಯೋಚಿಸಿ ಮತದಾನ ಮಾಡುವ ಅಗತ್ಯವಿದೆ. ಈ ಬಾರಿಯ ಚುನಾವಣೆಯಲ್ಲಿ ನನಗೆ ಆಶೀರ್ವಾದ ಮಾಡಬೇಕು ಎಂದು ಮನವಿ ಮಾಡಿದರು.

ಮಾಜಿ ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್, ಎಸ್.ರಾಮದಾಸ್, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ಮಾಜಿ ಸದಸ್ಯ ಎಸ್.ಜಿ.ಮೇದಪ್ಪ, ಬಿಜೆಪಿ ಮಂಡಲ ಅಧ್ಯಕ್ಷ ಗೌತಮ್, ಜೆಡಿಎಸ್ ಪ್ರಮುಖ ಸಿ.ಎಲ್.ವಿಶ್ವ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ನಾಪಂಡ ರವಿ ಕಾಳಪ್ಪ, ವಿಧಾನಪರಿಷತ್ ಮಾಜಿ ಸದಸ್ಯ ಸುನಿಲ್ ಸುಬ್ರಮಣಿ, ಮಡಿಕೇರಿ ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ, ಜಿಲ್ಲಾ ಹಾಗೂ ತಾಲೂಕು ಘಟಕದ ಬಿಜೆಪಿ ಪದಾಧಿಕಾರಿಗಳು, ಜೆಡಿಎಸ್ ಮುಖಂಡರು ಉಪಸ್ಥಿತರಿದ್ದರು.

ಕಾಂಗ್ರೆಸ್‌ನಿಂದ ಕರ್ನಾಟಕಕ್ಕೆ ಸಾಲವೇ ಗ್ಯಾರಂಟಿ

ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತ್ರ ಕಾಂಗ್ರೆಸ್‌ನವರು ಮಾತನಾಡುತ್ತಾರೆ. ಆದರೆ, ಕೊನೆಗೆ ಕರ್ನಾಟಕಕ್ಕೆ 'ಸಾಲವೇ ಗ್ಯಾರಂಟಿ' ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಕೊಡಗು ಬಿಜೆಪಿ ಚುನಾವಣಾ ಉಸ್ತುವಾರಿ ಡಾ.ಸಿ.ಅಶ್ವತ್ಥ್ ನಾರಾಯಣ ಟೀಕಿಸಿದರು.

ಸೋಮವಾರಪೇಟೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇಶದಲ್ಲಿ ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕೆಂದು ಜನರು ಅಪೇಕ್ಷೆ ಹೊಂದಿದ್ದಾರೆ. ದೇಶದಲ್ಲಿ ಕಾಂಗ್ರೆಸ್ ಅಪ್ರಸ್ತುತವಾಗಿದ್ದು, ವಿಪಕ್ಷ ಸ್ಥಾನವೂ ಅವರಿಗೆ ದಕ್ಕಲ್ಲ. ಕಾಂಗ್ರೆಸ್‌ಗೆ ಮತ ನೀಡಿದರೇ ಏನೂ ಪ್ರಯೋಜನವಿಲ್ಲ ಎಂದು ಮತದಾರರಿಗೆ ಮನವರಿಕೆ ಆಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಬರಿ ಸೌಂಡ್ ಮಾತ್ರ, ಅವರು ಮಾತನಾಡುವುದನ್ನು ಕಲಿತಿದ್ದಾರೆ. ಆದರೆ, ಕೆಲಸ ಮಾಡುವುದನ್ನು ಕಲಿತ್ತಿಲ್ಲವೆಂದು ವ್ಯಂಗ್ಯವಾಡಿದರು.

ರಾಜ್ಯದಲ್ಲಿ ಅಧಿಕಾರ ದುರ್ಬಳಕೆ ಆಗುತ್ತಿದ್ದು, ಕಾನೂನು ಸುವ್ಯವಸ್ಥೆ ಕುಸಿದಿದೆ. ಕಾಂಗ್ರೆಸ್‌ನವರು ಬರಿ ಗ್ಯಾರಂಟಿ ಯೋಜನೆಗಳ ಬಗ್ಗೆ ಮಾತ್ರ ಮಾತನಾಡುತ್ತಾರೆ ಅಷ್ಟೇ. ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲುವು ಸಾಧಿಸಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಟೀಂಗೆ ಮುಖಭಂಗವಾಗಲಿದೆ. ಕರ್ನಾಟಕಕ್ಕೆ ಕಾಂಗ್ರೆಸ್ ಶಾಪವಿದ್ದಂತೆ, ಲೋಕಸಭಾ ಚುನಾವಣೆಯಲ್ಲಿ ಈ ಶಾಪದಿಂದ ರಾಜ್ಯ ಮುಕ್ತವಾಗಲಿದೆ ಎಂದು ವಾಗ್ದಾಳಿ ನಡೆಸಿದರು.

ಬ್ಯಾಡಗೊಟ್ಟ ಪುನರ್ವಸತಿ ಕೇಂದ್ರದ ನಿವಾಸಿಗಳ ಪ್ರತಿಭಟನೆ



ಮೂಲಸೌಕರ್ಯ ಒದಗಿಸುವಂತೆ ಒತ್ತಾಯಿಸಿ ಬ್ಯಾಡಗೊಟ್ಟ ಪುನರ್ವಸತಿ ಕೇಂದ್ರದ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಮಡಿಕೇರಿ, ಏ.8–ಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬ್ಯಾಡಗೊಟ್ಟ ಪುನರ್ವಸತಿ ಕೇಂದ್ರದ ನಿವಾಸಿಗಳು ಮೂಲಸೌಕರ್ಯ ಒದಗಿಸಬೇಕು. ಇಲ್ಲದಿದ್ದರೆ ಚುನಾವಣೆ ಬಹಿಷ್ಕರಿಸುದಾಗಿ ಪ್ರತಿಭಟನೆ ನಡೆಸಿದರು.

ಪುನರ್ವಸತಿ ಕೇಂದ್ರದಲ್ಲಿ ಸುಮಾರು 354 ಕುಟುಂಬಗಳು ವಾಸಿಸುತ್ತಿದ್ದು, ಇಂದಿಗೂ ಯಾವುದೇ ಮೂಲಸೌಲಭ್ಯ ಕಲ್ಪಿಸಲು ಸ್ಥಳೀಯ ಕೂಡಿಗೆ ಗ್ರಾಪಂ ಹಾಗೂ ಜಿಲ್ಲಾಡಳಿತ ವಿಫಲವಾಗಿದೆ. ಮೂಲಸೌಕರ್ಯ ಒದಗಿಸುವಂತೆ ಹತ್ತಾರು ಬಾರಿ ಸ್ಥಳೀಯ ಜನಪ್ರತಿನಿಧಿಗಳಿಗೆ ಮನವಿ ಮಾಡಿದರೂ ಇದುವರೆಗೂ ಸಮಸ್ಯೆಗಳ ಪರಿಹಾರಕ್ಕೆ ಮುಂದಾಗಲಿಲ್ಲ. ಈ ಹಿನ್ನೆಲೆಯಲ್ಲಿ ಲೋಕಸಭಾ ಚುನಾವಣೆಯನ್ನು ಬಹಿಷ್ಕರಿಸಲು ನಿರ್ಧರಿಸಲಾಗಿದೆ ಎಂದು ಪ್ರತಿಭಟನಾಕಾರರು ಎಚ್ಚರಿಸಿದರು.

ಪುನರ್ವಸತಿ ಕೇಂದ್ರದ ನಿವಾಸಿಗಳಿಗೆ ಇದುವರೆಗೂ ಸಮರ್ಪಕ ಕುಡಿಯುವ ನೀರು, ಸುಸಜ್ಜಿತ ರಸ್ತೆ, ಚರಂಡಿ, ಉದ್ಯಾನ, ಸಮುದಾಯ ಭವನ, ಅಂಗನವಾಡಿ ಕೇಂದ್ರ, ನ್ಯಾಯಬೆಲೆ ಅಂಗಡಿ ಸೇರಿದಂತೆ ಯಾವುದೇ ಸೌಲಭ್ಯಗಳನ್ನು ಒದಗಿಸಿಲ್ಲ ಎಂದು ಕೂಡಿಗೆ ಗ್ರಾಪಂ ಹಾಗೂ ಪಿಡಿಓ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಪುನರ್ವಸತಿ ಕೇಂದ್ರದ ವೈ.ಸಿ.ಮುತ್ತ, ಅನಿತಾ, ದೇವಿ, ಬಾಬು, ಮಣಿ, ಬೆಳ್ಳಿ, ರಾಜು, ರವಿ, ಗೌರಿ, ಚಿಪ್ಪ, ರಮೇಶ, ವೈ.ಕೆ.ಚೋಮ ಮತ್ತಿತರರು ಭಾಗವಹಿಸಿದ್ದರು.

ವಿರಾಜಪೇಟೆಯಲ್ಲಿ ಶಾಂತಿ ಸಭೆ



ಶಾಂತಿ ಸಭೆಯಲ್ಲಿ ಡಿವೈಎಸ್‌ಪಿ ಮೋಹನ್ ಕುಮಾರ್ ಮಾತನಾಡಿದರು.

ವಿರಾಜಪೇಟೆ: ಯುಗಾದಿ ಹಾಗೂ ರಂಜಾನ್ ಹಬ್ಬವನ್ನು ಶಾಂತಿಯುತವಾಗಿ ಆಚರಿಸಬೇಕು ಎಂದು ವಿರಾಜಪೇಟೆ ಡಿವೈಎಸ್‌ಪಿ ಮೋಹನ್ ಕುಮಾರ್ ತಿಳಿಸಿದರು.

ವಿರಾಜಪೇಟೆ ಪೊಲೀಸ್ ಠಾಣೆಯಲ್ಲಿ ನಡೆದ ಮಸೀದಿ ಹಾಗೂ ದೇವಾಲಯಗಳ ಮುಖಂಡರ ಶಾಂತಿ ಸಭೆಯಲ್ಲಿ ಮಾತನಾಡಿದ ಅವರು, ಲೋಕಸಭಾ ಚುನಾವಣೆ ಮಾದರಿ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಹಬ್ಬಗಳ ಆಚರಣೆ ವೇಳೆ ಯಾವುದೇ ರಾಜಕೀಯ ಬೆರೆಸಬಾರದು. ಕಾನೂನು ಉಲ್ಲಂಘನೆ ಆಗದಂತೆ ಎಲ್ಲರೂ ಹಬ್ಬ ಆಚರಿಸುವಂತಾಗಬೇಕು ಎಂದರು.

ವೃತ್ತ ನಿರೀಕ್ಷಕ ಬಿ.ಎಸ್.ಶಿವರುದ್ರ ಮಾತನಾಡಿ, ಹಬ್ಬದ ಪ್ರಯುಕ್ತ ಮೆರವಣಿಗೆ ನಡೆಸುವಾಗ ಎಚ್ಚರ ವಹಿಸಬೇಕು. ಹಬ್ಬದ ಕಾರ್ಯಕ್ರಮಗಳ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದರು.

ಶಾಂತಿ ಸಭೆಯಲ್ಲಿ ನಗರ ಪೊಲೀಸ್ ಠಾಣಾಧಿಕಾರಿ ರವೀಂದ್ರ ಗ್ರಾಮಾಂತರ ಠಾಣಾಧಿಕಾರಿ ಮಂಜುನಾಥ್, ಎಂ.ವೈ.ನಿಸರ್ ಅಹ್ಮದ್, ಕೆ.ಪಿ.ರಶೀದ್, ಕುಂಞ ಅಬ್ದುಲ್ಲಾ, ಬಿ.ಜಿ.ಸಾಯಿನಾಥ್, ಜೂಡಿವಾಜ್, ದಿನೇಶ್ ನಾಯರ್, ಟಿ.ಕೆ. ಸತೀಶ್, ಲೋಕೇಶ್ ಮತ್ತಿತರರು ಭಾಗವಹಿಸಿದ್ದರು.

ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ 17,79,239 ಮತದಾರರು

ಮಂಡ್ಯ,ಏ.8–ಮಂಡ್ಯ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಸಂಬಂಧಿಸಿದಂತೆ ಏ.4ರಂದು ಪ್ರಕಟವಾಗಿರುವ ಅಂತಿಮ ಮತದಾರರ ಪಟ್ಟಿಯಂತೆ 17,79,239 ಮತದಾರರಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ. ಕುಮಾರ ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳವಳ್ಳಿಯಲ್ಲಿ ಪುರುಷರು–1,26,118, ಮಹಿಳೆಯರು–1,27,487, ತೃತೀಯ ಲಿಂಗಿಗಳು–23 ಸೇರಿ ಒಟ್ಟು 2,53,628 ಮತದಾರರಿದ್ದಾರೆ. ಮದ್ದೂರಿನಲ್ಲಿ ಪುರುಷರು–1,04,280, ಮಹಿಳೆಯರು–1,11,443, ತೃತೀಯ ಲಿಂಗಿಗಳು–22 ಸೇರಿ ಒಟ್ಟು 2,15,745 ಮತದಾರರಿದ್ದಾರೆ. ಮೇಲುಕೋಟೆಯಲ್ಲಿ ಪುರುಷರು–1,00,379, ಮಹಿಳೆಯರು–1,03,010, ತೃತೀಯ ಲಿಂಗಿಗಳು–9 ಸೇರಿ ಒಟ್ಟು 2,03,398 ಮತದಾರರಿದ್ದಾರೆ ಎಂದು ವಿವರಿಸಿದರು.

ಮಂಡ್ಯ ಕ್ಷೇತ್ರದಲ್ಲಿ ಪುರುಷರು–1,11,868, ಮಹಿಳೆಯರು–1,17,759, ತೃತೀಯ ಲಿಂಗಿಗಳು–36 ಸೇರಿ ಒಟ್ಟು 2,29,663 ಮತದಾರರಿದ್ದಾರೆ. ಶ್ರೀರಂಗಪಟ್ಟಣದಲ್ಲಿ–1,06,157, ಮಹಿಳೆಯರು–1,11,427, ತೃತೀಯ ಲಿಂಗಿಗಳು– 44 ಸೇರಿ ಒಟ್ಟು 2,17,628 ಮತದಾರರಿದ್ದಾರೆ. ನಾಗಮಂಗಲದಲ್ಲಿ ಪುರುಷರು–1,07,760, ಮಹಿಳೆಯರು–1,08,783, ತೃತೀಯ ಲಿಂಗಿಗಳು–11 ಸೇರಿ ಒಟ್ಟು 2,16,554 ಮತದಾರರಿದ್ದಾರೆ. ಕೃಷ್ಣರಾಜಪೇಟೆಯಲ್ಲಿ ಪುರುಷರು–1,11,542, ಮಹಿಳೆಯರು–1,12,284, ತೃತೀಯ ಲಿಂಗಿಗಳು–11 ಸೇರಿ ಒಟ್ಟು 2,23,837 ಮತದಾರರಿದ್ದಾರೆ. ಕೃಷ್ಣರಾಜನಗರದಲ್ಲಿ ಪುರುಷರು–1,08,008, ಮಹಿಳೆಯರು–1,10,766, ತೃತೀಯ ಲಿಂಗಿಗಳು–12 ಸೇರಿ ಒಟ್ಟು 2,18,786 ಮತದಾರರಿದ್ದಾರೆ ಎಂದು ತಿಳಿಸಿದರು.

ಮಾದರಿ ನೀತಿ ಸಂಹಿತೆ ಜಾರಿಯಾದ ಮಾ.16 ರಿಂದ ಏ.7ರವರೆಗೆ 1,05,38,990 ನಗದು, 1,04,76,699 ಮೌಲ್ಯದ ಮದ್ಯ, 2,17,040 ಮೌಲ್ಯದ ಡ್ರಗ್ಸ್ ಹಾಗೂ 40,000 ಮೌಲ್ಯದ 2000 ಸೀರೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ಚುನಾವಣೆಗೆ ಸಂಬಂಧಿಸಿದಂತೆ 5 ಸಹಾಯಕ ಚುನಾವಣಾಧಿಕಾರಿ, 7 ತಹಶೀಲ್ದಾರ್, 72 ಎಫ್‌ಎಸ್‌ಟಿ, 20 ವಿಎಸ್‌ಟಿ ತಂಡಗಳ ವಾಹನಗಳಿಗೆ ಒಟ್ಟು 104 ವಾಹನಗಳಿಗೆ ಜಿಪಿಎಸ್ ಅಳವಡಿಸಲಾಗಿದೆ ಎಂದರು. ಜಿಲ್ಲಾಡಳಿತ ಮತ್ತು ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಏ.26 ರಂದು ಪ್ರತಿ ಮತದಾರರು ಮತಗಟ್ಟೆಗೆ ಆಗಮಿಸಿ ಮತ ಚಲಾಯಿಸಲು ಪ್ರಜಾಪ್ರಭುತ್ವದ ಮತದಾನ ಹಬ್ಬಕ್ಕೆ ಆಮಂತ್ರಣ ಎಂಬ ಆಹ್ವಾನ ಪ್ರತಿಗಳನ್ನು ಮುದ್ರಿಸಿ ಪ್ರತಿ ಕುಟುಂಬಗಳಿಗೆ ನೀಡಲಾಗುವುದು ಎಂದರು.

ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 1824 ಮತಗಟ್ಟೆಯಲ್ಲಿ ಕಾರ್ಯ ನಿರ್ವಹಿಸಲು 2347 ಪಿಆರ್‌ಒಗಳು, 2347 ಎಪಿಆರ್‌ಒಗಳು, 4694 ಪಿಒಗಳು, 921 ಮೈಕ್ರೋ ವೀಕ್ಷಕರು, 56 ಹೋಮ್ ವೋಟಿಂಗ್ ಮೈಕ್ರೋ ವೀಕ್ಷಕರು ಒಟ್ಟು 10365 ಸಿಬ್ಬಂದಿಗಳನ್ನು ನೇಮಕ ಮಾಡಿ ತರಬೇತಿ ನೀಡಲಾಗಿದೆ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಎಸ್ಪಿ ಎನ್.ಯತೀಶ್, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸೀಫ್, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಉಪಸ್ಥಿತರಿದ್ದರು.



ಮಂಡ್ಯ ಜಿಲ್ಲಾಧಿಕಾರಿ ಡಾ.ಕುಮಾರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಎಸ್ಪಿ ಎನ್.ಯತೀಶ್, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸೀಫ್ ಇನ್ನಿತರರು ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲೆಯಾದ್ಯಂತ 2076 ಮತಗಟ್ಟೆಗಳು

ಮತದಾನಕ್ಕಾಗಿ 2076 ಮತಗಟ್ಟೆಗಳನ್ನು ಸಿದ್ಧಪಡಿಸಲಾಗಿದ್ದು, ಎಲ್ಲಾ ರೀತಿಯ ಮೂಲ ವ್ಯವಸ್ಥೆಗಳನ್ನು ಮಾಡಿಕೊಳ್ಳಲಾಗಿದೆ. ಮಳವಳ್ಳಿ– 272, ಮದ್ದೂರು–254, ಮೇಲುಕೋಟೆ–264, ಮಂಡ್ಯ–262 ಮತ್ತು ಅಕ್ಸಿಲರಿ 2 ಒಟ್ಟು 264, ಶ್ರೀರಂಗಪಟ್ಟಣ–249, ನಾಗಮಂಗಲ–260, ಕೃಷ್ಣರಾಜಪೇಟೆ–261, ಕೆ.ಆರ್.ನಗರ–252 ಮತಗಟ್ಟೆಗಳಿವೆ ಎಂದರು.

ಜಿಲ್ಲಾದ್ಯಂತ 1037 ಮತಗಟ್ಟೆಗಳಲ್ಲಿ ವೆಬ್ ಕ್ಯಾಸ್ಟಿಂಗ್ (ಸಿಸಿ ಕ್ಯಾಮರಾ)ಗಳನ್ನು ಅಳವಡಿಸಿದ್ದು, ಮಳವಳ್ಳಿ– 136, ಮದ್ದೂರು– 127, ಮೇಲುಕೋಟೆ– 132, ಮಂಡ್ಯ– 131, ಶ್ರೀರಂಗಪಟ್ಟಣ–125, ನಾಗಮಂಗಲ– 130, ಕೃಷ್ಣರಾಜಪೇಟೆ– 130, ಕೆ.ಆರ್.ನಗರ– 126 ಸೇರಿ ಒಟ್ಟು– 1037 ಮತಗಟ್ಟೆಗಳಲ್ಲಿ ವೆಬ್‌ಕಾಸ್ಟಿಂಗ್ ಅನ್ನು ಅಳವಡಿಸಲಾಗುವುದು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಮತದಾನ ದಿನ ವೇತನ ಸಹಿತ ರಜೆ

ಏ.26ರಂದು ಮತದಾನ ನಡೆಯಲಿದ್ದು, ಮತದಾನ ದಿನದಂದು ಮತ ಚಲಾಯಿಸಲು ಅನುಕೂಲವಾಗುವಂತೆ ಅರ್ಹ ಮತದಾರರಾಗಿರುವ ಎಲ್ಲಾ ವ್ಯವಹಾರಿಕಾ ಸಂಸ್ಥೆಗಳು, ಔದ್ಯಮಿಕ ಸಂಸ್ಥೆಗಳು ಮತ್ತು ಇನ್ನಿತರೆ ಸಂಸ್ಥೆಗಳಲ್ಲಿ ಖಾಯಂ ಅಥವಾ ದಿನಗೂಲಿ ಮೇಲೆ ಕೆಲಸ ನಿರ್ವಹಿಸುತ್ತಿರುವ ನೌಕರರಿಗೆ ಪ್ರಜಾಪ್ರತಿನಿಧಿ ಕಾಯ್ದೆ–1951ರ ಕಲಂ 135(ಬಿ) ಅಡಿಯಲ್ಲಿ ಎಲ್ಲಾ ಉಪಬಂಧಗಳಿಗೆ ಒಳಪಟ್ಟು ವೇತನ ಸಹಿತ ರಜೆ ನೀಡಲಾಗುವುದು.

3644 ಮತದಾರರು ಮನೆಯಿಂದಲೇ ಮತದಾನ

85 ವರ್ಷ ಮೇಲ್ಪಟ್ಟ 2569 ಮತದಾರರು ಹಾಗೂ 1075 ವಿಕಲಚೇತನರು 12 ಡಿ ಮೂಲಕ ಮನೆಯಿಂದಲೇ ಮತದಾನ ಮಾಡಲು ಒಪ್ಪಿಗೆ ನೀಡಿರುತ್ತಾರೆ. ಇವರಿಗೆ ಮನೆಯಿಂದಲೇ ಮತದಾನ ಮಾಡಲು ಏ.16,17 ಮತ್ತು 18 ರಂದು ವ್ಯವಸ್ಥೆ ಮಾಡಲಾಗಿದೆ. ಪ್ರಸ್ತುತ ಚುನಾವಣೆಯಲ್ಲಿ ಯಾವುದೇ ಮತದಾರರಿಗೂ ಅಂಚೆ ಮತಪತ್ರದ ವ್ಯವಸ್ಥೆ ಇರುವುದಿಲ್ಲ ಎಂದರು.

ಸಣ್ಣಗೌರಮ್ಮ ನಿಧನ



ಕೆ.ಆರ್.ಪೇಟೆ: ತಾಲೂಕಿನ ರಾಜೇನಹಳ್ಳಿ ಗ್ರಾಮದ ನಿವಾಸಿ ದೇವೇಗೌಡರ ಪತ್ನಿ ಸಣ್ಣಗೌರಮ್ಮ (75) ಸೋಮವಾರ ರಾತ್ರಿ ನಿಧನರಾದರು.

ಮೃತರು ಕಾಡುಮೆಣಸ ಸರ್ಕಾರಿ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕ ಪದ್ಮೇಶ್ ಸೇರಿದಂತೆ ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಮಾರಸ್ವಾಮಿ ಸ್ಪರ್ಧಿಸುತ್ತಿರುವುದು ಜಿಲ್ಲೆಯ ಹಿತಾಸಕ್ತಿಯಿಂದಲ್ಲ

ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಹೇಳಿಕೆ



ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ಸಚಿವ ಚಲುವರಾಯಸ್ವಾಮಿ ಮಾತನಾಡಿದರು.

ಕೆ.ಆರ್.ಪೇಟೆ: ಮಂಡ್ಯ ಜಿಲ್ಲೆಯ ಉಸ್ತುವಾರಿ ಸಚಿವನಾಗಿ ಉತ್ತಮವಾಗಿ ಕೆಲಸ ಮಾಡುತ್ತಾ ಕಾಂಗ್ರೆಸ್ ಪಕ್ಷವನ್ನು ಸದೃಢವಾಗಿ ಮುನ್ನಡೆಸುತ್ತಿರುವ ನನ್ನ ಬಲವನ್ನು ಕುಗ್ಗಿಸಬೇಕೆಂಬ ಏಕೈಕ ಉದ್ದೇಶದಿಂದ ಕುಮಾರಸ್ವಾಮಿ ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿಯಾಗಿದ್ದಾರೆಯೇ ಹೊರತು, ಮಂಡ್ಯ ಜಿಲ್ಲೆಯ ಹಿತಾಸಕ್ತಿಯಿಂದಲ್ಲ ಎಂದು ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.

ಕೆ.ಆರ್.ಪೇಟೆ ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಹಡವನಹಳ್ಳಿ ಗ್ರಾಮದಲ್ಲಿ ನಡೆದ ಹೋಬಳಿಯ ಕಾಂಗ್ರೆಸ್ ಮುಖಂಡರು ಹಾಗೂ ಮುಂಚೂಣಿ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಈಗ ಮಂಡ್ಯ ಜಿಲ್ಲೆಯ ಮನೆ ಮಗ, ಉದ್ಯಮಿ ಸ್ಟಾರ್ ಚಂದ್ರು ಅವರನ್ನು ಅಭ್ಯರ್ಥಿಯನ್ನಾಗಿಸಿ ಜಿಲ್ಲೆಯಾದ್ಯಂತ ಕಾಂಗ್ರೆಸ್‌ಗೆ ಉತ್ತಮ ಜನಬೆಂಬಲ ಸಿಗುತ್ತಿರುವುದನ್ನು ಸಹಿಸದೇ ಎಚ್.ಡಿ. ಕುಮಾರಸ್ವಾಮಿ ಅವರು ತಾವೇ ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿಯಾಗಿ ಸ್ಪರ್ಧೆ ಮಾಡಿದ್ದಾರೆ. ಎಲ್ಲಿ ಕಾಂಗ್ರೆಸ್ ಅಭ್ಯರ್ಥಿ ಗೆದ್ದರೆ ಮಂಡ್ಯ ಜಿಲ್ಲೆ ತಮ್ಮ ಹಿಡಿತದಿಂದ ಜಾರಿ ಹೋಗುವುದೋ ಎಂಬ ಭಯದಿಂದ ಜಿಲ್ಲೆಯಲ್ಲಿ ಎಷ್ಟೋ ಮಂದಿ ಆಕಾಂಕ್ಷಿತರು ಇದ್ದರೂ ತಾವೇ ಸ್ಪರ್ಧೆ ಮಾಡಿದ್ದಾರೆ ಎಂದರು.

ಗೆದ್ದರೆ ಕೇಂದ್ರದಲ್ಲಿ ಕೃಷಿ ಮಂತ್ರಿಯಾಗುತ್ತೇನೆ. ಕಾವೇರಿ ಸಮಸ್ಯೆಯನ್ನು ಬಗೆಹರಿಸುತ್ತೇನೆ ಎಂದು ಹೇಳುತ್ತಿರುವ ಕುಮಾರಸ್ವಾಮಿ, ಅವರ ತಂದೆ ದೇವೇಗೌಡರು ಪ್ರಧಾನಿ,ಇವರು ಸಂಸದರಾಗಿದ್ದಾಗ ಕಾವೇರಿ ಸಮಸ್ಯೆ ಬಗೆಹರಿಸಿಲ್ಲ. ಈಗ ಬಗೆಹರಿಸಲು ಸಾಧ್ಯವೇ ಎಂದು ಪ್ರಶ್ನಿಸಿದರು. ಕುಮಾರಸ್ವಾಮಿ ಅವರು ಲೋಕಸಭೆಯಲ್ಲಿ ಗೆದ್ದರೆ ಅವರ ಪಕ್ಷವನ್ನು ಉಳಿಸಿಕೊಳ್ಳಲು ಮಾತ್ರ ಬಳಕೆ ಮಾಡಿಕೊಳ್ಳುತ್ತಾರೆ. ಆದರೆ ನಾನು ನನ್ನನ್ನು ನಂಬಿದವರ ಹಿತಕಾಯುವ ಕೆಲಸವನ್ನು ನನ್ನ ರಾಜಕೀಯ ಜೀವನದ ಆರಂಭದಿಂದಲೂ ಮಾಡಿಕೊಂಡು ಬರುತ್ತಿದ್ದೇನೆ. ಹಾಗಾಗಿ ಕೆ.ಆರ್.ಪೇಟೆ ತಾಲೂಕಿನ ಕಾಂಗ್ರೆಸ್ ಕಾರ್ಯಕರ್ತರು ನನ್ನ ಮೇಲೆ ವಿಶ್ವಾಸವಿಟ್ಟು ಪಕ್ಷದ ಅಭ್ಯರ್ಥಿ ಸ್ಟಾರ್ ಚಂದ್ರು ಅವರನ್ನು ಅತ್ಯಧಿಕ ಮತಗಳನ್ನು ನೀಡಿ ಗೆಲ್ಲಿಸಿದರೆ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಡಲಾಗುವುದು. ಸಂಸದರಾಗಿ ಸ್ಟಾರ್ ಚಂದ್ರು ಕೆಲಸ ಮಾಡಲಿದ್ದಾರೆ ಎಂದು ಸಚಿವರು ಮನವಿ ಮಾಡಿದರು.

ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹರಳಹಳ್ಳಿ ವಿಶ್ವನಾಥ್, ಕೃಷ್ಣೇಗೌಡ, ಮನ್‌ಮುಲ್ ನಿರ್ದೇಶಕ ಲಕ್ಷ್ಮಿ ನಾರಾಯಣ್, ಜಿಪಂ ಮಾಜಿ ಸದಸ್ಯ ಪ್ರಸನ್ನ ಇನ್ನಿತರರು ಭಾಗವಹಿಸಿದ್ದರು.

ಮ.ಬೆಟ್ಟದಲ್ಲಿ ಯುಗಾದಿ ಅಮಾವಾಸ್ಯೆ ಪೂಜೆ



ಮಲೆಮಹದೇಶ್ವರ ಬೆಟ್ಟದಲ್ಲಿ ಚಂದ್ರಮಾನ ಯುಗಾದಿ ಜಾತ್ರಾ ಮಹೋತ್ಸವದ ಅಮಾವಾಸ್ಯೆ ಅಂಗವಾಗಿ ಸೋಮವಾರ ನಡೆದ ಚಿನ್ನ ಹಾಗೂ ಬೆಳ್ಳಿಯ ರಥೋತ್ಸವದಲ್ಲಿ ಮಾದಪ್ಪನ ಭಕ್ತರು ಪಾಲ್ಗೊಂಡಿದ್ದರು.

ಹನೂರು, ಏ.8– ಮಲೆಮಹದೇಶ್ವರ ಬೆಟ್ಟದ ಚಂದ್ರಮಾನ ಯುಗಾದಿ ಜಾತ್ರಾ ಮಹೋತ್ಸವ ಅಂಗವಾಗಿ ಸೋಮವಾರ ಅಮಾವಾಸ್ಯೆ ವಿವಿಧ ಪೂಜಾ ಕಾರ್ಯ ನೆರವೇರಿಸಲಾಯಿತು. ಬೇಡಗಂಪಣ ಅರ್ಚಕರು ಸ್ವಾಮಿಗೆ ಮುಂಜಾನೆ ಅಭಿಷೇಕ, ಧೂಪದಾಭಿಷೇಕ, ಬಿಲ್ವಾರ್ಚನೆ, ವಿಶೇಷ ಪೂಜೆ, ಮಂಗಳಾರತಿ ನೆರವೇರಿಸಿದರು.

ವಿವಿಧ ಉತ್ಸವ: ಯುಗಾದಿ ಜಾತ್ರಾ ಮಹೋತ್ಸವದಲ್ಲಿ ಭಾಗವಹಿಸಿರುವ ಹರಕೆ ಹೊತ್ತ ಮಾದಪ್ಪನ ಭಕ್ತರು ಚಿನ್ನ ಹಾಗೂ ಬೆಳ್ಳಿಯ ರಥೋತ್ಸವ, ಬಸವ ವಾಹನ ಉತ್ಸವ, ರುದ್ರಾಕ್ಷಿ ಮಂಟಪೋತ್ಸವ, ಹುಲಿ ವಾಹನ ಉತ್ಸವ, ಮಹದೇಶ್ವರಸ್ವಾಮಿಯ ಉತ್ಸವ ಹಾಗೂ ವಿವಿಧ ಉತ್ಸವಗಳನ್ನು ನೆರವೇರಿಸಿದರು.

ಸಾಲುಗಟ್ಟಿ ನಿಂತ ಭಕ್ತರು: ಮಹದೇಶ್ವರನ ದರ್ಶನ ಪಡೆಯಲು ವಿವಿಧ ಜಿಲ್ಲೆ ಮತ್ತು ನೆರೆಯ ತಮಿಳುನಾಡಿನಿಂದ ಭಕ್ತರು ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದರು. ಈ ಹಿನ್ನೆಲೆಯಲ್ಲಿ ದೇವರ ದರ್ಶನ ಪಡೆಯಲು ಗಂಟೆಗಟ್ಟಲೆ ಸುಡು ಬಿಸಿಲನ್ನು ಲೆಕ್ಕಿಸದೆ ಸರತಿ ಸಾಲಿನಲ್ಲಿ ನಿಂತಿದ್ದರು.

ವಿಶೇಷ ಸೌಲಭ್ಯ: ಮಲೆಮಹದೇಶ್ವರ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಬೆಟ್ಟಕ್ಕೆ ಬರುವ ಭಕ್ತರಿಗೆ ಬಿಸಿಲು ಹೆಚ್ಚಾಗಿರುವುದರಿಂದ ಕೆಲ ಸ್ಥಳಗಳಲ್ಲಿ ತಣ್ಣನೆಯ ಮಡಕೆ ನೀರು ಹಾಗೂ ವಿಶೇಷ ದಾಸೋಹ, ಕಾಲ್ನಡಿಗೆಯಲ್ಲಿ ಬರುವವರು ದಣಿದಿರುವುದರಿಂದ ಮೊಸರನ್ನ ನೀಡಲಾಯಿತು.

ಬಿಗಿ ಬಂದೋಬಸ್ತ್: ಯುಗಾದಿ ಜಾತ್ರಾ ಮಹೋತ್ಸವ ಅಂಗವಾಗಿ ಮುಂಜಾಗ್ರತೆಯಾಗಿ ಕೊಳ್ಳೇಗಾಲ ಡಿವೈಎಸ್ಪಿ ಧರ್ಮೇಂದರ್ ನೇತೃತ್ವದಲ್ಲಿ ಪೊಲೀಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಚಾ.ನಗರ ಜಿಲ್ಲೆಯಲ್ಲಿ ಹೋರಾಟ ಮಾಡಿದ್ದೇನೆ

ಸಂವಾದದಲ್ಲಿ ಬಿಎಸ್‌ಪಿ ಅಭ್ಯರ್ಥಿ ಎಂ.ಕೃಷ್ಣಮೂರ್ತಿ ಹೇಳಿಕೆ



ಚಾಮರಾಜನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಬಿಎಸ್‌ಪಿ ಅಭ್ಯರ್ಥಿ ಎಂ.ಕೃಷ್ಣಮೂರ್ತಿ ಮಾತನಾಡಿದರು.

ಚಾಮರಾಜನಗರ, ಏ.8–ಜಿಲ್ಲೆಯಲ್ಲಿ ಆರೋಗ್ಯ, ಉದ್ಯೋಗ, ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಿ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ಬಿಎಸ್‌ಪಿ ಅಭ್ಯರ್ಥಿ ಎಂ.ಕೃಷ್ಣಮೂರ್ತಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ನಾನು ಜಿಲ್ಲೆಯಲ್ಲಿ ನಡೆದ ಅನೇಕ ಹೋರಾಟಗಳಲ್ಲಿ ಪಾಲ್ಗೊಂಡಿದ್ದೇನೆ. ಆದರೆ, ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳಿಗೆ ಹೋರಾಟದ ಹಿನ್ನೆಲೆ ಇಲ್ಲ. ಈ ಬಾರಿ ಲೋಕಸಭಾ ಚುನಾವಣೆಗೆ ಚಾಮರಾಜನಗರ ಕ್ಷೇತ್ರದಿಂದ ನಾನು ಸ್ಪರ್ಧಿಸಿರುವುದು ಅನಿರೀಕ್ಷಿತವಾಗಿದೆ. ಕಳೆದ 3 ತಿಂಗಳ ಹಿಂದೆ ಸಿ.ಮಹದೇವಯ್ಯ ಅವರನ್ನು ಅಭ್ಯರ್ಥಿಯನ್ನಾಗಿ ಘೋಷಣೆ ಮಾಡಿ ಚುನಾವಣಾ ತಯಾರಿಗೆ ಸೂಚನೆ ನೀಡಲಾಗಿತ್ತು. ಆದರೆ, ಅನಿವಾರ್ಯವಾಗಿ ನಾನು ಸ್ಪರ್ಧೆ ಮಾಡಬೇಕಾಯಿತು ಎಂದರು.

ನಾನು ಯಾವುದೇ ತಯಾರಿ ಇಲ್ಲದೆ ಸ್ಪರ್ಧೆ ಮಾಡಿದ್ದೇನೆ. ಚಾ.ನಗರ ಲೋಕಸಭಾ ಕ್ಷೇತ್ರದಲ್ಲಿ ಚಿರಪರಿಚಿತನಾಗಿದ್ದೇನೆ. 2001–02ರಿಂದಲೂ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿಕೊಂಡಿದ್ದೇನೆ. 2008ರಲ್ಲಿ ಉಪನ್ಯಾಸಕನಾಗಿ ವೃತ್ತಿ ಆರಂಭಿಸಿದ್ದು, 2009ರಲ್ಲಿ ರಾಜೀನಾಮೆ ನೀಡಿ ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ 25,500 ಮತಗಳಿಸಿದ್ದೆ. 2014ರಲ್ಲೂ ಮಂಡ್ಯದಿಂದ ಸ್ಪರ್ಧಿಸಿದ್ದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಮಳವಳ್ಳಿ ಹಾಗೂ ವರುಣಾ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿದ್ದೆ ಎಂದರು.

ನರೇಂದ್ರ ಮೋದಿ ಸರ್ಕಾರ 10 ವರ್ಷಗಳ ಅವಧಿಯಲ್ಲಿ ಚಾಮರಾಜನಗರ ಜಿಲ್ಲೆಗೆ 10 ಕೊಡುಗೆಗಳನ್ನು ನೀಡಿಲ್ಲ. ಹಿಂದುಳಿದ ಜಿಲ್ಲೆಗಳನ್ನು ಸ್ಮಾರ್ಟ್ ಸಿಟಿ ಮಾಡಬೇಕಿದೆ. ಬಿಜೆಪಿ ಸಂವಿಧಾನ ವಿರೋಧಿಯಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಸರಿ ಇಲ್ಲ ಎಂದು ಕ್ಷೇತ್ರದ ಜನರು ಹೇಳುತ್ತಿದ್ದಾರೆ. ಆದ್ದರಿಂದ ಈ ಬಾರಿ ನನಗೆ ಅವಕಾಶವಿದ್ದು, ಗೆಲ್ಲುವ ವಿಶ್ವಾಸವಿದೆ ಎಂದು ತಿಳಿಸಿದರು.

ಬಿಜೆಪಿ ಗೆಲ್ಲಿಸಬೇಡಿ: ಬಿಜೆಪಿಯಿಂದ ಗೆಲ್ಲುವ ಸಂಸದರು ಲೋಕಸಭೆಯಲ್ಲಿ ಬಾಯಿಗೆ ಬೀಗ ಹಾಕಿಕೊಂಡು ಕೂರುತ್ತಾರೆ. ರಾಜ್ಯದ ಸಮಸ್ಯೆಗಳ ಬಗ್ಗೆ ಮಾತನಾಡಿಲ್ಲ. ಮೋದಿ ಹಾಗೂ ಅಮಿತ್ ಷಾ ಆದೇಶ ಪಾಲನೆ ಮಾಡುತ್ತಾರೆ. 3 ಕೃಷಿ ಕಾಯ್ದೆಗಳನ್ನು ಜಾರಿಗೆ ತಂದಾಗ ಒಬ್ಬ ಸಂಸದ ಕೂಡ ಚರ್ಚೆ ಮಾಡಲಿಲ್ಲ. ಬಿಜೆಪಿಗೆ ಸಂಖ್ಯೆ ಮುಖ್ಯ ಹೊರತು, ದೇಶದ ಸಮಸ್ಯೆಯಲ್ಲ. ದೇಶದ 65 ಲಕ್ಷ ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನಿಲ್ಲಿಸಿದಾಗ ಯಾರೂ ಮಾತನಾಡಲಿಲ್ಲ. ಬಿಜೆಪಿ ಜಿಎಸ್‌ಟಿ ಹಾಕಿ ಬಡವರನ್ನು ಸುಲಿಯುತ್ತಿದೆ. ಉದ್ಯಮಿಗಳ 11 ಲಕ್ಷ ಕೋಟಿ ರೂ. ಸಾಲಮನ್ನಾ ಮಾಡಿದೆ ಎಂದು ಆರೋಪಿಸಿದರು.

ಅಪರಾಧ ಚಟುವಟಿಕೆ: ಇಬ್ಬರು ಗಡಿಪಾರು

ಚಾಮರಾಜನಗರ, ಏ.8– ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಅಪರಾಧ ಚಟುವಟಿಕೆಗಳ ಆರೋಪ ಹೊತ್ತಿರುವ ಇಬ್ಬರನ್ನು ಜಿಲ್ಲೆಯಿಂದ ಗಡಿಪಾರು ಮಾಡಿ ಉಪವಿಭಾಗಾಧಿಕಾರಿ ಆದೇಶ ನೀಡಿದ್ದಾರೆ.

ಚಾಮರಾಜನಗರ ಟೌನ್‌ನ ಗಾಳೀಪುರ ಬಡಾವಣೆಯ ನಿವಾಸಿ ರುಮಾನ್(26) ಹಾಗೂ ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಒಣಕನಪುರ ಗ್ರಾಮದ ನಿವಾಸಿ ಸಿದ್ದರಾಜು (35)ನನ್ನು ಗಡಿಪಾರಿ ಮಾಡಲಾಗಿದೆ. ಈ ಇಬ್ಬರು ಜೂ.6ರವರೆಗೆ ಜಿಲ್ಲೆಯನ್ನು ಪ್ರವೇಶಿಸುವಂತಿಲ್ಲ ಎಂದು ತಿಳಿಸಲಾಗಿದೆ.

ರುಮಾನ್ ಮೇಲೆ ಕೊಲೆ ಯತ್ನ ಪ್ರಕರಣ ಸೇರಿದಂತೆ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿದ ಪ್ರಕರಣಗಳು ದಾಖಲಾಗಿದೆ. ಸಿದ್ದರಾಜು ಮೇಲೆ 8 ಪ್ರಕರಣ ದಾಖಲಾಗಿದ್ದು, ಇವರನ್ನು ಬೀದರ್ ಜಿಲ್ಲೆಗೆ ಗಡಿಪಾರು ಮಾಡಲಾಗಿದೆ.



ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ನಿಟ್ರೆ ಗ್ರಾಮದ ಆದಿಜಾಂಬವ ಬೀದಿಯಲ್ಲಿ ಡಾ.ಬಾಬು ಜಗಜೀವನರಾಂ ಜಯಂತಿಯನ್ನು ಯಜಮಾನರು ಹಾಗೂ ಯುವಕ ಸಂಘದವರು ಆಚರಿಸಿದರು.

ಯುಗಾದಿಯಿಂದ ಯುಗಾದಿಗೆ ವರ್ಷ ಭವಿಷ್ಯ

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720





ಶ್ರೀ ಸಾಯಿನಾಥಾಯ ನಮಃ

ಶ್ರೀ ಕ್ರೋಧಿ ನಾಮ ಸಂವತ್ಸರ

ದ್ವಾದಶ ರಾಶಿಗಳ ವರ್ಷ ಭವಿಷ್ಯ ಫಲ

9.04.2024 ರಿಂದ 29.3.2025

ಶ್ಲೋಕ: ಯದುಪಚಿತಮನ್ಯ ಜನ್ಮನಿ ಶುಭಾಶುಭಂ
ತಸ್ಯ ಕರ್ಮಣಃ ಪ್ರಾಪ್ತಿಮ್ ।
ವ್ಯಞ್ಜಯತಿ ಶಾಸ್ತ್ರಮೇತತ್ತಮಸಿ
ದ್ರವ್ಯಾಣಿ ದೀಪ ಇವ॥

ಅರ್ಥ:– ಈ ಜ್ಯೋತಿಶ್ಶಾಸ್ತ್ರವು ಕತ್ತಲೆಯಲ್ಲಿರುವ ವಸ್ತುಗಳನ್ನು ಬೆಳಗಿಸುವ ದೀಪದಂತೆ ಪ್ರಾಣಿಗಳ ಜನ್ಮ ಜನ್ಮಾಂತರದ ಶುಭಾಶುಭ ಕರ್ಮಗಳನ್ನು, ಅವುಗಳ ಫಲವನ್ನು ವ್ಯಕ್ತಪಡಿಸುತ್ತದೆ.



ಮೇಷ: ಮುಂದಾಳತ್ವ ಹಾಗೂ ಆತುರದ ಗುಣವುಳ್ಳ ನಿಮಗೆ ಈವರೆಗೆ ಜನ್ಮರಾಶಿಯಲ್ಲಿದ್ದ ಶ್ರೀ ಗುರುದೇವ ದ್ವಿತೀಯ ಭಾವಕ್ಕೆ ಸರಿದು, **'ಪ್ರಾಪ್ಯಾರ್ಥೇರ್ಥಾನ್ ವ್ಯರಿರಪಿ ಕುರುತೇ ಕಾಂತಾ ಸ್ಯಾಜ್ಞೇ ಭ್ರಮರ ವಿಲಸಿತಮ್'** ಪರಾಶರೋಕ್ತಿಯಂತೆ ಕಳೆದ ಒಂದು ವರ್ಷದಿಂದ ಅನುಭವಿಸಿದ್ದ ಏಳು–ಬೀಳುಗಳು, ಕಷ್ಟ–ಕಾರ್ಪಣ್ಯಗಳು ಸೂರ್ಯನೆದುರಲಿ ಮಂಜು ಕರಗಿದಂತೆ ಮಾಯವಾಗಲಿವೆ. ನಿವೇಶನ, ಮನೆ, ವಾಹನ ಹೊಂದುವ ನಿಮ್ಮ ಬಯಕೆ ಸಾಕಾರವಾಗಲು ಶ್ರೀ ಗುರುವಿನ ಅನುಗ್ರಹವಿದೆ. ಮನೆಯಲ್ಲಿ ವಿವಾಹಾದಿ ಮಂಗಳ ಕಾರ್ಯಗಳು ನಡೆಯುವವು. ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಸಫಲರಾಗುವರು. ರಾಜಕಾರಣಿಗಳಿಗೆ ಶುಭ ಸಮಯ.

ಛಾಯಾನನ್ದನನಾದ ಶ್ರೀ ಶನಿದೇವನು ಈ ಸಂವತ್ಸರ ಪೂರ್ತ ಲಾಭ ಸ್ಥಾನದಲ್ಲಿ ಸಂಚರಿಸಲಿದ್ದು, ಕೃಷಿಕರಿಗೆ ಉತ್ತಮ ಬೆಳೆ ಹಾಗೂ ಬೆಲೆ ದೊರಕುವುದು. ಇಂಜಿನಿಯರ್ ಹಾಗೂ ಕಂಟ್ರಾಕ್ಟರುಗಳಿಗೆ ದೊಡ್ಡ ಯೋಜನೆಗಳು ದೊರೆಯಲಿದೆ. ಶತ್ರುಗಳ ಮೇಲೆ ವಿಜಯವನ್ನು ಸಾಧಿಸುವಿರಿ. ಸಾಮಾಜಿಕವಾಗಿ ನಿಮ್ಮ ಮಾನ ಗೌರವಗಳಲ್ಲಿ ವೃದ್ಧಿ ಉಂಟಾಗುವುದು.

ರಾಹು ಫಲ: ಧರ್ಮಕಾರ್ಯ ಲೋಪ, ಅನವಶ್ಯಕ ಸಂಚಾರಗಳು.
ಕೇತು ಫಲ: ಕರ್ಮದಲ್ಲಿ ಪ್ರಗತಿ, ಧನ ಸಂಪಾದನೆ, ವಿವಾದಗಳು

ಮೇಷ ರಾಶಿ ಯಂತ್ರ 1 ಮಂತ್ರ:
ಓಂ ಐಂ ಕ್ಲೀಂ ಸೌಃ ॥
ಆದಾಯ–8, ವ್ಯಯ–14

8	3	10
9	7	5
4	11	6



ವೃಷಭ: ಪರಶಿವನ ವಾಹನ ನಂದಿಯಂತೆ ಸಹಿಷ್ಣುತೆಯ ಗುಣವುಳ್ಳ ನಿಮಗೆ ಬೃಹಸ್ಪತಿಯು ಸಂವತ್ಸರ ಪೂರ್ತ ನಿಮ್ಮ ಜನ್ಮರಾಶಿಯಲ್ಲೇ ಪರಿಭ್ರಮಿಸುವುದರ ಫಲವಾಗಿ **'ಜೀವೇ ಜನ್ಮನ್ಯಪಗತಧನಧೀಃ ಸ್ಥಾನ ಭ್ರಷ್ಟೇ ಬಹು ಕಲಹ ಯುತಃ'** ಎಂಬ ಋಷಿವಾಣಿಯ ಅರ್ಥವೇನೆಂದರೆ ಜೀವಕ್ಕೆ ಹಿತವಿರದು, ಕೈಯ್ಯಲ್ಲಿ ಹಣ ನಿಲ್ಲದು, ನಿಮ್ಮ ಸ್ಥಾನಮಾನಗಳಿಗೆ ಕುಂದುಂಟಾಗುವುದು. ಹಾಗೂ ಕಲಹಗಳು, ವ್ಯಾಜ್ಯಗಳಿಂದ ಬವಣೆಪಡುವಿರಿ. ಸರಿ ಸಮಯಕ್ಕೆ ಸಮಯೋಚಿತ ಮಾತು ಹಾಗೂ ಬುದ್ಧಿಶಕ್ತಿ ಕೈ ಕೊಡುತ್ತದೆ. ಸಜ್ಜನರ ವಿರೋಧವನ್ನು ಎದುರಿಸಬೇಕಾಗುತ್ತದೆ. ಧರ್ಮ ವಿರೋಧಿ ಕೆಲಸ ಮಾಡಲು ಪ್ರೇರಣೆ ಆಗುತ್ತದೆ. **'ಓಂ ಬ್ರಂ ಬೃಹಸ್ಪತಯೇ ನಮಃ' ಮಂತ್ರ ಜಪಿಸಿ, ಔದುಂಬರ ವೃಕ್ಷ ಪ್ರದಕ್ಷಿಣೆ ಮಾಡಿ.**

ನೀಲಾಂಜನ ಸಮಭಾಸನಾದ ಶ್ರೀ ಶನಿದೇವನು ವರ್ಷ ಪೂರ್ತ ದಶಮ ಭಾವದಲ್ಲಿ ಪರಿಭ್ರಮಿಸುವುದರಿಂದ ಪದಭ್ರಷ್ಟತೆ, ಸಕಲ ಕಾರ್ಯಗಳು ಮಂದಗತಿಯಲ್ಲಿ ಸಾಗುವುದು. ಸಿಮೆಂಟ್, ಕಬ್ಬಿಣ ವ್ಯಾಪಾರಿಗಳಿಗೆ ನಿರೀಕ್ಷಿತ ರೀತಿಯಲ್ಲಿ ವ್ಯಾಪಾರವಾಗದು. ಕೃಷಿಕರಿಗೆ ಸೂಕ್ತ ರೀತಿಯಲ್ಲಿ ಬೆಳೆ ಬರದು. ಹಾಕಿದ ಬಂಡವಾಳ ಶ್ರಮ ಫಲಿಸದೆ ನಷ್ಟವನ್ನು ಅನುಭವಿಸುವರು. ವಿದ್ಯಾರ್ಥಿಗಳು ವಿದ್ಯಾಕೀರ್ತಿಗಳಿಗೆ ಭಾಜನರಾಗುವರು. ರಾಜಕೀಯದವರಿಗೆ ಸ್ಥಾನ ಲಾಭವಾದರೂ ಧನಕ್ಷಯವಾಗುವುದು.

ರಾಹುಫಲ: ಜಾಮೀನು ಸಹಿ ಮಾಡಿ ನಷ್ಟ ಸಂತಾನ ಚಿಂತೆ.
ಕೇತು ಫಲ: ಮಾನಸಿಕ ಅಶಾಂತಿ, ಉದರ ವ್ಯಾಧಿ, ತನ್ನವರಿಂದ ಶೋಕ.

ವೃಷಭರಾಶಿ ಯಂತ್ರ/ಮಂತ್ರ
ಓಂ ಐಂ ಕ್ಲೀಂ ಶ್ರೀಂ
ಆದಾಯ–2, ವ್ಯಯ–8

11	6	13
12	10	8
7	14	9



ಮಿಥುನ: ಚತುರ ಗುಣದೊಂದಿಗೆ ದ್ವಿಸ್ವಭಾವವುಳ್ಳ ನಿಮಗೆ ದೇವಗುರು ಬೃಹಸ್ಪತಿ ವ್ಯಯ ಭಾವದಲ್ಲಿ ಸಂಚರಿಸುವ ಫಲವಾಗಿ **'ದ್ವಾದಶೇ ಧ್ವನಿ ವಿಲೋಮ ದುಃಖಃ'** ಎಂಬ ಶಾಸ್ತ್ರವಾಣಿಯಂತೆ ಹಲವು ತೆರನಾದ ದುಃಖ ಪ್ರಸಂಗಗಳನ್ನು ಎದುರಿಸಬೇಕಾಗುತ್ತದೆ. ಸಂಪಾದಿಸಿದ ಹಣ ನಾನಾ ರೀತಿಯಲ್ಲಿ ವ್ಯಯವಾಗುವುದು. ನ್ಯಾಯ ಮಾರ್ಗದಲ್ಲೇ ನಡೆದರೂ ನಿರೀಕ್ಷಿತ ಫಲ ದೊರೆಯದು. ಅಡಚಣೆಗಳು, ಅಸಫಲತೆಗಳು ಎದುರಾಗುತ್ತವೆ. ಆಸ್ತಿ ಸಂಬಂಧ ವಿಷಯಗಳಲ್ಲಿ ಬಂಧುಜನರೊಡನೆ ಕಲಹಗಳು ಉಂಟಾಗುತ್ತವೆ. ವಿದ್ಯಾರ್ಥಿಗಳು ತಮ್ಮ ಗುರುಗಳ ಅವಕೃಪೆಗೆ ಗುರಿಯಾಗುವರು. ಅನಾರೋಗ್ಯ ಕಾಡುವುದು. **ಗುರು ಶಾಂತಿಗೆ 'ಓಂ ಬ್ರಂ ಬೃಹಸ್ಪತಯೇ ನಮಃ' ಮಂತ್ರ ಜಪಿಸಿ.** ಕಲಿಯುಗ ದಂಡಾಧಿಕಾರಿಯಾದ ಶ್ರೀ ಶನಿದೇವನು ಈ ದೀಪಾವಳಿಯವರೆಗೆ ನವಮ ಭಾವದಲ್ಲಿ ಕೆಲವು ಕಾಲ ವಕ್ರಿಯಾಗಿಯೂ, ಆನಂತರ ಸಂವತ್ಸರದ ಕಡೆಯವರೆಗೆ ಋಜುಮಾರ್ಗಿಯಾಗಿಯೂ ಗೋಚರಿಸುವಾಗ ಅಷ್ಟೇನೂ ಸುಖ ಸಮಯವೆಂದು ಹೇಳಲಾಗದು. ಉದ್ಯಮಪತಿಗಳು ತಮ್ಮ ಕಾರ್ಮಿಕರಿಂದ ವಿರೋಧ, ಅಸಹಕಾರವನ್ನು ಎದುರಿಸಬೇಕಾಗುವುದು. ಕುಟುಂಬ ವರ್ಗದವರೇ ನಿಮ್ಮನ್ನು ಅನುಮಾನಿಸಿ ನೋಡುವರು. ದಾರಾ–ಪುತ್ರರಲ್ಲಿ ಗೃಹ ಕಲಹಗಳಿಂದಾಗಿ ಮನಸ್ಸು ಜರ್ಝರಿತವಾಗುವುದು. ಪ್ರಯಾಣ ಕಾಲದಲ್ಲಿ ಎಡವಟ್ಟುಗಳು ಉಂಟಾಗುವ ಸಾಧ್ಯತೆ ಇರುತ್ತದೆ. **ಶ್ರೀ ಮೃತ್ಯುಂಜಯ ಮಂತ್ರ ಜಪಿಸಿ.**

ರಾಹು ಫಲ: ಕೈಗೊಂಡ ಕಾರ್ಯಗಳಲ್ಲಿ ಯಶಸ್ಸು, ನೂತನ ಉದ್ಯಮ ಸ್ಥಾಪನೆ.
ಕೇತು ಫಲ: ವಾಹನದಿಂದ ನಷ್ಟ, ತಾಯಿಗೆ ಅನಾರೋಗ್ಯ.

ಮಿಥುನ ರಾಶಿ ಯಂತ್ರ/ಮಂತ್ರ
ಓಂ ಕ್ಲೀಂ ಐಂ ಸೌಃ
ಆದಾಯ–5, ವ್ಯಯ–5

9	4	11
10	8	6
5	12	7



ಕಟಕ: ನಿಮ್ಮ ರಾಶಿ ಸ್ವಾಮಿ ಚಂದ್ರಮನಂತೆ ಚಂಚಲ ಸ್ವಭಾವವೂ, ಕರ್ತವ್ಯ ತತ್ಪರತೆಯೂ ಉಳ್ಳ ನಿಮಗೆ ಈ ಕ್ರೋಧಿನಾಮ ಸಂವತ್ಸರದಲ್ಲಿ **'ಅರ್ಕಗ್ರಸ್ತತ್ರದೋ ಭವತಿ ಲಾಭೋ ಗುರುಃ'** ಎಂಬ ಫಲದೀಪಿಕಾ ಗ್ರಂಥೋಕ್ತಿಯಂತೆ ಎಲ್ಲ ಕಡೆಯಿಂದಲೂ ಬಹು ಲಾಭವನ್ನು ಹೊಂದುವಿರಿ. ಧನ–ಧಾನ್ಯ ಲಾಭ, ಸಂಪತ್ತು, ನಿವೇಶನ, ನೂತನ ಗೃಹ, ವಾಹನಗಳನ್ನು ಹೊಂದಲು ಶ್ರೀ ಗುರುವಿನ ಕೃಪೆಯಿದೆ. ಅತುಲ ಜ್ಞಾನ ನಿಧಿ ಬೃಹಸ್ಪತಿಯ ಕರುಣೆಯಿಂದ ಉನ್ನತ ಶಿಕ್ಷಣ, ಸಂಶೋಧನೆ, ಸ್ನಾತಕೋತ್ತರ ವಿದ್ಯಾರ್ಜನೆಗಳು ಸಫಲವಾಗುವುದು. ವಿವಾಹಾಕಾಂಕ್ಷಿಗಳಿಗೆ 'ಮಧುಚಂದ್ರ'ಕ್ಕೆ ತೆರಳುವ ಯೋಗ ಬರಲಿದೆ. ಸರ್ಕಾರಿ ನೌಕರರಿಗೆ ಬಡ್ತಿ ದೊರೆಯುವುದು.

ಕಾಕ ವಾಹನನಾದ ಶ್ರೀ ಶನಿಸ್ವಾಮಿಯು ಮುಂದಿನ ಯುಗಾದಿಯವರೆಗೆ ಅಷ್ಟಮ ಭಾವದಲ್ಲಿ ಗೋಚರಿಸುವ ಪರಿಣಾಮ ಶಾರೀರಿಕವಾಗಿ, ಮಾನಸಿಕವಾಗಿ ಒತ್ತಡವನ್ನು ಅನುಭವಿಸಬೇಕಾಗುವುದು. ಪ್ರಯತ್ನ ಪೂರ್ವಕವಾಗಿ ಮಾಡಿದ ಕೆಲಸಗಳು ನಿಂತು–ನಿಂತು ಸಾಗುವುದು. ಸ್ತ್ರೀ ಪುತ್ರರಿಂದ ದೂರ ಇರಬೇಕಾದ ಪರಿಸ್ಥಿತಿ ಉಂಟಾಗುವುದು. ನೀಚ ಕರ್ಮದಲ್ಲಿ ಆಸಕ್ತಿ, ಆತುರದ ವಾಹನ ಚಾಲನೆ ಗಂಡಾಂತರವಾಗಿ ಪರಿಣಮಿಸುವುದು. **ಮೃತ್ಯುಂಜಯ ಮಂತ್ರ ಜಪಿಸಿ.**

ರಾಹು ಫಲ: ತೀರ್ಥ ಯಾತ್ರೆ ಗೃಹದಲ್ಲಿ ಶುಭ ಕಾರ್ಯ, ಹಿರಿಯರ ಅವಸಾನ.
ಕೇತು ಫಲ: ಕ್ರೀಡೆಯಲ್ಲಿ ಜಯ, ಕೀರ್ತಿ, ಲಾಭ ವರ್ಧನೆ, ಸಹೋದರರೊಂದಿಗೆ ಭೇದಾಭಿಪ್ರಾಯ.

ಕಟಕ ಯಂತ್ರ/ಮಂತ್ರ
ಓಂ ಐಂ ಕ್ಲೀಂ ಶ್ರೀಂ
ಆಯ–5, ವ್ಯಯ–11

7	2	9
8	6	4
3	10	5



ಸಿಂಹ: ವನರಾಜ ಸಿಂಹದಂತೆ ಎಲ್ಲರನ್ನೂ ಆಳ ಬಯಸುವ ನಿಮಗೆ ಶುಭಪ್ರದಾತನಾದ ಶ್ರೀ ಗುರುದೇವ **'ಸ್ಥಾನಕಲ್ಯ ಧನಹಾ ದರ್ಶಕ'** ಎಂಬ ಋಷಿ ವಾಣಿಯಂತೆ ಅಷ್ಟೇನೂ ಶುಭ ಫಲವನ್ನು ನೀಡುವುದಿಲ್ಲ. ಮಧ್ಯಮ ಫಲವೆಂದು ಹೇಳಬಹುದು. ಕೆಲ ಸಮಯ ವಕ್ರಿಯಾಗಿ, ಕೆಲ ಸಮಯ ಮಾರ್ಗಿಯಾಗಿ ಸಂಚರಿಸುವುದರಿಂದ ಲಾಭ–ನಷ್ಟಗಳು ಸಮನಾಗಿರುತ್ತವೆ. ಪರಜನರಿಂದ ನಿಮ್ಮ ಸ್ಥಾನಮಾನಗಳಿಗೆ ಧಕ್ಕೆಯಾಗುವುದು. ವ್ಯಾಪಾರ–ವ್ಯವಹಾರಗಳಲ್ಲಿ ಪ್ರತಿಸ್ಪರ್ಧೆಗಳು ಉಂಟಾಗಿ ಹಾಕಿದ ಬಂಡವಾಳಕ್ಕೆ ತಕ್ಕ ಪ್ರತಿಫಲ ದೊರೆಯದು. ಸರ್ಕಾರಿ ಅಧಿಕಾರಿಗಳಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟುವುದು. ಅನವಶ್ಯಕ ಸಂಚಾರಗಳು ಹಾಗೂ ಪರಸ್ಥಳ ವಾಸವನ್ನು ಅನುಭವಿಸಬೇಕಾಗುವುದು. ಮಂದಚಾರ ಗ್ರಹನಾದ ಶ್ರೀ ಶನಿದೇವನು ಸಂವತ್ಸರ ಪೂರ್ತ ಸಪ್ತಮದಲ್ಲಿ ಸಂಚರಿಸುವ ಪರಿಣಾಮ ವ್ಯವಹಾರಗಳಲ್ಲಿ ಕಲಹ ಹಾಗೂ ನಷ್ಟವನ್ನು ಅನುಭವಿಸುವಿರಿ. ಶ್ರೀಮತಿಯೊಂದಿಗಿನ ವಾದ–ವಿವಾದಗಳನ್ನು ಮನೆಯ ಒಳಗಡೆಯೇ ಬಗೆಹರಿಸಿಕೊಳ್ಳಿ. ಬೃಹತ್ ಉದ್ದಿಮೆದಾರರಿಗೆ ಕಾರ್ಮಿಕ ವರ್ಗದವರಿಂದ ಅಸಹಕಾರ ಹಾಗೂ ನಷ್ಟಗಳು ಉಂಟಾಗುವುದು. ಸರ್ಕಾರಿ ಅಧಿಕಾರಿಗಳಿಗೆ ಅಪವಾದಗಳು ಹಾಗೂ ಕಾನೂನು ಕ್ರಮಗಳು ಸುತ್ತಿಕೊಳ್ಳುವುದು. ನಿಮಗೂ ನಿಮ್ಮ ಸಹಧರ್ಮಿಣಿಗೂ ಅನಾರೋಗ್ಯ ಕಾಡುವ ಸಂಭವ. ಪ್ರಯಾಣ ಸಮಯದಲ್ಲಿ ಹಾನಿ ಉಂಟಾಗುವುದು.

ರಾಹು ಫಲ: ಧನ ನಷ್ಟ, ಅಪಮೃತ್ಯು ಭಯ, ಎಲ್ಲರಲ್ಲೂ ವಿರೋಧ, ಮರಣ ಶಾಸನದಿಂದ ಧನ ಲಭಿಸುತ್ತದೆ.
ಕೇತು ಫಲ: ಮಾತಿನಿಂದ ಕಲಹ, ಕುಟುಂಬದಲ್ಲಿ ಅಶಾಂತಿ, ಆರ್ಥಿಕ ಸಂಕಷ್ಟಗಳು.

ಸಿಂಹರಾಶಿ ಯಂತ್ರ/ಮಂತ್ರ
ಓಂ ಹ್ರೀಂ ಶ್ರಿಂ ಸೌಃ
ಆದಾಯ–2, ವ್ಯಯ–14

8	1	6
3	5	7
4	9	2



ಕನ್ಯಾ: ಎಲ್ಲರನ್ನೂ ಆದರಿಸುವ ಗುಣವಿರುವ ನಿಮಗೆ ದೇವಗುರು ಶ್ರೀ ಬೃಹಸ್ಪತಿಯು ಭಾಗ್ಯ ಭಾವದಲ್ಲಿ ಗೋಚರಿಸುವಾಗ **'ನೈಪುಣ್ಯಜ್ಞಾ ಪುತ್ರ ಕರ್ಮಾರ್ಥ ಸಿದ್ಧಿ ಧರ್ಮೇ ಜೀವಃ'** ಶಾಸ್ತ್ರೋಕ್ತಿಯಂತೆ, ನಿಮ್ಮ ನೈಪುಣ್ಯ ಜಾಣ್ಮೆಗಳಿಂದ ಸಕಲ ಕೆಲಸಗಳಲ್ಲೂ ಯಶಸ್ಸನ್ನು, ವಿಜಯವನ್ನು ಹೊಂದುವಿರಿ. ಹಲವರಿಗೆ ಪುತ್ರ ಸಂತಾನದ ಸಂತಸವಿದೆ. ಹೊಸ ಮನೆ ಹೊಂದುವ ಪ್ರಯತ್ನ ಮುಂದುವರೆಯಲಿ, ಗುರುಬಲವಿದೆ. 'ಪ್ರಯತ್ನ ಪುರುಷಾಧೀನ ಫಲ ದೈವಾಧೀನ'. ವಿವಾಹಯೋಗ್ಯರಿಗೆ ಸೂಕ್ತ ಬಾಳಸಂಗಾತಿ ದೊರೆಯುವರು. ಪುತ್ರ–ಪುತ್ರಿಯರ ಸಾಧನೆಯಿಂದ ಸಾಮಾಜಿಕ ಮನ್ನಣೆಗೆ ಪಾತ್ರರಾಗುವಿರಿ. ಛಾಯಾ ಮಾರ್ತಾಂಡ ಸುತನಾದ ಶ್ರೀ ಶನಿದೇವನು ಈ ಸಂವತ್ಸರದಲ್ಲಿ ಅನುಕೂಲನಿದ್ದು, ವೈಯಕ್ತಿಕವಾಗಿ, ಸಾಮಾಜಿಕವಾಗಿ ಹಲವು ರೀತಿಯ ಸಂತಸದ ಸಂಗತಿಗಳು ಘಟಿಸಲಿವೆ. ಗೃಹ ನಿರ್ಮಾಣಕ್ಕೆ ಪೂರಕ ವಾತಾವರಣ ನಿರ್ಮಾಣವಿದೆ. ಎನ್‌ಕ್ಯಾಷ್ ಮಾಡಿಕೊಳ್ಳಿ. ನ್ಯಾಯಾಲಯ ವಿಚಾರಗಳು ನಿಮ್ಮ ಪರ ಇರುವುದು. ಕಾರ್ಮಿಕ ವರ್ಗದವರಿಗೆ ಸಾಲಭಾರ ಕಳೆದು ನೆಮ್ಮದಿ ಎನ್ನಿಸುವುದು. ರಾಜಕೀಯ ಸಂಬಂಧ ಚುನಾವಣೆಯಲ್ಲಿ ಗೆಲುವನ್ನು ನಿರೀಕ್ಷಿಸಬಹುದು.

ರಾಹು ಫಲ: ದಾಂಪತ್ಯದಲ್ಲಿ ವಿರಸ, ವಾತರೋಗ, ಅಪವಾದ, ಭಯ.
ಕೇತು ಫಲ: ಉದ್ವೇಗ, ಚಿತ್ತ ಭ್ರಮೆ, ನರ ದೌರ್ಬಲ್ಯತೆ.

ಕನ್ಯಾ ರಾಶಿ ಯಂತ್ರ/ಮಂತ್ರ
ಓಂ ಶ್ರೀಂ ಐಂ ಸೌಃ
ಆದಾಯ–5 ವ್ಯಯ–5

9	4	11
10	8	6
5	12	7



ತುಲಾ: ಸಕಲ ವಿದ್ಯೆಯಲ್ಲೂ ಕೈ ಆಡಿಸುವ ರಾಶಿಗತ ಗುಣವುಳ್ಳ ನಿಮಗೆ ಕ್ರೋಧಿ ನಾಮಸಂವತ್ಸರದಲ್ಲಿ ಶ್ರೀಗುರು ನಿಮ್ಮ ಅನುಕೂಲಕ್ಕಿಲ್ಲ. ಅಷ್ಟಮ ಸಂಚಾರದ ಪರಿಣಾಮ **'ಬಂಧಂ ವ್ಯಾಧಿಂಚಾಷ್ಟಮೇ ಶೋಕಮುಗಂ ಮಾರ್ಗಕ್ಲೇಶಂ'** ಋಷಿವಾಣಿಯಂತೆ ಮೈಗೆ ಸ್ವಾಸ್ಥ್ಯ ಇರುವುದಿಲ್ಲ. ಬಂಧನದ ಭೀತಿ ಇರುತ್ತದೆ. ಕಾನೂನು ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಆಗಬೇಕಾದ ಮುಖ್ಯ ಕೆಲಸಗಳಿಗೆ ಅಡ್ಡಿ–ಅಡಚಣೆಗಳು ಉಂಟಾಗುವುದು. ನಾನಾ ರೀತಿಯ ಕ್ಲೇಶಗಳಿಂದ ಮನಸ್ಸು ಘಾಸಿಗೊಳ್ಳುವುದು. ಪ್ರಯಾಣ ಕಾಲದಲ್ಲಿ ಹಾನಿಕಾರಕ ಘಟನೆಗಳು ಸಂಭವಿಸಬಹುದು. ಗುರು ಶಾಂತಿಗೆ ಕಡಲೆಕಾಳು ದಾನ. **'ಓಂ ಬ್ರಂ ಬೃಹಸ್ಪತಯೇ ನಮಃ' ಮಂತ್ರ ಜಪಿಸಿ.**

ರವಿ ಪುತ್ರನಾದ ಶ್ರೀ ಶನಿಮಹಾತ್ಮನು ಸಂವತ್ಸರ ಪೂರ್ತಾ ಪಂಚಮದಲ್ಲಿ ಪರಿಭ್ರಮಿಸುವುದರಿಂದ ಪುತ್ರರೊಂದಿಗೆ ಕಲಹಗಳು ಉಂಟಾಗಬಹುದು. ನಿಮ್ಮವರೇ ನಿಮ್ಮನ್ನು ಕಡೆಗಣಿಸಿ ನೋಡುವರು. ಆಸ್ತಿ ವಿಷಯದಲ್ಲಿ ಬಂಧು ಜನರೊಡನೆ ವಿವಾದಗಳು ಉಂಟಾಗುವುದು. ಮನಸ್ಸು ಅಸಾಧ್ಯವಾಗಿ ವರ್ತಿಸಿ ಸರ್ವರ ವಿರೋಧವನ್ನು ಎದುರಿಸಬೇಕಾಗುವುದು. ಮಾನಸಿಕವಾಗಿ ಜರ್ಝರಿತರಾಗುವಿರಿ. **ಶ್ರೀ ವಿಷ್ಣುಸಹಸ್ರನಾಮ ಪಠಿಸಿ.**

ರಾಹು ಫಲ: ಕರ್ಮದಲ್ಲಿ ಪ್ರಗತಿ, ಶತ್ರುಗಳ ಮೇಲೆ ವಿಜಯ, ಆರ್ಥಿಕ ಅಭಿವೃದ್ಧಿ, ಕ್ರೀಡೆಯಲ್ಲಿ ಜಯ.
ಕೇತು ಫಲ: ನಾನಾ ರೀತಿಯ ಪೀಡೆಗಳು.
ಅಭಿಚಾರ ಪ್ರಯೋಗದಿಂದ ಆರೋಗ್ಯಕ್ಕೆ ಹಾನಿ

ತುಲಾ ರಾಶಿ ಯಂತ್ರ/ಮಂತ್ರ
ಓಂ ಹ್ರೀಂ ಕ್ಲೀಂ ಶ್ರೀಂ
ಆದಾಯ–2, ವ್ಯಯ–8

11	6	13
12	10	8
7	14	9



ವೃಶ್ಚಿಕ: ಗುಟ್ಟು ಬಿಟ್ಟುಕೊಡದ ಗುಣವುಳ್ಳ ನಿಮಗೆ ಸುರಗುರುವು ಈ ಸಂವತ್ಸರದಲ್ಲಿ ಕರುಣಾ ವರ್ಷವನ್ನೇ ಸುರಿಸಲಿದ್ದಾನೆ. **'ಶಯನಂ ರತಿ ಭೋಗಂ ಧನಮಶನಂ ಕುಸುಮಾನ್ಯುಪವಾಹ್ಯಂ'** ಋಷಿ ಪ್ರಣೀತದಂತೆ ಸಪ್ತಮದಲ್ಲಿ ಗೋಚರಿಸುವಾಗ ಅನೇಕ ರೀತಿಯಿಂದ ಧನ ಲಾಭವಾಗುವುದು. ಸುವರ್ಣಾದಿ ಸಂಪತ್ತು ನಿಮ್ಮದಾಗಲಿದೆ. ಬೃಹತ್ ಯೋಜನೆಗಳನ್ನು ಕೈಗೆತ್ತಿಕೊಳ್ಳುವಿರಿ. ಮನೆಯಲ್ಲಿ ವಿವಾಹಾದಿ ಮಂಗಳ ಕಾರ್ಯ ಜರುಗುವುದು. ಶಯನ ಸುಖ. ನಿಮ್ಮ ಮಾನ ಪ್ರತಿಷ್ಠೆಗಳಲ್ಲಿ ಹೆಚ್ಚಳವಾಗುವುದು. ಆರೋಗ್ಯ ಮರುಕಳಿಸುವುದು. ಯಮಾಗ್ರಜನಾದ ಶ್ರೀ ಶನಿದೇವನ ಸಂಚಾರ ಅರ್ಧಾಷ್ಟಮದಲ್ಲಿ ಇರುವ ಪರಿಣಾಮ 'ರಾಮೇಶ್ವರಕ್ಕೆ ಹೋದರೂ ಶನೇಶ್ವರ ಬಿಡ' ಎಂಬ ಗಾದೆಯಂತೆ ಪರಿಸ್ಥಿತಿ ಉಂಟಾಗುವುದು. ಯತ್ನ ಕಾರ್ಯಗಳು ಆಮೆಗತಿಯಲ್ಲಿ ಸಾಗುವುದು. ವ್ಯಾಪಾರ, ಉದ್ಯೋಗಗಳು ನೀವಂದುಕೊಂಡಂತೆ ಸಾಗದು. ಇದರಿಂದ ಸಾಲ ಮಾಡಬೇಕಾದ ಪರಿಸ್ಥಿತಿ ಎದುರಾಗುವುದು. ಆರೋಗ್ಯ ಸಮರ್ಪಕವಾಗಿರದೆ ಔಷಧೋಪಚಾರಕ್ಕೆ ಹೆಚ್ಚಿನ ಹಣ ವ್ಯಯವಾಗುವುದು. ಕೃಷಿಕರಿಗೆ ಸರಿಯಾಗಿ ಬೆಳೆಯಾಗದೆ ನಷ್ಟ ಉಂಟಾಗುವುದು. ಬಂಧು ಜನರು ದೂರ ಸರಿಯುವರು. ಮನೆ ಆಳುಗಳು ಮೋಸ ಮಾಡುವರು.

ರಾಹು ಫಲ: ಸಂತಾನ ಚಿಂತೆ, ಉದರ ವ್ಯಾಧಿ, ಆರ್ಥಿಕ ಸಂಕಷ್ಟಗಳು, ವಿದ್ಯೆಯಲ್ಲಿ ಪ್ರಗತಿ.
ಕೇತು ಫಲ: ವಿವಿಧ ಮೂಲಗಳಿಂದ ಲಾಭ, ತೀರ್ಥ ಯಾತ್ರೆ.

ವೃಶ್ಚಿಕ ರಾಶಿ ಯಂತ್ರ/ಮಂತ್ರ
ಓಂ ಐಂ ಕ್ಲೀಂ ಸೌಃ
ಆದಾಯ–8, ವ್ಯಯ–14

8	3	10
9	7	5
4	11	6



ಧನುಸು: ಪರೋಪಕಾರ ಹಾಗೂ ನಿಷ್ಪಕ್ಷ ನುಡಿಯ ಗುಣವುಳ್ಳ ನಿಮಗೆ ನಿಮ್ಮ ರಾಶ್ಯಾಧಿಪತಿ ಗುರುವು **'ನ ಸಖೀ ವದನು ತಿಲಕೋಜ್ವಲುಂನ ಭವನಂ ಶಿಖಿ ಕೋಕಿಲಾ ನಾದಿತಂ'** ಋಷಿ ವಾಕ್ಯದಂತೆ ಸುಂದರ ವನಿತೆಯ ಸಾಂಗತ್ಯ, ನಗುಮುಖ ಕಾಣಲು ಇಷ್ಟಪಡುವುದಿಲ್ಲ. ಗ್ರಾಮದಲ್ಲಾಗಲೀ, ನವಿಲಿರುವ ವನದಲ್ಲಾಗಲೀ ಶಾಂತಿಯಿಂದ ಇರಲಾರಿರಿ. ಕೋಗಿಲೆ ನಿನಾದವಾಗಲೀ, ಜಿಂಕೆಯ ನೆಗೆದಾಟವಾಗಲೀ ಮನೋಸುಖವಿರದು. ಶತ್ರುಗಳ ಉಪಟಳದಿಂದ ಮಾನಸಿಕ ಘಾಸಿ, ಕೈಯ್ಯಲ್ಲಿ ಇದ್ದ ಹಣ ಬರಿದಾಗಿ, ಸಾಲ ತರಬೇಕಾದೀತು. ಸ್ವಾಸ್ಥ್ಯವೂ ಸಮಾಧಾನಕರವಾಗಿ ಇರದೆ ಅನೇಕ ಬಾರಿ ವೈದ್ಯರ ಸಂದರ್ಶನ ಮಾಡಬೇಕಾದೀತು. **ಶ್ರೀ ಗುರು ಶಾಂತಿಗೆ ಕಡಲೆಕಾಳು ದಾನ, ವದುಂಬರ ವೃಕ್ಷ ಪ್ರದಕ್ಷಿಣೆ.**

ರಾಹುಫಲ: ಭೂ ವಿವಾದ, ಗೃಹ ಕಲಹ, ಸ್ಥಾನ ಚ್ಯುತಿ, ವಾಹನದಿಂದ ನಷ್ಟ
ಕೇತು ಫಲ: ವಿವಿಧ ರೀತಿಯ ಲಾಭ, ಧರ್ಮ ಕಾರ್ಯಾಚರಣೆ.

ಧನುಸ್ಸು ರಾಶಿಯ ಯಂತ್ರ/ಮಂತ್ರ
ಓಂಹ್ರೀಂ ಕ್ಲೀಂ ಸೌಃ
ಆದಾಯ–11, ವ್ಯಯ–5

10	15	12
11	9	7
6	13	8



ಮಕರ: ನಿಮ್ಮ ರಾಶಿ ಗುಣ ಕುಶಾಗ್ರ ಮತಿತ್ವ, ಇದನ್ನು ದ್ವಿಗುಣಗೊಳಿಸಲು ಶುಭಪ್ರದಾತನಾದ ಬೃಹಸ್ಪತಿಯು ಈ ಸಂವತ್ಸರ ಪೂರ್ತಾ ಪಂಚಮದಲ್ಲಿ ಗೋಚರಿಸುವುದರ ಪರಿಣಾಮ **'ಜನಯತಿ ಚ ತನಯ ಭುವನ ಮುಪಗತಃ ಜನಪರಿ ಶುಭ ಕರಿ ತುರಗ ವೃಷಾನ್'** ಜ್ಯೋತಿಷ ಪ್ರಣೀತದಂತೆ ಸಾರ್ವಜನಿಕರ ಸಹಕಾರ, ಚುನಾವಣೆಯಲ್ಲಿ ವಿಜಯ ಸಾಧನೆ. ಗೃಹ ನಿವೇಶನ ಹೊಂದುವ ಅವಕಾಶಗಳಂತಹ ಶುಭ ಫಲಗಳು ದೊರೆಯಲಿವೆ. ಸಂಪತ್ತು ಗಳಿಕೆ, ಆನೆ, ಕುದುರೆ, ಹಸುಗಳನ್ನು ಹೊಂದುವುದು, ಮನೆಯ ಮುಂದೆ ಚಪ್ಪರ, ತೋರಣ ಕಟ್ಟಿ ಮಂಗಳ ಕಾರ್ಯಗಳು ಜರುಗುವುದು. ವಿದ್ಯಾರ್ಥಿಗಳು ಉನ್ನತ ಶ್ರೇಣಿಯನ್ನು ಸಾಧಿಸುವರು. ದ್ವಿದಳ ಧಾನ್ಯಗಳ ಫಸಲು ಸಮೃದ್ಧಿಯಾಗಿ ಆಗುವುದು. ವಾಯಸ ವಾಹನನಾದ ಶ್ರೀ ಶನಿದೇವ ಸಾಡೇಸಾತಿಯ ದ್ವಿತೀಯ ಚರಣದಲ್ಲಿ ಸಂಚರಿಸುತ್ತಿದ್ದು, ಮನೆಯ ಒಳಗೆ ಹಾಗೂ ಹೊರಗೆ ನಾನಾ ರೀತಿಯ ಜಂಜಾಟ, ಅಗ್ನಿಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ಅಕಾರಣವಾಗಿ ಎಲ್ಲರಲ್ಲಿ ವಿರೋಧವನ್ನು ಎದುರಿಸಬೇಕಾಗುತ್ತದೆ. ಇತರರಿಂದ ಐಶ್ವರ್ಯವನ್ನು ಪಡೆದುಕೊಂಡರೂ ಸುಖವನ್ನು ಅನುಭವಿಸುವುದಿಲ್ಲ. ಜೀರ್ಣ ಶರೀರ, ತೇಜೋಹೀನವಾದ ವದನ. ಅನ್ಯರಿಂದ ಧನ ಹರಣ. **'ಓಂ ಶ್ರೀ ಶನೇಶ್ವರಾಯ ನಮಃ' ಮಂತ್ರವನ್ನು ನಿತ್ಯ 108 ಜಪಿಸಿ.**

ರಾಹು ಫಲ: ಸರ್ವ ಕೆಲಸಗಳಲ್ಲಿ ಶುಭ, ಧನ ವೃದ್ಧಿ, ಸುಖ.
ಕೇತು ಫಲ: ದಾರಿದ್ರ್ಯ, ಇಷ್ಟವಸ್ತು ವಿಯೋಗ.

ಮಕರ ರಾಶಿ ಯಂತ್ರ/ಮಂತ್ರ
ಓಂ ಐಂ ಕ್ಲೀಂ ಹ್ರೀಂ ಶ್ರೀಂ ಸೌಃ
ಆದಾಯ–14, ವ್ಯಯ–14

12	7	14
13	11	9
8	15	10



ಕುಂಭ: ಪರಹಿತ ಚಿಂತನೆ ಹಾಗೂ ವಿಚಕ್ಷಣ ಬುದ್ಧಿಯುಳ್ಳ ನಿಮಗೆ ಶ್ರೀ ಗುರುವು ಈ ಸಂವತ್ಸರದಲ್ಲಿ ಚತುರ್ಥದಲ್ಲಿ ಗೋಚರಿಸುವಾಗ ಶಾಸ್ತ್ರ ವ್ಯಾಖ್ಯೆ ಏನೆಂದರೆ **'ಜೀವೇ ಶಾಂತಿ ಪೀಡಿತ ಚಿತ್ತಶ್ಚ ಸವಿಂದೇನೈವ ಗ್ರಾಮೇನಾಪಿ ವನೇಮತ್ತ ಮಯೂರೇ'** ಎಂದರೆ ಗ್ರಾಮದಲ್ಲಿದ್ದರೂ, ನವಿಲು ಕುಣಿವ ವನದಲ್ಲಿದ್ದರೂ ಚಿತ್ತಕ್ಕೆ ಸುಖವಿರದು. ಶತ್ರು ಜನರಿಂದ ತೊಂದರೆ, ಚಿತ್ತ ಚಾಂಚಲ್ಯ, ಮನೋವಿಕಾರಗಳು, ಪ್ರಯತ್ನಪೂರ್ವಕವಾಗಿ ಮಾಡುವ ಕೆಲಸಗಳಿಗೆ ಅಡ್ಡಿ–ಆತಂಕಗಳು ಉಂಟಾಗುತ್ತದೆ. ಬುದ್ಧಿಶಕ್ತಿ ಸಮಯೋಚಿತವಾಗಿ ವರ್ತಿಸದೆ ನಷ್ಟವನ್ನು ಹೊಂದುವಿರಿ. ಬಂಧು ಜನರ ವಿರೋಧ, ಅನಿರೀಕ್ಷಿತ ಖರ್ಚುಗಳು ಮಾನಸಿಕ ಅಶಾಂತಿಗೆ ಕಾರಣವಾಗುವುದು. ತಾಳ್ಮೆಯೇ ದಿವ್ಯ ಮಂತ್ರವಾಗಿರಲಿ. **'ಓಂ ಬ್ರಂ ಬೃಹಸ್ಪತಯೇ ನಮಃ' ಮಂತ್ರ ಜಪಿಸಿ. ಔದುಂಬರ ವೃಕ್ಷ ಪ್ರದಕ್ಷಿಣೆ.**

ನಿಮ್ಮ ರಾಶ್ಯಾಧಿಪತಿಯಾದ ಶ್ರೀ ಶನಿಮಹಾರಾಜನು ನಿಮ್ಮ ಜನ್ಮರಾಶಿಯಲ್ಲೇ ಸಂಚರಿಸುವ ಪರಿಣಾಮ ಇದನ್ನು 'ಗರ್ಭ ಶನಿ' ಎಂದು ಕರೆಯಲಾಗಿದೆ ಇದರ ಪರಿಣಾಮದಿಂದ ನಾನಾ ರೀತಿಯ ಮನೋವಿಕಾರಗಳು, ಅನಾರೋಗ್ಯ, ಭೀತಿ ಪ್ರಸಂಗಗಳು, ಧನ ನಷ್ಟ, ಸ್ಥಾನ ಭ್ರಷ್ಟತೆಯಂತಹ ಪ್ರಸಂಗಗಳಿಂದ ಜೀವನ ದುಸ್ತರವೆನಿಸುವುದು. ರಾಸಾಯನಿಕ ವಸ್ತು, ವಿಷ ವಸ್ತು, ಬೆಂಕಿಯಿಂದ ಅನಾಹುತಗಳು ಸಂಭವಿಸಬಹುದು. ಆತುರದ ವಾಹನ ಚಾಲನೆ ಸಲ್ಲದು. **ಮೃತ್ಯುಂಜಯ ಮಂತ್ರ ಜಪಿಸಿ.**

ರಾಹು ಫಲ: ಸಜ್ಜನರಲ್ಲಿ ವಿರೋಧ, ನ್ಯಾಯಾಲಯ ವಿಚಾರದಲ್ಲಿ ನಷ್ಟ
ಕೇತು ಫಲ: ಅಪಮೃತ್ಯು ಭಯ, ಮರಣ ಶಾಸನದಿಂದ ಧನ ಲಾಭ.

ಕುಂಭ ರಾಶಿ ಯಂತ್ರ/ಮಂತ್ರ
ಓಂ ಹ್ರೀಂ ಐಂ ಕ್ಲೀಂ ಶ್ರೀಂ
ಆದಾಯ–14, ವ್ಯಯ–14

13	8	15
14	12	10
9	16	11



ಮೀನ: ಪಾಂಡಿತ್ಯದ ಜೊತೆ ದ್ವಿಸ್ವಭಾವ ಗುಣ ಹೊಂದಿರುವ ನಿಮಗೆ ತೃತೀಯದಲ್ಲಿ ಪರಿಭ್ರಮಿಸುವ ಶ್ರೀಗುರುವು **'ಸ್ಥಾನ ಭ್ರಂಶಾತ್ಕಾಯಃ ವಿಘಾತಶ್ಚ ತೃತೀಯ'** ಎಂಬ ಜ್ಯೋತಿರ್ವಾಣಿಯಂತೆ ನಿಮ್ಮ ಈಗಿರುವ ಸ್ಥಾನಕ್ಕೆ ಚ್ಯುತಿ ಉಂಟಾಗುವುದು. ಆಗಬೇಕಾದ ಜರೂರು ಕೆಲಸಗಳಿಗೆ ವಿಘ್ನಗಳು ಉಂಟಾಗುವುದು. ಬಂಧು ಜನರ ವಿರೋಧದ ನಡುವೆ ನಾನಾ ರೀತಿಯ ಪರೀಕ್ಷೆಗಳನ್ನು ಎದುರಿಸಬೇಕಾಗುವುದು. ಸ್ವಸ್ಥಳವನ್ನು ಬಿಟ್ಟು ಪರಸ್ಥಳ ವಾಸವನ್ನು ಅನುಭವಿಸಬೇಕಾಗುವುದು. ನೆರೆಹೊರೆಯವರಲ್ಲಿ ವಾಗ್ವಾದ, ಕಲಹಗಳಿಂದ ಮಾನಸಿಕವಾಗಿ ಘಾಸಿಯನ್ನು ಅನುಭವಿಸುವಿರಿ. ಆಗಾಗ ಅನಾರೋಗ್ಯ ಕಾಡುವುದರಿಂದ ವೈದ್ಯಕೀಯ ಖರ್ಚುಗಳು ಕೈಮೀರುವುದು. **ಶ್ರೀ ಗುರು ಶಾಂತಿಗೆ ಕಡಲೆ ಕಾಳು ದಾನ. 'ಓಂ ಬ್ರಂ ಬೃಹಸ್ಪತಯೇ ನಮಃ' ಮಂತ್ರ ಜಪಿಸಿ. ಔದುಂಬರ ವೃಕ್ಷ ಪ್ರದಕ್ಷಿಣೆ.** ನೀತಿ ಮಾರ್ಗ ಕೋವಿದನಾದ ಶ್ರೀ ಶನಿಯ ಸಾಡೇಸಾತಿ ಪ್ರಥಮ ಚರಣದಲ್ಲಿರುವ ನಿಮಗೆ ಇದು ವ್ಯಯಸ್ಥಾನ ಸಂಚಾರವಾಗಿದ್ದು, ನಾನಾ ರೀತಿಯ, ನೀವು ನಿರೀಕ್ಷೆ ಮಾಡಿರದ ಖರ್ಚು–ವೆಚ್ಚಗಳು ಎದುರಾಗುತ್ತವೆ. ನಿಮ್ಮ ಗೌರವ ಪ್ರತಿಷ್ಠೆಗಳಿಗೆ ಧಕ್ಕೆ ಉಂಟಾಗುವುದು. ದರಿದ್ರತ್ವ, ಯಶೋನಾಶ, ನ್ಯಾಯವಾದ ಕಾರ್ಯದಲ್ಲಿ ಅಸಫಲತೆ ಉಂಟಾಗುತ್ತದೆ. ಧನ–ಸಂಪತ್ತಿನ ಹೇತುವಿನಿಂದ ದುಃಖ. ಆರೋಗ್ಯ ಸಮರ್ಪಕವಾಗಿರದು. ಆಸ್ತಿ ಪರರ ಪಾಲಾಗುವ ಸಾಧ್ಯತೆ ಇರುತ್ತದೆ.

ರಾಹು ಫಲ: ಧನ ಚಿಂತೆ, ಸ್ಥಾನ ಚ್ಯುತಿ, ಮಾನಸಿಕ ಚಿಂತೆ.
ಕೇತು ಫಲ: ವಾತ ರೋಗ, ದಾಂಪತ್ಯದಲ್ಲಿ ವಿರಸ, ಪಾಲುದಾರಿಕೆಯಲ್ಲಿ ಹಾನಿ

ಮೀನ ರಾಶಿ ಯಂತ್ರ/ಮಂತ್ರ
ಓಂ ಹ್ರೀಂ ಕ್ಲೀಂ ಸೌಃ
ಆದಾಯ–11, ವ್ಯಯ–5

14	9	16
15	13	11
10	17	12

ಶ್ರೀ ಕ್ರೋಧಿ ನಾಮ ಸಂವತ್ಸರದ ನವನಾಯಕರು

ಹಿಂದು ಸನಾತನ ಸಂಸ್ಕೃತಿಯ ಪ್ರಕಾರ ಪ್ರತಿ ಸಂವತ್ಸರಕ್ಕೆ ನವಗ್ರಹಗಳು ತಮ್ಮ ತಮ್ಮ ಖಾತೆಗಳನ್ನು ಅಲಂಕರಿಸುವ ಶುಭ ಘಳಿಗೆಯೇ ಯುಗಾದಿ, ಚೈತ್ರಮಾಸದ ಪ್ರಥಮ ದಿನ. ನವಗ್ರಹಗಳ ರಾಜನಾದ, ಆತ್ಮಕಾರಕನಾದ ರವಿಯಿಂದ ಆತ್ಮೋನ್ನತಿಯನ್ನೂ, ಮನೋಕಾರಕನಾದ ಚಂದ್ರನಿಂದ ಮನಃ ಸ್ವಾಸ್ಥ್ಯವನ್ನೂ, ಧೈರ್ಯಕಾರಕನಾದ ಕುಜನಿಂದ ವೀರ್ಯ ಸಾಹಸಗಳನ್ನೂ, ಬುದ್ಧಿಕಾರಕನಾದ ಬುಧನಿಂದ ಸದ್ಬುದ್ಧಿಯನ್ನೂ, ಜ್ಞಾನಕಾರಕನಾದ ಗುರುವಿನಿಂದ ಪಾರಮಾರ್ಥಿಕ ಜ್ಞಾನವನ್ನೂ, ಕಳತ್ರಕಾರಕನಾದ ಶುಕ್ರನಿಂದ ಸುಖ ದಾಂಪತ್ಯವನ್ನೂ ಆಯುಃಕಾರಕನಾದ ಶನಿದೇವನಿಂದ ದೀರ್ಘಾಯುಷ್ಯವನ್ನೂ, ರಾಹುವಿನಿಂದ ಸಮಯಪ್ರಜ್ಞೆಯನ್ನೂ, ಕೇತು ಗ್ರಹದಿಂದ ಮೋಕ್ಷಾಪೇಕ್ಷೆಯನ್ನೂ ಪ್ರಾರ್ಥಿಸಿ ಯುಗಾದಿಯಂದು ಸಮರಸವಾಗಲಿ. ನಮ್ಮ ಜೀವನ ಎಂಬ ಆಶಯದಿಂದ ಬೇವು–ಬೆಲ್ಲವನ್ನು ತಿಂದು ಪಂಚಾಂಗ ಶ್ರವಣ ಮಾಡಬೇಕೆಂದು ನಮ್ಮ ಸ್ಮೃತಿ, ಶೃತಿ, ಶಾಸ್ತ್ರಗಳು ಸಾರುತ್ತಿವೆ.

ಬೇವು–ಬೆಲ್ಲ ತಿನ್ನುವಾಗ ಹೇಳಬೇಕಾದ ಶ್ಲೋಕ
ಶತಾಯುರ್ವಜ್ರ ದೇಹಾಯ
ಸರ್ವ ಸಂಪತ್ಕರಾಯ ಚ ।
ಸರ್ವಾರಿಷ್ಟ ವಿನಾಶಾಯ
ನಿಂಬಕ ದಳ ಭಕ್ಷಣಂ ॥

ಪ್ರತಿ ಸಂವತ್ಸರಕ್ಕೆ ಒಬ್ಬ ಅಧಿದೇವತೆ ಇರುತ್ತಾರೆ. ಈ ಸಂವತ್ಸರದ ಅಧಿ ದೇವತೆಯ ಹೆಸರು. **'ಅಜಿತ ಪ್ರಭವ'** ಎಂದು.

ಸಂವತ್ಸರದ ರಾಜ ಕುಜನ ಫಲ: ಮಳೆ–ಬೆಳೆಗಳು ಸ್ವಲ್ಪವಾದರೂ ಕೆಂಪು ಭೂಮಿ, ಕೆಂಪು ಧಾನ್ಯಗಳು ಉತ್ತಮವಾಗಿ ಫಲಿಸುತ್ತವೆ. ಭೂ ಮಂಡಲದಲ್ಲಿ ಅಗ್ನಿಭಯ, ಕೊಲೆ, ಕಲಹಗಳು ಸಂಭವಿಸುತ್ತವೆ. ಚೋರರ ಹಾವಳಿ ಹೆಚ್ಚಾಗುವುದು. ರಾಜಕೀಯ ನಾಯಕರಲ್ಲಿ ಘರ್ಷಣೆಗಳು ಹೆಚ್ಚುತ್ತವೆ.

ಮಂತ್ರಿ ಶನಿ ಫಲ: ನಾಡ ನಾಯಕರು, ಅಧಿಕಾರಿಗಳು ಉದ್ಧಟತನದಿಂದ ವರ್ತಿಸುವರು. ಮಳೆಯು ಸಕಾಲಕ್ಕೆ ಆಗದಿರುವುದರಿಂದ ಕೃಷಿಕರಿಗೆ ಪರಿತಾಪವಾಗುವುದು. ಜನರಲ್ಲಿ ಅಶಾಂತಿ ಉಂಟಾಗುವುದು. ದೇಶೋನ್ನತಿಯ ಕಾರ್ಯಗಳಿಗೆ ಅಡ್ಡಿ–ಅಡಚಣೆಗಳು ಎದುರಾಗುವುದು.

ಸೇನಾಧಿಪತಿ ಶನಿ ಫಲ: ದೇಶದ ಸೇನೆ ಸದಾ ಸನ್ನದ್ಧವಾಗಿರಬೇಕಾಗುತ್ತದೆ. ನೆರೆ–ಹೊರೆಯ ದೇಶಗಳಿಂದ ಯುದ್ಧಭೀತಿ ಉಂಟಾಗುತ್ತದೆ. ಜನರು ಅಧರ್ಮ ಮಾರ್ಗಾವಲಂಬಿಗಳಾಗುವರು. ಕಪ್ಪು ಧಾನ್ಯಗಳು ಹೆಚ್ಚು ಫಲಿಸುವುದು. ಕಪ್ಪು ಬಣ್ಣದ ವಸ್ತುಗಳಿಗೆ ಬೆಲೆ ಹೆಚ್ಚಾಗುವುದು.

ಸಸ್ಯಾಧಿಪತಿ ಕುಜ ಫಲ: ಆನೆ, ಕುದುರೆ, ಕತ್ತೆ, ಒಂಟೆ ಮತ್ತು ಆಕಳು ಮೊದಲಾದ ಪಶುಗಳು ರೋಗ ಪೀಡಿತವಾಗುವವು. ಅತಿವೃಷ್ಟಿಯಿಂದ ಬೆಳೆಗಳು ನಾಶವಾಗಿ ಅಲ್ಪ ಫಲ, ದ್ವಿದಳ ಧಾನ್ಯಗಳು ಹೆಚ್ಚು ಫಲಿಸುವುದಿಲ್ಲ. ಕೃಷಿಕರಲ್ಲಿ ಅಸಂತುಷ್ಟಿ ಇರುತ್ತದೆ.

ಧಾನ್ಯಾಧಿಪತಿ ಚಂದ್ರ ಫಲ: ದೇಶದಲ್ಲಿ ಜನರು ನಿರೋಗಿಗಳಾಗುವರು. ಗೋ–ಮಹಿಷಾದಿಗಳು ಸಮೃದ್ಧಿಯಾಗಿ ಹಾಲು ಕರೆಯುವುದು. ಬಿಳಿ ಧಾನ್ಯಗಳು, ಗೋಧಿ, ಕಡಲೆ ಕಾಳುಗಳು ಸಮೃದ್ಧಿಯಾಗಿ ಬೆಳೆಯುವುದು.

ಅರ್ಘ್ಯಾಧಿಪತಿ ಶುಕ್ರ ಫಲ: ಎಲ್ಲಾ ವಿಧದ ವಸ್ತುಗಳ ವ್ಯಾಪಾರವೂ ಸಮತ್ವದಲ್ಲಿರುವುದು. ಶ್ವೇತ ಧಾನ್ಯಗಳು, ಹತ್ತಿ ಬೆಲೆ ಹೆಚ್ಚು ಫಲಿಸುವುದು. ಆರ್ಥಿಕ ಪರಿಸ್ಥಿತಿ ತೃಪ್ತಿಕರವಾಗಿರುವುದು.

ಮೇಘಾಧಿಪತಿ ಶನಿ ಫಲ: ಆಗಾಗ ವಾಯುಭಾರ ಕುಸಿತ ಉಂಟಾಗುವುದು. ಬಿರುಗಾಳಿಯಿಂದ ಹಾನಿ ಉಂಟಾಗುವುದು. ಕಪ್ಪು ಧಾನ್ಯಗಳು ಹೆಚ್ಚು ಫಲಿಸುವುವು. ಕಬ್ಬಿಣ, ಸೀಸ, ತವರ, ಉಕ್ಕು ಬೆಲೆಗಳು ಹೆಚ್ಚುವುದು.

ರಸಾಧಿಪತಿ ಗುರು ಫಲ: ಸಾಕಾಗುವಷ್ಟು ಮಳೆಯಾಗಿ ಹಣ್ಣು–ತರಕಾರಿಗಳು ಹುಲುಸಾಗಿ ಬೆಳೆಯುವುದು. ಹಸು, ಎಮ್ಮೆಗಳು ಹಾಲನ್ನು ಸಮೃದ್ಧಿಯಾಗಿ ಕೊಡುವುದು. ಯಜ್ಞ ಯಾಗಾದಿ ಸತ್ಕಾರ್ಯಗಳು ಜರುಗುವುದು.

ನೀರಸಾಧಿಪತಿ ಚಂದ್ರ ಫಲ: ಸಮಸ್ತ ಬಿಳಿಯ ಬಣ್ಣದ ವಸ್ತುಗಳು, ಅರಳೆ ವಸ್ತುಗಳು ಬೆಳ್ಳಿ, ಮುತ್ತುಗಳು ವಿಶೇಷ ತೇಜಿಯಾಗುವುದು.

ಪಶು ಪಾಲಕ ಯಮ ಫಲ: ಅನಾವೃಷ್ಟಿಯ ಮೂಲಕ ಹುಲ್ಲು ಮೇವು ಅಲ್ಪವಾಗಿ ಬೆಳೆಯುವುವು. ಪಶು ಸಂಗೋಪನೆಯಲ್ಲಿ ಸಮಸ್ಯೆಗಳು ಉಂಟಾಗುತ್ತದೆ. ಪಶುಗಳಿಗೆ ರೋಗ ಬಾಧೆ ಉಂಟಾಗುತ್ತದೆ.

ಒಂದನೇ ಪುಟದಿಂದ

ಎನ್‌ಡಿಎ Vs ಕಾಂಗ್ರೆಸ್ ಹಣಾಹಣಿ

ಬಂದರೂ ಅವರು ಮೈಸೂರು–ಕೊಡಗು ಕ್ಷೇತ್ರವನ್ನೂ ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಈಗಾಗಲೇ ಅವರು ಈ ಕ್ಷೇತ್ರಗಳಲ್ಲಿ ಬಿರುಸಿನ ಪ್ರಚಾರ ನಡೆಸಿ ಬಿಜೆಪಿ ಮುಷ್ಠಿಯಲ್ಲಿರುವ ಬೆಂಗಳೂರು ಕ್ಷೇತ್ರಗಳನ್ನೂ ತಮ್ಮದಾಗಿಸಿಕೊಳ್ಳಲು ಕಳೆದ ಎರಡು ದಿನಗಳಿಂದ ಬಿರುಸಿನ ರೋಡ್ ಶೋ ನಡೆಸಿದ್ದಾರೆ. ಮತದಾನಕ್ಕೆ ಇನ್ನು ಕೇವಲ 20 ದಿನ, ಆದರೆ ಪ್ರಚಾರಕ್ಕೆ ಉಳಿದಿರುವುದೇ 18 ದಿನಗಳು. ಇಷ್ಟರಲ್ಲಿ ಮತದಾರರನ್ನು ಯಾರು ಓಲೈಸಿಕೊಳ್ಳುವರೋ ಅವರು ಜಯದ ಮಾಲೆ ಧರಿಸುತ್ತಾರೆ. ರಾಜ್ಯದ ಉಳಿದ 14 ಕ್ಷೇತ್ರಗಳಿಗೆ ಮೇ 7ರಂದು ಚುನಾವಣೆ ನಡೆಯಲಿದ್ದು, ಅತ್ತ ಕಡೆಗೆ ಪಕ್ಷದ ಮುಖಂಡರು ಇನ್ನೂ ಗಮನ ಹರಿಸಿಲ್ಲ, ಎಲ್ಲರೂ ಮೊದಲ ಹಂತದ ಕಡೆಯೇ ಹೆಚ್ಚು ಗಮನ ಕೇಂದ್ರೀಕರಿಸಿದ್ದಾರೆ.

14 ಕ್ಷೇತ್ರಗಳಲ್ಲಿ ಕಣಕ್ಕಿಳಿದಿರುವ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳ ಪಟ್ಟಿ ಇಂತಿದೆ;–

ಸಾರ್ವತ್ರಿಕ ಲೋಕಸಭಾ ಚುನಾವಣೆ

ಕ್ಷೇತ್ರಗಳು	ಬಿಜೆಪಿ/ಜೆಡಿಎಸ್ ಮೈತ್ರಿ ಅಭ್ಯರ್ಥಿಗಳು		ಕಾಂಗ್ರೆಸ್
ಉಡುಪಿ–ಚಿಕ್ಕಮಗಳೂರು	ಕೋಟಾ ಶ್ರೀನಿವಾಸ ಪೂಜಾರಿ (ಬಿಜೆಪಿ)	V/s	ಜಯಪ್ರಕಾಶ್ ಹೆಗ್ಡೆ
ಹಾಸನ	ಪ್ರಜ್ವಲ್ ರೇವಣ್ಣ (ಜೆಡಿಎಸ್)	V/s	ಶ್ರೇಯಸ್‌ಪಟೇಲ್ ಗೌಡ
ದಕ್ಷಿಣ ಕನ್ನಡ	ಬ್ರಿಜೇಶ್ ಚೌಟ (ಬಿಜೆಪಿ)	V/s	ಪದ್ಮರಾಜ್
ಚಿತ್ರದುರ್ಗ	ಗೋವಿಂದ ಕಾರಜೋಳ (ಬಿಜೆಪಿ)	V/s	ಬಿ.ಎನ್. ಚಂದ್ರಪ್ಪ
ತುಮಕೂರು	ವಿ.ಸೋಮಣ್ಣ (ಬಿಜೆಪಿ)	V/s	ಎಸ್.ಪಿ.ಮುದ್ದಹನುಮೇಗೌಡ
ಮಂಡ್ಯ	ಎಚ್.ಡಿ. ಕುಮಾರಸ್ವಾಮಿ (ಜೆಡಿಎಸ್)	V/s	ವೆಂಕಟರಮಣೇಗೌಡ
ಮೈಸೂರು	ಯದುವೀರ್ ಒಡೆಯರ್ (ಬಿಜೆಪಿ)	V/s	ಎಂ.ಲಕ್ಷ್ಮಣ
ಚಾಮರಾಜನಗರ	ಎಸ್.ಬಾಲರಾಜ್ (ಬಿಜೆಪಿ)	V/s	ಸುನೀಲ್ ಬೋಸ್
ಬೆಂಗಳೂರು ಗ್ರಾ.	ಡಾ.ಸಿ.ಎನ್.ಮಂಜುನಾಥ್ (ಬಿಜೆಪಿ)	V/s	ಡಿ.ಕೆ.ಸುರೇಶ್
ಬೆಂಗಳೂರು ಉತ್ತರ	ಶೋಭಾ ಕರಂದ್ಲಾಜೆ (ಬಿಜೆಪಿ)	V/s	ರಾಜೀವ್‌ಗೌಡ
ಬೆಂಗಳೂರು ಕೇಂದ್ರ	ಪಿ.ಸಿ.ಮೋಹನ್ (ಬಿಜೆಪಿ)	V/s	ಮನ್ಸೂರ್ ಆಲಿಖಾನ್
ಬೆಂಗಳೂರು ದಕ್ಷಿಣ	ತೇಜಸ್ವಿ ಸೂರ್ಯ (ಬಿಜೆಪಿ)	V/s	ಸೌಮ್ಯ ರೆಡ್ಡಿ
ಚಿಕ್ಕಬಳ್ಳಾಪುರ	ಡಾ.ಕೆ.ಸುಧಾಕರ್ (ಬಿಜೆಪಿ)	V/s	ರಕ್ಷಾ ರಾಮಯ್ಯ
ಕೋಲಾರ	ಎಂ.ಮಲ್ಲೇಶ್‌ಬಾಬು (ಜೆಡಿಎಸ್)	V/s	ಕೆ.ವಿ.ಗೌತಮ್

ಲೋಕ ಸಮರ ಕಣ ಮುಕ್ತ

ಬಹುಜನ ಸಮಜ ಪಕ್ಷ(ಬಿಎಸ್‌ಪಿ)ದ ರೇವತಿರಾಜ್, ಪಕ್ಷೇತರರಾದ ಡಿ. ರಾಮಯ್ಯ, ಡಿ.ಎನ್.ನವೀನ್ ಕುಮಾರ್ ಹಾಗೂ ಜೆ.ಶಿವಕುಮಾರ ಅವರ ನಾಮಪತ್ರಗಳು ತಿರಸ್ಕೃತಗೊಂಡಿದ್ದವು.

ನಾಮಪತ್ರ ಹಿಂಪಡೆಯಲು ನಿಗಧಿಯಾಗಿದ್ದ ಕಡೇ ದಿನವಾದ ಇಂದು ಪಕ್ಷೇತರರಾದ ಎಸ್.ದೊರೆಸ್ವಾಮಿ, ಶಿವನಂಜಯ್ಯ, ಎಂ.ಶ್ರೀನಿವಾಸ್, ಸಣ್ಣ ನಾಯಕ, ರಾಜಣ್ಣ ಹಾಗೂ ಆರ್. ಮಹೇಶ್ ನಾಮಪತ್ರ ಹಿಂಪಡೆದಿದ್ದು, ಬಿಜೆಪಿಯ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಕಾಂಗ್ರೆಸ್‌ನ ಎಂ.ಲಕ್ಷ್ಮಣ, ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ(ಕಮ್ಯೂನಿಸ್ಟ್)ಯ ವಿ.ಆರ್.ಸುನಿಲ್, ಕರ್ನಾಟಕ ರಾಷ್ಟ್ರ ಸಮಿತಿಯ ಎಂ.ಎಸ್.ಪ್ರವೀಣ್, ಅಖಿಲ ಭಾರತ ಹಿಂದೂ ಮಹಾಸಭಾದ ಎ.ಎಸ್.ಸತೀಶ್, ಕರುನಾಡು ಪಾರ್ಟಿಯ ಹೆಚ್.ಕೆ.ಕೃಷ್ಣ, ಉತ್ತಮ ಪ್ರಜಾಕೀಯ ಪಕ್ಷದ ಜೆ.ಎಸ್.ಲೀಲಾವತಿ, ಸೋಷಿಯಲಿಸ್ಟ್ ಪಾರ್ಟಿ(ಇಂಡಿಯಾ)ದ ಎನ್. ಹರೀಶ್, ಇಂಡಿಯನ್ ಮೂವ್‌ಮೆಂಟ್ ಪಾರ್ಟಿಯ ಕ್ರಿಸ್ಟೋಫರ್ ರಾಜಕುಮಾರ್, ಸಮಜವಾದಿ ಜನತಾ ಪಾರ್ಟಿ(ಕರ್ನಾಟಕ)ಯ ಹೆಚ್.ಎಂ.ನಂಜುಂಡಸ್ವಾಮಿ, ಕರ್ನಾಟಕ ಜನತಾ ಪಕ್ಷದ ಎನ್. ಅಂಬರೀಶ್, ಜಾತ್ಯಾತೀತ ಪ್ರಜಾಪ್ರಭುತ್ವ ಕಾಂಗ್ರೆಸ್‌ನ ಎ.ಜಿ.ರಾಮಚಂದ್ರರಾವ್, ಪಕ್ಷೇತರರಾದ ಪಿ.ಎಸ್.ಯಡೂರಪ್ಪ, ಎಂ.ರಂಗಸ್ವಾಮಿ, ಎಂ.ರಾಮಮೂರ್ತಿ, ಪಿ.ಕೆ.ದರ್ಶನ್, ರಾಜು, ಸಿ.ಜೆ.ಅಂಬೇಡ್ಕರ್ ಸೇರಿದಂತೆ 18 ಅಭ್ಯರ್ಥಿಗಳು ಅಂತಿಮ ಕಣದಲ್ಲಿದ್ದಾರೆ.

ಮಂಡ್ಯ: ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಸೇರಿದಂತೆ ಒಟ್ಟು 14 ಅಭ್ಯರ್ಥಿಗಳು ಅಂತಿಮ ಕಣದಲ್ಲಿದ್ದಾರೆ.

ನಾಮಪತ್ರ ಸಲ್ಲಿಸಿದ್ದ ಒಟ್ಟು 27 ಅಭ್ಯರ್ಥಿಗಳ ಪೈಕಿ 8 ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತವಾಗಿದೆ. ನಾಮಪತ್ರ ಹಿಂಪಡೆಯುವ ಕೊನೆಯ ದಿನಾಂಕವಾದ ಇಂದು ಪಕ್ಷೇತರ ಅಭ್ಯರ್ಥಿಗಳಾದ ಚಿಕ್ಕನಂಜಾಚಾರಿ, ಕೆ.ಶಿವಾನಂದ, ಲೋಲ, ಯೋಗೇಶ್ ಮತ್ತು ಶಿವನಂಜಪ್ಪ ನಾಮಪತ್ರಗಳನ್ನು ಹಿಂಪಡೆದಿದ್ದು, ಅಂತಿಮವಾಗಿ ಈ ಕೆಳಕಂಡ ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ.

ಹೆಚ್.ಡಿ.ಕುಮಾರಸ್ವಾಮಿ–ಜನತಾ ದಳ(ಜಾತ್ಯತೀತ), ವೆಂಕಟರಮಣೇ ಗೌಡ(ಸ್ಟಾರ್ ಚಂದ್ರು)– ಭಾರತೀಯ ರಾಷ್ಟ್ರೀಯ ಕಾಂಗ್ರೆಸ್, ಶಿವಶಂಕರ್. ಎಸ್–ಬಹುಜನ ಸಮಾಜ ಪಾರ್ಟಿ, ಚಂದ್ರಶೇಖರ ಕೆ.ಆರ್– ಕರ್ನಾಟಕ ರಾಷ್ಟ್ರ ಸಮಿತಿ, ಬೂದಯ್ಯ– ಕರುನಾಡು ಪಾರ್ಟಿ, ಹೆಚ್.ಡಿ ರೇವಣ್ಣ– ಪೂರ್ವಾಂಚಲ್ ಮಹಾ ಪಂಚಾಯತ್ ಪಾರ್ಟಿ, ಲೋಕೇಶ.ಎಸ್– ಉತ್ತಮ ಪ್ರಜಾಕೀಯ ಪಕ್ಷ, ಪಕ್ಷೇತರರಾದ ಎಸ್.ಅರವಿಂದ್, ಚನ್ನಮಾಯಿಗೌಡ, ಚಂದನ್‌ಗೌಡ.ಕೆ, ಎನ್.ಬಸವರಾಜು, ಬೀರೇಶ್.ಸಿ.ಟಿ, ರಾಮಯ್ಯ.ಡಿ ರಂಜಿತ. ಎನ್ ಸೇರಿದಂತೆ ಒಟ್ಟು 14 ಅಭ್ಯರ್ಥಿಗಳು ಅಂತಿಮ ಕಣದಲ್ಲಿದ್ದಾರೆ.

ಚಾಮರಾಜನಗರ: ಚಾಮರಾಜನಗರ ಮೀಸಲು ಕ್ಷೇತ್ರದಲ್ಲಿ 8 ಅಭ್ಯರ್ಥಿಗಳು ಉಮೇದುವಾರಿಕೆ ಹಿಂಪಡೆದಿದ್ದು, ಬಿಜೆಪಿಯ ಎಸ್.ಬಾಲರಾಜು, ಕಾಂಗ್ರೆಸ್‌ನ ಸುನೀಲ್ ಬೋಸ್ ಸೇರಿ 14 ಅಭ್ಯರ್ಥಿಗಳು ಅಂತಿಮ ಕಣದಲ್ಲಿ ಉಳಿದಿದ್ದಾರೆ.

ಎಸ್.ಬಾಲರಾಜು (ಭಾರತೀಯ ಜನತಾ ಪಾರ್ಟಿ), ಸುನೀಲ್ ಬೋಸ್ (ಇಂಡಿಯನ್ ನ್ಯಾಷನಲ್ ಕಾಂಗ್ರೆಸ್), ಎಂ.ಕೃಷ್ಣಮೂರ್ತಿ (ಬಹುಜನ ಸಮಾಜ ಪಾರ್ಟಿ), ಸಿ.ಎಂ.ಕೃಷ್ಣ (ಡಾ.ಅಂಬೇಡ್ಕರ್ ಪೀಪಲ್ಸ್ ಪಾರ್ಟಿ), ನಿಂಗರಾಜು ಎಸ್ (ಕರ್ನಾಟಕ ಜನತಾ ಪಕ್ಷ), ಪ್ರಸನ್ನ ಕುಮಾರ್ ಬಿ (ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ), ಕಂದಳ್ಳಿ ಮಹೇಶ್ (ಕರ್ನಾಟಕ ರಾಷ್ಟ್ರ ಸಮಿತಿ), ಸುಮಾ ಎಸ್ (ಸೋಷಿಯಲಿಸ್ಟ್ ಯುನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷ) ಹಾಗೂ ಪಕ್ಷೇತರ ಅಭ್ಯರ್ಥಿಗಳಾದ ಕದಂಬ ನಾ.ಅಂಬರೀಷ್, ನಿಂಗರಾಜು ಜಿ, ಪಟಾಸ್ ಪ್ರದೀಪ್ ಕುಮಾರ್ ಎಂ, ಮಹದೇವಸ್ವಾಮಿ ಬಿ.ಎಂ(ಪಂಪಿ), ಜಿ.ಡಿ. ರಾಜಗೋಪಾಲ (ಹೆಚ್.ಡಿ.ಕೋಟೆ), ಹೆಚ್.ಕೆ.ಸ್ವಾಮಿ ಹರದನಹಳ್ಳಿ ಅಂತಿಮ ಕಣದಲ್ಲಿ ಉಳಿದಿದ್ದಾರೆ.

ಪಕ್ಷೇತರರಾದ ನಟರಾಜು, ಬಲ್ಲಯ್ಯ (ಬಾಲು), ಸಣ್ಣಸ್ವಾಮಿ, ಸುಭಾಷ್ ಚಂದ್ರ ಕೆ, ನಿಂಗರಾಜು ಜೆ, ಸಿ.ಶಂಕರ ಅಂಕನ ಶೆಟ್ಟಿಪುರ, ರಾಜು ಕೆ, ಎಂ.ನಾಗೇಂದ್ರ ಬಾಬು ಅವರು ಉಮೇದುವಾರಿಕೆ ಹಿಂಪಡೆದಿದ್ದಾರೆ.

ಹಾಸನ: ಹಾಸನ ಲೋಕಸಭಾ ಕ್ಷೇತ್ರದಲ್ಲಿ ಜೆಡಿಎಸ್‌ನ ಪ್ರಜ್ವಲ್ ರೇವಣ್ಣ ಕಾಂಗ್ರೆಸ್‌ನ ಶ್ರೇಯಸ್ ಎಂ.ಪಟೇಲ್ ಸೇರಿ 15 ಅಭ್ಯರ್ಥಿಗಳು ಅಂತಿನ ಕಣದಲ್ಲಿದ್ದಾರೆ.

ನಾಮಪತ್ರ ಹಿಂತೆಗೆಯಲು ಕೊನೆಯ ದಿನವಾದ ಇಂದು ಆನಂದ್ ಜಿ.ಎನ್. (ಭಾರತೀಯ ಡಾ. ಬಿ.ಆರ್. ಅಂಬೇಡ್ಕರ್ ಜನತಾ ಪಾರ್ಟಿ), ಪಕ್ಷೇತರ ಅಭ್ಯರ್ಥಿ ಮಹೇಶ್ ಉ. ಹರ್ಷ ಅವರು ನಾಮಪತ್ರ ವಾಪಸ್ಸು ಪಡೆದಿದಾರೆ.

ಗಂಗಾಧರ್ ಬಹುಜನ್ (ಬಹುಜನ ಸಮಾಜ ಪಕ್ಷ), ಪ್ರಜ್ವಲ್ ರೇವಣ್ಣ (ಜಾತ್ಯತೀತ ಜನತಾದಳ), ಶ್ರೇಯಸ್ ಎಂ. ಪಟೇಲ್ (ಭಾರತೀಯ ರಾಷ್ಟ್ರೀಯ ಕಾಂಗ್ರೆಸ್), ದೇವರಾಜಾಚಾರಿ ಎಂ.ವೈ (ಕರ್ನಾಟಕ ರಾಷ್ಟ್ರ ಸಮಿತಿ), ಎಸ್.ಕೆ. ನಿಂಗರಾಜ (ಬಹುಜನ್ ಭಾರತ್ ಪಾರ್ಟಿ), ಪ್ರತಾಪ ಕೆ.ಎ (ಉತ್ತಮ ಪ್ರಜಾಕೀಯ ಪಕ್ಷ), ಎಚ್.ಡಿ.ರೇವಣ್ಣ (ಪೂರ್ವಾಂಚಲ ಮಹಾಪಂಚಾಯತ್), ಶಿವರಾಜ್ ಬಿ. (ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಭಾರತ್), ಪಕ್ಷೇತರರಾದ ಕೆ.ಆರ್. ಗಂಗಾಧರಪ್ಪ, ಬಸವರಾಜು ಜೆ.ಡಿ, ಆರ್.ಜಿ. ಸತೀಶ್, ಸಂತೋಷ್ ಬಿ.ಎನ್, ಸಿದ್ಧಾಭೋವಿ, ಬಿ.ಎನ್. ಸುರೇಶ, ಹೇಮಂತ್ ಕುಮಾರ್ ಸೇರಿದಂತೆ 15 ಅಭ್ಯರ್ಥಿಗಳು ಅಂತಿಮ ಕಣದಲ್ಲಿದ್ದಾರೆ.

ಮುಂದಿನ ವಾರ ದ್ವಿತೀಯ ಪಿಯು ಫಲಿತಾಂಶ

ಬರೆದಿದ್ದಾರೆ. ವಿದ್ಯಾರ್ಥಿಗಳ ಅನುಕೂಲಕ್ಕಾಗಿ 1,124 ಪರೀಕ್ಷಾ ಕೇಂದ್ರಗಳಲ್ಲಿ ಅತ್ಯಂತ ಬಿಗಿ ಭದ್ರತೆಯಲ್ಲಿ ಪರೀಕ್ಷೆಗಳನ್ನು ಮಂಡಳಿ ನಡೆಸಿತ್ತು. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಪರೀಕ್ಷೆ ಮುಗಿಯುತ್ತಿದ್ದಂತೆ, ಮೌಲ್ಯಮಾಪನ ಜೊತೆ ಜೊತೆಯಲ್ಲೇ ಟ್ಯಾಬುಲೇಷನ್ ನಡೆದಿದ್ದರಿಂದ ತ್ವರಿತಗತಿಯಲ್ಲಿ ಫಲಿತಾಂಶ ಪ್ರಕಟಣೆಗೆ ಸಾಧ್ಯವಾಗುತ್ತಿದೆ.

ಚುನಾ ವಣೆಗೆ ಶಾಲಾ–ಕಾಲೇಜುಗಳ ಶಿಕ್ಷಕರು ನಿಯೋಜನೆಗೊಳ್ಳುವುದರಿಂದ, ಶಾಲಾ–ಕಾಲೇಜಿನ ಆವರಣ ಮತ್ತು ಸಿಬ್ಬಂದಿ ಯನ್ನು ಚುನಾವಣೆಗೆ ಬಳಕೆ ಮಾಡಿ ಕೊಳ್ಳುವುದರಿಂದ ಮೌಲ್ಯಮಾಪನ ಕಾರ್ಯವನ್ನು ತ್ವರಿತವಾಗಿ ಮುಗಿಸಲಾಗಿದೆ.

ಪರೀಕ್ಷೆ ಫಲಿತಾಂಶಕ್ಕೆ ಸುಪ್ರೀಂ ತಡೆ

ಹೊರಬಿದ್ದಿದೆ. ಬಿಜೆಪಿ ಆಡಳಿತದಲ್ಲಿ ಶಿಕ್ಷಣ ಸಚಿವರಾಗಿದ್ದ ಬಿ.ಸಿ ನಾಗೇಶ್ 5 ಮತ್ತು 8ನೇ ತರಗತಿಗಳಿಗೆ ಪಬ್ಲಿಕ್ ಮಾದರಿಯ ಮೌಲ್ಯಾಂಕನ ಪರೀಕ್ಷೆ ಪದ್ಧತಿ ಜಾರಿಗೆ ತಂದಿದ್ದರು, ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ 9 ಮತ್ತು 11ನೇ ತರಗತಿ ವಿದ್ಯಾರ್ಥಿಗಳಿಗೂ ಬೋರ್ಡ್ ಪರೀಕ್ಷೆ ನಡೆಸುವ ಚಿಂತನೆಯಿಂದ, 9 ಮತ್ತು 11ನೇ ತರಗತಿಗಳಿಗೂ ಪಬ್ಲಿಕ್ ಪರೀಕ್ಷೆ ನಡೆಸುವುದರಿಂದ ವಿದ್ಯಾರ್ಥಿಗಳ ಕಲಿಕೆಯಲ್ಲಿ ಗಂಭೀರತೆ ಕಾಣಬಹುದು ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸುತ್ತೋಲೆ ಹೊರಡಿಸಿದ್ದರು.

ಈ ಸಂಬಂಧ 2023ರ ಡಿಸೆಂಬರ್‌ನಲ್ಲಿ ರಾಜ್ಯ ಸರ್ಕಾರ ಹೊರಡಿಸಿದ್ದ ಸುತ್ತೋಲೆಗಳನ್ನು ಪ್ರಶ್ನಿಸಿ, ಕರ್ನಾಟಕ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಸಂಘ (ರುಪ್ಸಾ) ಸಂಘಟನೆ ಕೋರ್ಟ್ ಮೆಟ್ಟಿಲೇರಿತ್ತು ವಾದ ಆಲಿಸಿದ ಹೈಕೋರ್ಟ್ ಸರ್ಕಾರ ಸುತ್ತೋಲೆ ರದ್ದುಗೊಳಿಸಿ ಆದೇಶಿಸಿತ್ತು, ತಕ್ಷಣವೇ, ಶಿಕ್ಷಣ ಇಲಾಖೆ ಹೈಕೋರ್ಟ್‌ನ ದ್ವಿಸದಸ್ಯ ಪೀಠದ ಮುಂದೆ ಮೇಲ್ಮನವಿ ಸಲ್ಲಿಸಿತು. ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್ ಪರೀಕ್ಷೆ ನಡೆಸಲು ಷರತ್ತುಬದ್ಧ ಅನುಮತಿ ನೀಡಿ, ಔಟ್ ಆಫ್ ಸಿಲಬಸ್ ಪ್ರಶ್ನೆಗಳನ್ನು ಕೇಳಬಾರದು, ಯಾರನ್ನೂ ಅನುತ್ತೀರ್ಣಗೊಳಿಸಬಾರದು ಮತ್ತು ಫಲಿತಾಂಶವನ್ನು ಶಾಲಾ ಮಟ್ಟದಲ್ಲಿ ಮಾತ್ರ ಪ್ರಕಟಿಸಬೇಕು ಎಂಬ ಷರತ್ತುಗಳನ್ನು ವಿಧಿಸಿತು.

ಕುಶಾಲನಗರದಿಂದ ಬಸ್ ಕಂಡಕ್ಟರ್ ಅಪಹರಿಸಿ ಚಿನ್ನಾಭರಣ, ನಗದು ದೋಚಿದ ಪ್ರಕರಣ

ಒಂದೇ ದಿನದಲ್ಲಿ ಮೈಸೂರಿನ ಮಹಿಳೆ ಸೇರಿ 8 ಮಂದಿ ಬಂಧನ

● ಕೃತ್ಯಕ್ಕೆ ಬಳಸಿದ ಸ್ಕಾರ್ಪಿಯೊ, 1.82 ಲಕ್ಷದ ಚಿನ್ನಾಭರಣ, ಸ್ಕೂಟಿ ಸೇರಿದಂತೆ 5.97 ಲಕ್ಷದ ವಸ್ತುಗಳ ಜಪ್ತಿ ● ಪರಿಚಯವಿದ್ದವರಿಂದಲೇ ಮಹಾ ದೋಖಾ ಕೆಲಸ





ಕೊಡಗು ಜಿಲ್ಲಾ ಎಸ್ಪಿ ರಾಮರಾಜನ್ ಸುದ್ದಿಗೋಷ್ಠಿ ನಡೆಸುತ್ತಿರುವುದು ಹಾಗೂ ಮತ್ತೊಂದು ಚಿತ್ರದಲ್ಲಿ ಬಂಧಿತ ಆರೋಪಿಗಳನ್ನು ಕಾಣಬಹುದು

ಕುಶಾಲನಗರ, ಏ. 8– ಬಸ್ ಕಂಡಕ್ಟರ್ ಅನ್ನು ಅಪಹರಿಸಿ ಚಿನ್ನಾಭರಣ ಹಾಗೂ ನಗದು ದೋಚಿದ್ದ ಪ್ರಕರಣದಲ್ಲಿ ಮೈಸೂರಿನ ಮಹಿಳೆ ಸೇರಿ 8 ಮಂದಿಯನ್ನು ಬಂಧಿಸಲಾಗಿದೆ.

ಈ ಕುರಿತು ಸುದ್ದಿಗೋಷ್ಠಿ ನಡೆಸಿದ ಕೊಡಗು ಜಿಲ್ಲಾ ಎಸ್ಪಿ ರಾಮರಾಜನ್ ಅವರು, ಏಪ್ರಿಲ್ 4ರಂದು ರಾತ್ರಿ ಕಣಿವೆ ಬಸವನಹಳ್ಳಿ ಗ್ರಾಮದ ಬಸ್ ಕಂಡಕ್ಟರ್ ಹೇಮಂತ್ ಅವರನ್ನು ಅಪಹರಿಸಿ, ಸುಲಿಗೆ ಮಾಡಿದ ಪ್ರಕರಣದಲ್ಲಿ ಮೈಸೂರಿನ ರಾಜೀವ್‌ನಗರ 2ನೇ ಹಂತದ ಯಾಸಿನ್(21), 3ನೇ ಹಂತದ ಮುದಾಸಿರ್(24), ಶ್ರೀರಾಂಪುರ ಯಾಸಿನ್ ಎಂಬಾತನ ಪತ್ನಿ ರುಕ್ಸಾನಾ(23), ಗೌಸಿಯಾನಗರದ ಶಹಬಾಜ್(28), ಫೈಜಲ್ ಖಾನ್(23), ಪಿರಿಯಾಪಟ್ಟಣದ ಯಾಸಿನ್(23) ಬಂಧಿತರಾಗಿದ್ದು, ಮತ್ತೋರ್ವ ಆರೋಪಿ ಮೈಸೂರಿನ ಗೌಸಿಯಾನಗರದ ಪಿಳ್ಳೈ ಅಲಿಯಾಸ್ ಕುರಾನ್ ಎಂಬಾತ ತಲೆಮರೆಸಿಕೊಂಡಿದ್ದು, ಆತನ ಪತ್ತೆಗಾಗಿ ಕಾರ್ಯಾಚರಣೆ ನಡೆಯುತ್ತಿದೆ ಎಂದು ತಿಳಿಸಿದರು.

ಬಂಧಿತರಿಂದ ಕೃತ್ಯಕ್ಕೆ ಬಳಸಿದ್ದ ಸ್ಕಾರ್ಪಿಯೊ (ಕೆಎ 01–ಎಂಜಿ 0602), 1.82 ಲಕ್ಷ ರೂ. ಮೌಲ್ಯದ 30 ಗ್ರಾಂ ಚಿನ್ನಾಭರಣ, 50 ಸಾವಿರ ರೂ. ಮೌಲ್ಯದ 2 ಮೊಬೈಲ್, ಆರೋಪಿಗಳು ಕೊಂಡೊಯ್ದಿದ್ದ ಹೇಮಂತ್ ಅವರ ಸ್ಕೂಟಿ, ಮಹಿಳಾ ಆರೋಪಿ ರುಕ್ಸಾನಾ ಕೃತ್ಯಕ್ಕೆ ಬಳಸಿದ್ದ ಸ್ಕೂಟಿ, 5 ಸಾವಿರ ನಗದು, ಆರೋಪಿಗಳಿಗೆ ಸೇರಿದ 7 ಮೊಬೈಲ್ ಸೇರಿದಂತೆ ಒಟ್ಟು 5.97 ಲಕ್ಷ ರೂ. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದರು.

ಪ್ರಕರಣ ದಾಖಲಾಗಿ ಕೇವಲ ಒಂದೇ ದಿನದಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಿ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಕಾರ್ಯಾಚರಣೆಯಲ್ಲಿ ಸೋಮವಾರ ಪೇಟೆ ಡಿವೈಎಸ್ಪಿ ಆರ್.ವಿ.ಗಂಗಾಧರಪ್ಪ, ಕುಶಾಲನಗರ ಪಟ್ಟಣ ಠಾಣೆಯ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ಮತ್ತು ಸಿಬ್ಬಂದಿ ಭಾಗವಹಿಸಿದ್ದರು ಎಂದು ಅವರು ಹೇಳಿದರು.

ವಿವರ: ಬಸ್ ಕಂಡಕ್ಟರ್ ಹೇಮಂತ್ ಅವರಿಗೆ ಪರಿಚಯವಿದ್ದ ರುಕ್ಸಾನಾ ಏಪ್ರಿಲ್ 4ರಂದು ಸಂಜೆ 7 ಗಂಟೆಗೆ ಹೇಮಂತ್ ಅವರಿಗೆ ಕರೆ ಮಾಡಿ, ತಾನು ಸ್ಕೂಟಿಯಲ್ಲಿ ಹೋಗುತ್ತಿದ್ದಾಗ ಕೊಪ್ಪ ಗೇಟ್‌ನಲ್ಲಿ ಪೊಲೀಸರು ಹಿಡಿದು 3 ಸಾವಿರ ರೂ. ದಂಡ ವಿಧಿಸಿದ್ದಾರೆ. ನನ್ನ ಬಳಿ ಇದ್ದ ಹಣವನ್ನು ದಂಡವಾಗಿ ಕಟ್ಟಿದ್ದು, ಈಗ ಖರ್ಚಿಗೆ ದುಡ್ಡಿಲ್ಲ, ಒಂದು ಸಾವಿರ ರೂ. ಕೊಟ್ಟರೆ 2 ದಿನದ ನಂತರ ಹಿಂತಿರುಗಿಸುತ್ತೇನೆ ಎಂದು ಹೇಳಿದ್ದಾಳೆ.

ಹೇಮಂತ್ ಅವರು ಕುಶಾಲನಗರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ್ದ ತಮ್ಮ ಸ್ಕೂಟಿಯನ್ನು ತೆಗೆದುಕೊಂಡು ಆಕೆ ಹೇಳಿದ್ದ ಸಿಟಿ ಬಸ್ ನಿಲ್ಲುವ ಸ್ಥಳಕ್ಕೆ ಅಂದು ಸಂಜೆ 7.30ರಲ್ಲಿ ಹೋಗಿದ್ದಾರೆ. ಅವರು ಆಕೆಯೊಂದಿಗೆ ಮಾತನಾಡುತ್ತಿದ್ದಾಗಲೇ 6 ಮಂದಿ ಗುಂಪೊಂದು ಅವರನ್ನು ಹಿಡಿದು ಸ್ಕಾರ್ಪಿಯೊದಲ್ಲಿ ಹಾಕಿಕೊಂಡು ಬೆಟ್ಟದಪುರ ರಸ್ತೆಯಲ್ಲಿ ಕರೆದೊಯ್ದಿದ್ದಾರೆ. ಈ ವೇಳೆ ಸ್ಕಾರ್ಪಿಯೊದಲ್ಲಿದ್ದ ವ್ಯಕ್ತಿಯೋರ್ವ ಹೇಮಂತ್‌ಗೆ ಚಾಕು ತೋರಿಸಿ, ನಿಮ್ಮ ಮನೆಗೆ ಕರೆ ಮಾಡಿ ಬಡ್ಡಿಗೆ ಹಣ ತೆಗೆದುಕೊಂಡಿದ್ದೆ, ಅದನ್ನು ವಾಪಸ್ ಕೊಡಬೇಕೆಂದು ತಿಳಿಸಿ 5 ಲಕ್ಷ ರೂ. ತರಿಸುವಂತೆ ಬೆದರಿಕೆ ಹಾಕಿದ್ದಾರೆ. ಈ ವೇಳೆ ಹೇಮಂತ್ ತನ್ನ ಆಂಟಿಗೆ ಕರೆ ಮಾಡಿದಾಗ ಅಪಹರಣಕಾರರಲ್ಲಿ ಒಬ್ಬ ಮೊಬೈಲ್ ತೆಗೆದುಕೊಂಡು 'ನಿಮ್ಮ ಹುಡುಗ ನಮ್ಮ ಬಳಿ 5 ಲಕ್ಷ ರೂ. ಬಡ್ಡಿಗೆ ಪಡೆದಿದ್ದಾನೆ. ಇನ್ನೂ ಹಣವನ್ನು ವಾಪಸ್ ಮಾಡಿಲ್ಲ. ಆದ್ದರಿಂದ ಅವನನ್ನು ನಾವು ಕುಶಾಲನಗರದಲ್ಲಿ ಹಿಡಿದಿಟ್ಟುಕೊಂಡಿದ್ದೇವೆ. ನೀವು 5 ಲಕ್ಷ ಕೊಟ್ಟರೇ ಮಾತ್ರ ಬಿಡುತ್ತೇವೆ' ಎಂದು ಹೇಳಿದ್ದಾನೆ.

ನಂತರ ಅಪಹರಣಕಾರರು ಹೇಮಂತ್ ಬಳಿ ಇದ್ದ 14 ಗ್ರಾಂ ತೂಕದ 6 ಉಂಗುರಗಳು, 7 ಗ್ರಾಂ ತೂಕದ ಚಿನ್ನದ ಬ್ರೇಸ್‌ಲೆಟ್, 12 ಗ್ರಾಂ ತೂಕದ ಚಿನ್ನದ ಚೈನ್, 4 ಸಾವಿರ ರೂ. ನಗದು, 2 ಎಟಿಎಂ ಕಾರ್ಡ್, 2 ಮೊಬೈಲ್, ಮೂರೂವರೆ ಸಾವಿರ ಮೌಲ್ಯದ ಸ್ಮಾರ್ಟ್ ವಾಚ್ ಅನ್ನು ಕಿತ್ತುಕೊಂಡು ಹೇಮಂತ್ ಅವರನ್ನು ಅಂದು ರಾತ್ರಿ 12.15ರ ಸುಮಾರಿನಲ್ಲಿ ಕಟ್ಟೆಮಳಲವಾಡಿ ಬಳಿ ಬಿಟ್ಟುಹೋಗಿದ್ದಾರೆ. ನಂತರ ಆ ರಸ್ತೆ ಮಾರ್ಗವಾಗಿ ಬಂದ ಬೈಕ್‌ವೊಂದರಲ್ಲಿ ಹೇಮಂತ್ ಹುಣಸೂರಿಗೆ ತೆರಳಿ ಅಲ್ಲಿಂದ ಕೊಪ್ಪದಲ್ಲಿರುವ ತಮ್ಮ ಆಂಟಿ ಮನೆಗೆ ಬಂದಿದ್ದಾರೆ. ಏಪ್ರಿಲ್ 5 ರಂದು ಮಧ್ಯಾಹ್ನ ತನ್ನ ಪರಿಚಯಸ್ಥಳಾದ ರುಕ್ಸಾನಾ ವಾಸವಿದ್ದ ಸೋಮವಾರಪೇಟೆ ಮನೆಗೆ ಹೋಗಿ ನೋಡಿದಾಗ ಆಕೆ ನಾಪತ್ತೆಯಾಗಿದ್ದಳು. ಬಸ್‌ಸ್ಟ್ಯಾಂಡ್ ಬಳಿ ವಿಚಾರಿಸಿದಾಗ ಹೇಮಂತ್ ಅವರ ಸ್ಕೂಟರ್ ಅನ್ನು ಕೂಡ ಅಪಹರಣಕಾರರೇ ಕೊಂಡೊಯ್ದಿದ್ದಾರೆ ಎಂಬುದು ಗೊತ್ತಾಗಿದೆ. ಈ ಸಂಬಂಧ ಹೇಮಂತ್ ಏಪ್ರಿಲ್ 5ರಂದು ಸಂಜೆ 7 ಗಂಟೆಗೆ ಕುಶಾಲನಗರ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಎಸ್.ಎಂ.ಕೃಷ್ಣರ ಆಶೀರ್ವಾದ ಪಡೆದ ಕುಮಾರಸ್ವಾಮಿ



ಬೆಂಗಳೂರು, ಏ.8– ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯಾಗಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸಿದರು.

ಸೋಮವಾರ ಸಂಜೆ ಸದಾಶಿವನಗರದಲ್ಲಿರುವ ಎಸ್.ಎಂ.ಕೃಷ್ಣ ಅವರ ನಿವಾಸಕ್ಕೆ ಭೇಟಿ ನೀಡಿದ ಕುಮಾರಸ್ವಾಮಿ ಆಶೀರ್ವಾದ ಪಡೆದು ಕೆಲಕಾಲ ಮಾತುಕತೆ ನಡೆಸಿದರು.

ನಂತರ ಮಾಧ್ಯಮಗಳ ಜತೆ ಮಾತನಾಡಿದ ಕುಮಾರಸ್ವಾಮಿ, ಹಿರಿಯರಾದ ಎಸ್‌ಎಂ ಕೃಷ್ಣ ಅವರು ನಮ್ಮ ತಂದೆಯವರ ಸಮಕಾಲೀನರು. ತಂದೆಯವರಿಗಿಂತ ಆರು ತಿಂಗಳು ದೊಡ್ಡವರು. ನಾನು ನಾಮಪತ್ರ ಸಲ್ಲಿಸುವ ಮುನ್ನವೇ ಅವರ ಆಶೀರ್ವಾದ ಪಡೆಯಬೇಕಿತ್ತು. ಇವತ್ತು ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದಿದ್ದೇನೆ ಎಂದರು.

ನಾನು ಪ್ರಥಮವಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದಾಗ ಕೃಷ್ಣ ಅವರು ಆಶೀರ್ವಾದ ಮಾಡಿದ್ದರು. ಆ ಸಂಗತಿಯನ್ನು ಮಾತುಕತೆಯ ವೇಳೆ ಹಿರಿಯರಾದ ಅವರೇ ನೆನೆಸಿಕೊಂಡರು. ನನ್ನನ್ನು ಆಶೀರ್ವಾದ ಮಾಡಿ ನಾಡಿನ ಅಭಿವೃದ್ಧಿಗಾಗಿ ಕೆಲಸ ಮಾಡಿ ಎಂದಿದ್ದಾರೆ. ಕೃಷ್ಣ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದದ್ದು ನನಗೆ ಬಹಳ ಸಂತೋಷ ಉಂಟು ಮಾಡಿದೆ.

ಸಿಎಂ ಕಾರ್ಯಕ್ರಮದಲ್ಲಿ ಭದ್ರತಾ ಲೋಪ: ಚುನಾವಣೆಯ ಪ್ರಚಾರದ ರೋಡ್ ಶೋ ಕಾರ್ಯಕ್ರಮದಲ್ಲಿ ಪಿಸ್ತೂಲು ಹೊಂದಿದ್ದ ವ್ಯಕ್ತಿಯೊಬ್ಬ ಮುಖ್ಯಮಂತ್ರಿ ಅವರಿಗೆ ಸನ್ಮಾನ ಮಾಡಿರುವ ಘಟನೆ ಭದ್ರತಾ ಲೋಪ. ಇಂಥ ಅಚಾತುರ್ಯ ನಡೆಯಬಾರದಿತ್ತು ಇಲ್ಲಿ ಯಾರೂ ಯಾರನ್ನೂ ತಪಾಸಣೆ ಮಾಡಲ್ಲ. ಸಿಎಂ ಕಾರ್ಯಕ್ರಮದಲ್ಲಿ ಭದ್ರತಾ ಲೋಪ ಆಗಬಾರದು. ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಬೇಕು ಎಂದು ಅವರು ಹೇಳಿದರು.

ಮಂಡ್ಯ ಕ್ಷೇತ್ರದಲ್ಲಿ ಕಾಂಗ್ರೆಸ್‌ನವರು ಅಪಪ್ರಚಾರ ನಡೆಸುತ್ತಿದ್ದಾರೆ. ಅವರು ಸಾಮಾಜಿಕ ಜಾಲತಾಣದಲ್ಲಿ ಕೆಲ ಪ್ರಶ್ನೆಗಳನ್ನು ಕೇಳಿದ್ದಾರೆ. ಅವರಿಗೆ ಉತ್ತರ ನೀಡಲು ನಾವು ಸಮರ್ಥನಿದ್ದೇನೆ. ನಾನು ಎಲ್ಲೂ ಕಾಣೆ ಆಗಿಲ್ಲ. ನಾನು ಇಲ್ಲೇ ಇದ್ದೇನೆ. ಈ ರೀತಿ ಅಪಪ್ರಚಾರ ಮಾಡಿ ಚುನಾವಣೆ ಯಶಸ್ವಿಯಾಗಲ್ಲ ಎಂದರು.

ಈ ಸಂದರ್ಭದಲ್ಲಿ ಪ್ರತಿಪಕ್ಷ ನಾಯಕ ಆರ್. ಅಶೋಕ್, ಮಾಜಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಯುವ ಜನತಾ ದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಬಿಜೆಪಿ ನಾಯಕರಾದ ಇಂಡುವಾಳು ಸಚ್ಚಿದಾನಂದ, ಉಮೇಶ್ ಅವರು ಇದ್ದರು.

ಏ.12, ರಂಗಾಯಣ ಆವರಣದಲ್ಲಿ ಚಿಣ್ಣರಮೇಳ ಉದ್ಘಾಟನೆ

ಮೈಸೂರು, ಏ.8– ರಂಗಾಯಣದ ವತಿಯಿಂದ ಚಿಣ್ಣರಮೇಳ–2024ರ ಮಕ್ಕಳ ರಂಗ ತರಬೇತಿ ಶಿಬಿರವನ್ನು ಏ.12 ರಿಂದ ಮೇ 7 ರವರೆಗೆ ರಂಗಾಯಣದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ. ಏ.12 ರಂದು ಸಂಜೆ 5 ಗಂಟೆಗೆ ರಂಗಾಯಣದ ವನರಂಗ ಬಯಲು ರಂಗಮಂದಿರದಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್‌ನ ಬಾಲ ರಂಗ ಕಲಾವಿದರಾದ ಗೋಕುಲ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗದ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅಧ್ಯಕ್ಷತೆಯನ್ನು ವಹಿಸುವರು. ಮುಖ್ಯ ಅತಿಥಿಯಾಗಿ ರಂಗ ಕಲಾವಿದರಾದ ನುಡಿ ಎಂ.ಎಸ್ ಭಾಗವಹಿಸಲಿದ್ದಾರೆ. ರಂಗಾಯಣದ ಉಪನಿರ್ದೇಶಕರಾದ ನಿರ್ಮಲಾ ಮಠಪತಿ ಹಾಗೂ ಚಿಣ್ಣರಮೇಳ–2024 ರ ಸಂಚಾಲಕರಾದ ಗೀತಾ ಮೊಂಟಡ್ಕ ಉಪಸ್ಥಿತರಿರುವರು ಎಂದು ರಂಗಾಯಣದ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಕೆಆರ್ ಗೆಲುವಿನ ಓಟಕ್ಕೆ ಸಿಎಸ್‌ಕೆ ಬ್ರೇಕ್



ಚೆನ್ನೈ, ಏ.8– ಸತತ ಸೋಲಿನಿಂದ ಕಂಗೆಟ್ಟಿದ್ದ ಚೆನ್ನೈ ಸೂಪರ್ ಕಿಂಗ್ಸ್ ಸೋಮವಾರ ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 7 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಸಿಎಸ್‌ಕೆ ಕೆಕೆಆರ್ ಗೆಲುವಿನ ಓಟಕ್ಕೆ ಬ್ರೇಕ್ ಹಾಕಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಕೋಲ್ಕತ್ತಾ ನೈಟ್ ರೈಡರ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 137 ರನ್‌ಗಳ ಸಾಧಾರಣ ಗುರಿ ದಾಖಲಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಸಾಲ್ಟ್ ಮೊದಲ ಎಸೆತದಲ್ಲೇ ವಿಕೆಟ್ ಒಪ್ಪಿಸಿ ಹೊರ ನಡೆದರು. ನಂತರ ಬಂದ ಆಂಗ್ಕ್ರಿಶ್ ರಘುವಂಶಿ 24 ರನ್‌ಗಳಿಸಿ ನಿರ್ಗಮಿಸಿದರು. ಆದರೆ ನಂತರ ಬಂದ ಬ್ಯಾಟ್ಸ್‌ಮನ್‌ಗಳು ದೊಡ್ಡ ಮೊತ್ತ ದಾಖಲಿಸುವಲ್ಲಿ ವಿಫಲರಾದರು. ಉಳಿದಂತೆ ಸುನೀಲ್ ನರೇನ್ 27, ನಾಯಕ ಶ್ರೇಯಸ್ ಅಯ್ಯರ್ 34, ರಮಣ್‌ದೀಪ್ ಸಿಂಗ್ 13, ಆಂಡ್ರೆ ರಸೆಲ್ 10 ರನ್ ಗಳಿಸಿದರು. ಕೆಕೆಆರ್ ಪರ ತುಷಾರ್ ದೇಶಪಾಂಡೆ, ರವೀಂದ್ರ ಜಡೇಜಾ ತಲಾ 3, ಮುಸ್ತಫಿಜುರ್ ರೆಹಮಾನ್ 2, ಮಹೀಶ ತೀಕ್ಷಣ 1 ವಿಕೆಟ್ ಉರುಳಿಸಿದರು.

ಕೋಲ್ಕತ್ತಾ ನೀಡಿದ 138 ರನ್‌ಗಳ ಸಾಧಾರಣ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈ ಸೂಪರ್ ಕಿಂಗ್ಸ್ 17.4 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 141ರನ್ ಗಳಿಸಿ ಜಯ ಸಾಧಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ರಚಿನ್ ರವೀಂದ್ರ 15 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಡ್ಯಾರಿಯಲ್ ಮಿಚೆಲ್ 25, ಶಿವಂ ದುಬೆ 3 ಸಿಕ್ಸರ್, 1 ಬೌಂಡರಿ ಒಳಗೊಂಡ 28 ರನ್ ಗಳಿಸಿ ಔಟಾದರು. ಮತ್ತೊಂದೆಡೆ ತಾಳ್ಮೆಯ ಆಟವಾಡಿದ ನಾಯಕ ಋತುರಾಜ್ ಗಾಯಕ್ವಾಡ್ ಅಜೇಯ 67 ರನ್ ಗಳಿಸುವ ಮೂಲಕ ತಂಡಕ್ಕೆ ಜಯ ತಂದುಕೊಟ್ಟರು. ಕೆಕೆಆರ್ ಪರ ವೈಭವ್ ಅರೋರ 2, ಸುನೀಲ್ ನರೇನ್ 1 ವಿಕೆಟ್ ಪಡೆದರು. ರವೀಂದ್ರ ಜಡೇಜಾ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದಿನ ಪಂದ್ಯ
ಪಂಜಾಬ್ ಕಿಂಗ್ಸ್ / ಸನ್‌ರೈಸರ್ಸ್ ಹೈದರಾಬಾದ್
ಸ್ಥಳ: ಚಂಡೀಗಢ, ಮಹಾರಾಜ ಯದುವೀರ್‌ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣ.
ಸಮಯ: ಸಂಜೆ 7.30ಕ್ಕೆ

ಕನ್ನಡ, ಕನ್ನಡಿಗರು, ಕರ್ನಾಟಕದ ಹಿತ ಕಾಯಲು ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ವಾಟಾಳ್ ಸ್ಪರ್ಧೆ

● ಪ್ರಸ್ತುತ ಚುನಾವಣಾ ರಾಜಕಾರಣದ ಬಗ್ಗೆ ತೀವ್ರ ಬೇಸರ ● ಕಾಯಂ ಜೈಲಲ್ಲಿರಬೇಕಾದವರು ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ ● ರಾಜ್ಯದಲ್ಲಿ ಕುಟುಂಬ ರಾಜಕಾರಣ ಮೇಳೈಸುತ್ತಿದೆ: ವಾಟಾಳ್ ಬೇಸರ

ಮೈಸೂರು,ಏ.8(ಎಂಟಿವೈ)–ಪ್ರಸ್ತುತ ರಾಜಕಾರಣ ಹೊಲಸಾಗಿದ್ದು, ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಕನ್ನಡ, ಕನ್ನಡಿಗರು ಹಾಗೂ ನಾಡಿನ ಹಿತ ಕಾಯುವ ನಿಟ್ಟಿನಲ್ಲಿ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವುದಾಗಿ ಕನ್ನಡ ಚಳುವಳಿ ವಾಟಾಳ್ ಪಕ್ಷದ ಮುಖ್ಯಸ್ಥ ವಾಟಾಳ್ ನಾಗರಾಜ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ವಾಟಾಳ್ ನಾಗರಾಜ್ ಅಭಿಮಾನಿಗಳು ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ವತಿಯಿಂದ ನಡೆದ ಹಿರಿಯ ಸಾಹಿತಿ ಪ್ರೊ.ಸಿ.ಪಿ. ಕೃಷ್ಣಕುಮಾರ್(ಸಿಪಿಕೆ) ಅವರ ಸನ್ಮಾನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಹಿರಿಯ ಸಾಹಿತಿ ಪ್ರೊ.ಸಿ.ಪಿ. ಕೃಷ್ಣಕುಮಾರ್ ಕೊಡುಗೆ ಅಪಾರ. 85 ವಸಂತ ಪೂರೈಸಿರುವ ಹಿರಿಯ ಸಾಹಿತಿ ಡಾ.ಸಿಪಿಕೆ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ, ಗೌರವಿಸಲಾಗಿದೆ. ಸಾಹಿತ್ಯ ಕ್ಷೇತ್ರಕ್ಕೆ ಅವರ ಸೇವೆ ಇನ್ನಷ್ಟು ಅಗತ್ಯವಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ನಾನೊಬ್ಬನೇ ಪ್ರಾಮಾಣಿಕ ಅಭ್ಯರ್ಥಿ: ಏ.26ರಂದು ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ನಾನು ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದೇನೆ. ರಾಜಕಾರಣ ಕಲುಷಿತವಾಗಿದೆ. ಭ್ರಷ್ಟಾಚಾರ ಹಾಸುಹೊಕ್ಕಾಗಿದೆ ಎಂಬ ಅರಿವು ನನಗಿದೆ. ಆದರೂ, ಕನ್ನಡ, ಕನ್ನಡಿಗರು, ಕರುನಾಡಿನ ಹಿರಿಮೆಯನ್ನು ಸಂಸತ್ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನಷ್ಟು ಉತ್ತುಂಗಕ್ಕೇರಿಸಲು ಸ್ಪರ್ಧಿಸುತ್ತಿದ್ದೇನೆ. ನಾನು ಚುನಾವಣೆಯಲ್ಲಿ ಹಣ ಹಂಚುವುದಿಲ್ಲ. ಆದರೂ ಚುನಾವಣಾ ಕಣದಲ್ಲಿರುತ್ತೇನೆ. ರಾಜ್ಯದ 28 ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವ ಎಲ್ಲಾ ಅಭ್ಯರ್ಥಿಗಳಲ್ಲಿ ನಾನೇ ಪ್ರಾಮಾಣಿಕ ಅಭ್ಯರ್ಥಿ. ಚುನಾವಣೆಯಲ್ಲಿ ಗೆಲ್ಲುವುದಿಲ್ಲ ಎಂದು ಗೊತ್ತಿದೆ. ಆದರೂ ಕರ್ನಾಟಕದ ಧ್ವನಿ. ಪ್ರತಿಧ್ವನಿಸಲು ಸ್ಪರ್ಧಿಸುತ್ತಿದ್ದೇನೆ. ರಾಜ್ಯದಿಂದ ಇದುವರೆಗೂ ಆಯ್ಕೆಯಾಗಿರುವ ಸಂಸದರು ಕನ್ನಡ ನಾಡಿನ ಪರ ಧ್ವನಿ ಎತ್ತಿಲ್ಲ. ಸಂಸತ್‌ನಲ್ಲಿ ಕನ್ನಡ ಪರ ಧ್ವನಿಯೆತ್ತಬೇಕೆಂದು ನಿರ್ಧರಿಸಿ ಸ್ಪರ್ಧಿಸಿದ್ದೇನೆ ಎಂದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ವಾಟಾಳ್ ನಾಗರಾಜ್ ಅಭಿಮಾನಿಗಳು ಹಾಗೂ ವಿವಿಧ ಕನ್ನಡಪರ ಸಂಘಟನೆಗಳ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ.ಸಿ.ಪಿ.ಕೃಷ್ಣಕುಮಾರ್(ಸಿಪಿಕೆ) ಅವರನ್ನು ಸನ್ಮಾನಿಸಲಾಯಿತು.

ಕಳೆದ ಕೆಲವು ವರ್ಷಗಳಿಂದ ಚುನಾವಣೆಗಳು ಅರ್ಥ ಕಳೆದುಕೊಂಡಿವೆ. ಕಾಯಂ ಆಗಿ ಜೈಲಿನಲ್ಲಿರಬೇಕಾದವರೆಲ್ಲ ಈಗ ಚುನಾವಣೆಗಳಲ್ಲಿ ಸ್ಪರ್ಧಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಅಂತಹವರು ಚುನಾಯಿತರಾಗಲೂಬಹುದು. ಚುನಾವಣೆ ಈಗ ದರೋಡೆಯಾಗಿದೆ. ಹಣವುಳ್ಳವರು ಮಾತ್ರ ನಿಲ್ಲುವಂತಾಗಿದೆ. ಇದರಿಂದ ಪ್ರಾಮಾಣಿಕರಿಗೆ ಹಾಗೂ ನಿಜವಾದ ಜನಸೇವೆ ಮಾಡಬೇಕೆಂಬ ಹಂಬಲ ಹೊಂದಿರುವವರಿಗೆ ಚುನಾವಣೆಗಳು ಮುಂದಿನ ದಿನಗಳಲ್ಲಿ ಕನಸಾಗಲಿದೆ ಎಂದು ವಿಷಾದಿಸಿದರು.

ಕುಟುಂಬ ರಾಜಕಾರಣ: ರಾಜ್ಯದಲ್ಲಿ ಕುಟುಂಬ ರಾಜಕಾರಣ ಮೇಳೈಸುತ್ತಿದೆ. ರಾಜ್ಯದ ಎಲ್ಲ ಸ್ಥಾನಗಳನ್ನು ಅವರವರ ಮಕ್ಕಳಿಗೆ, ಸಂಬಂಧಿಕರಿಗೆ ಹಂಚಿಕೊಂಡಿದ್ದಾರೆ. ಅಪ್ಪ ಕಿಂಗ್ ಮೇಕರ್, ಮಗ ಅಧ್ಯಕ್ಷ, ಇನ್ನೊಬ್ಬ ಮಗ ಲೋಕಸಭಾ ಅಭ್ಯರ್ಥಿ ಎಂದು ಹೇಳುವ ಮೂಲಕ ಪರೋಕ್ಷವಾಗಿ ಯಡಿಯೂರಪ್ಪ ಅವರನ್ನು ಟೀಕಿಸಿದರೆ, ಅಪ್ಪ ಎಂಎಲ್‌ಎ, ಮಗ ಮಂತ್ರಿ, ಸೊಸೆ ಲೋಕಸಭೆಗೆ ಅಭ್ಯರ್ಥಿ ಎಂದು ಪರೋಕ್ಷವಾಗಿ ಶ್ಯಾಮನೂರು ಶಿವಶಂಕರಪ್ಪ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸ್ಪರ್ಧಿಸಬಾರದಿತ್ತು. ವೈಯಕ್ತಿಕವಾಗಿ ರಾಜಮನೆತನದ ಮೇಲೆ ಗೌರವವಿದೆ. ಬಿಜೆಪಿಗೆ ರಾಜಮನೆತನದ ಮೇಲೆ ಗೌರವವಿದ್ದರೆ, ಯದುವೀರ್ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಬೇಕಾಗಿತ್ತು ಎಂದರು.

ಈ ಸಂದರ್ಭದಲ್ಲಿ ಕನ್ನಡ ಪರ ಹೋರಾಟಗಾರರಾದ ತಾಯೂರು ವಿಠ್ಠಲಮೂರ್ತಿ, ಶಿವಶಂಕರ್, ಪ್ರೊ.ಎಸ್. ಶಿವರಾಜಪ್ಪ, ವೇಣುಗೋಪಾಲ್ ಇದ್ದರು.

ಚಾ.ನಗರ ಬಿಜೆಪಿ ಅಭ್ಯರ್ಥಿ ಬಾಲರಾಜ್ ಗೆಲುವು ಖಚಿತ

ಬಿಜೆಪಿ ರಾಜ್ಯ ಚುನಾವಣಾ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರವಾಲ್ ವಿಶ್ವಾಸ



ಸುದ್ದಿಗಾರರೊಂದಿಗೆ ಬಿಜೆಪಿ ರಾಜ್ಯ ಚುನಾವಣಾ ಉಸ್ತುವಾರಿ ರಾಧಾ ಮೋಹನ್‌ದಾಸ್ ಅಗರವಾಲ್ ಮಾತನಾಡಿದರು.

ನಂಜನಗೂಡು, ಏ.8– ಚಾಮರಾಜನಗರ ಲೋಕಸಭಾ ಕ್ಷೇತ್ರದ 8 ವಿಧಾನಸಭಾ ಕ್ಷೇತ್ರಗಳ ಪಕ್ಷದ ಮುಖಂಡರ ಸಭೆ ನಡೆಸಿದ್ದೇನೆ. ನನಗೆ ಬಂದಿರುವ ವರದಿಗಳ ಪ್ರಕಾರ ಬಿಜೆಪಿ ಅಭ್ಯರ್ಥಿ ಬಾಲರಾಜ್ ಗೆಲುವು ಖಚಿತವಾಗಿದೆ ಎಂದು ಬಿಜೆಪಿ ರಾಜ್ಯ ಚುನಾವಣಾ ಉಸ್ತುವಾರಿ ರಾಧಾ ಮೋಹನ್ ದಾಸ್ ಅಗರವಾಲ್ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಸೋಮವಾರ ಭೇಟಿ ನೀಡಿ ದೇವರ ದರ್ಶನ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಂಜನಗೂಡು ದಕ್ಷಿಣ ಕಾಶಿಯಾಗಿದೆ. ಈ ಪುಣ್ಯಕ್ಷೇತ್ರದ ಬಗ್ಗೆ ಕೇಳಿ ತಿಳಿದಿದ್ದೆ. ನಮ್ಮ ಮುಖಂಡರಾದ ಮಾಜಿ ಶಾಸಕ ಹರ್ಷವರ್ಧನ್ ಜೊತೆಗೆ ಶಿವನ ದರ್ಶನ ಪಡೆದಿದ್ದೇನೆ.

ನಾವು ಚಾಮರಾಜನಗರ ಮಾತ್ರವಲ್ಲ ರಾಜ್ಯದ 28 ಕ್ಷೇತ್ರಗಳಲ್ಲೂ ನಮ್ಮ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗಳು ವಿಜಯ ಸಾಧಿಸಲಿದ್ದಾರೆ. ಚಾಮರಾಜನಗರ ಕಾಂಗ್ರೆಸ್ ಅಭ್ಯರ್ಥಿ ಚರಿತ್ರೆಯನ್ನು ಕ್ಷೇತ್ರದ ಮತದಾರರು ಬಲ್ಲವರಾಗಿದ್ದಾರೆ. ಅವರು ಯಾವ ರೀತಿಯ ವ್ಯಕ್ತಿ. ಎಷ್ಟು ಪುಣ್ಯದ ಕೆಲಸಗಳನ್ನು ಮಾಡಿದ್ದಾರೆ. ಜನತೆಯ ರಕ್ಷಣೆ ಇವರಿಂದ ಸಾಧ್ಯವೇ ಎಂಬುದರ ಬಗ್ಗೆ ಮತದಾರರಿಗೆ ಅರಿವಿದೆ. ಹಣ ಬಲ ಹಾಗೂ ಅದರಿಂದ ಉಂಟಾಗಿದ್ದ ಪ್ರತಿಕೂಲ ಪರಿಸ್ಥಿತಿಯನ್ನು ಕ್ಷೇತ್ರದ ಜನ ಅನುಭವಿಸಿದ್ದಾರೆ. ಇಂತಹ ವ್ಯಕ್ತಿ ಹೇಗೆ ಗೆಲ್ಲುವುದು ಸಾಧ್ಯ ಎಂದು ಪ್ರಶ್ನಿಸಿದರು.

ಕಳೆದ ಲೋಕಸಭಾ ಚುನಾವಣೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಮಾತ್ರ ಗೆದ್ದಿದ್ದರು. ಈ ಬಾರಿ ಅವರು ಸೋಲಲಿದ್ದಾರೆ. ಜನ ಡಿ.ಕೆ.ಶಿವಕುಮಾರ್ ಅವರ ಅಪಾರ ಸಂಪತ್ತಿನ ಬಗ್ಗೆ ತಿಳಿದಿದ್ದಾರೆ. ಅವರ ತಮ್ಮ ಡಿ.ಕೆ.ಸುರೇಶ್ ಅಣ್ಣನಿಗಿಂತ ಶ್ರೀಮಂತ. ಈ ಬಾರಿ ಅವರ ಆದಾಯ ಕಳೆದ ಬಾರಿಗಿಂತ 532 ಕೋಟಿ ಹೆಚ್ಚಾಗಿದೆ. ದೇಶದ ಯಾವ ರಾಜಕಾರಣಿಯ ಆದಾಯ ಹೀಗೆ ಹೆಚ್ಚಾಗಿದೆ. ಅವರ ಬಳಿ ಅಧಿಕವಾದ ಸಂಪತ್ತಿದೆ. ನಮ್ಮ ಪಕ್ಷದ ಸಚ್ಚಾರಿತ್ಯ ಅಭ್ಯರ್ಥಿ ಡಾ.ಮಂಜುನಾಥ್ ಬಳಿ ಹಣವಿಲ್ಲ. ಅವರಿಗೆ ಜನ ಬೆಂಬಲವಿದೆ. ಡಾ. ಮಂಜುನಾಥ್ ಬಳಿ ಚುನಾವಣೆ ಎದುರಿಸಲು ಹಣವಿಲ್ಲ. ಅವರಿಗಾಗಿ ನಾವು ಜನರಿಂದ ಹಣ ಸಂಗ್ರಹ ಮಾಡುತ್ತಿದ್ದೇವೆ. ಜನ ಮುಗಿಬಿದ್ದು ಧನಸಹಾಯ ಮಾಡುತ್ತಿದ್ದಾರೆ. ಡಿ.ಕೆ.ಸುರೇಶ್ ಈ ಬಾರಿ ಹೀನಾಯ ಸೋಲು ಅನುಭವಿಸಲಿದ್ದಾರೆ. ನಮ್ಮ ನಾಯಕರಾದ ವಿ.ಶ್ರೀನಿವಾಸಪ್ರಸಾದ್ ಬಿಜೆಪಿಯವರಾಗಿದ್ದರು, ಬಿಜೆಪಿಯವರಾಗಿರುತ್ತಾರೆ. ಪಕ್ಷದ ಅಭ್ಯರ್ಥಿಗಳಿಗೆ ಅವರ ಬೆಂಬಲ, ಆಶೀರ್ವಾದವಿದೆ ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಮುಖಂಡರಾದ ಬಿ.ಹರ್ಷವರ್ಧನ್, ಬಿಜೆಪಿ ನಗರಾಧ್ಯಕ್ಷ ಸಿದ್ದರಾಜು, ವಿನಯ್‌ಕುಮಾರ್, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಎನ್.ಸಿ.ಬಸವಣ್ಣ, ಧನರಾಜ್ ಬೂಲಾ, ಉಮೇಶ್, ಯುವ ಮೋರ್ಚಾ ಅಧ್ಯಕ್ಷ ಗೋವರ್ಧನ್ ಇದ್ದರು.

ರಾಜ್ಯದಲ್ಲಿ ಮೋದಿ ಅಲೆ

ನಾನು ಕಳೆದ 60 ದಿನಗಳಿಂದ ರಾಜ್ಯ ಪ್ರವಾಸ ಮಾಡಿದ್ದೇನೆ. ವಿಧಾನಸಭಾ ಚುನಾವಣೆ ಪರಿಸ್ಥಿತಿ ಬೇರೆ. ಈಗಿನ ಪರಿಸ್ಥಿತಿಯೇ ಬೇರೆ. ಜನ ಲೋಕಸಭಾ ಚುನಾವಣೆಯಲ್ಲಿ ಪಕ್ಷವನ್ನು ಗೆಲ್ಲಿಸಿ, ನರೇಂದ್ರ ಮೋದಿ ಅವರನ್ನು ಮತ್ತೊಮ್ಮೆ ಪ್ರಧಾನಿ ಮಾಡುವ ಸಂಕಲ್ಪ ತೊಟ್ಟಿದ್ದಾರೆ ರಾಜ್ಯದಲ್ಲಿ ಅವರ ಜನಪ್ರಿಯತೆ ಹೆಚ್ಚಿದೆ. ಈ ಚುನಾವಣೆಯಲ್ಲಿ ರಾಜ್ಯದ ಬಹುತೇಕ ಕಾಂಗ್ರೆಸ್ ಅಭ್ಯರ್ಥಿಗಳು ಠೇವಣಿ ಕಳೆದುಕೊಳ್ಳಲಿದ್ದಾರೆ ಎಂದರು.

ಸಾಲಬಾಧೆ: ರೈತ ಆತ್ಮಹತ್ಯೆ

ಹುಣಸೂರು, ಏ.8– ಸಾಲಬಾಧೆ ತಾಳಲಾರದೇ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಮುಳೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ರಾಜು(44) ಆತ್ಮಹತ್ಯೆ ಮಾಡಿಕೊಂಡವರು. ಈತ ವ್ಯವಸಾಯಕ್ಕಾಗಿ ಗ್ರಾಮದ ಕೋಟಕ್ ಬ್ಯಾಂಕ್‌ನಲ್ಲಿ 2.8 ಲಕ್ಷ, ಧರ್ಮಸ್ಥಳ ಸಂಘದಲ್ಲಿ 1.5 ಲಕ್ಷ, 5 ಲಕ್ಷ ಕೈಸಾಲ ಸೇರಿದಂತೆ ಒಟ್ಟು 9.30 ಲಕ್ಷ ಸಾಲ ಮಾಡಿದ್ದರು. ಆದರೆ ಬೆಳೆದ ಬೆಳೆ ಕೈ ಸೇರದೆ ಸಾಲ ತೀರಿಸಲು ಸಾಧ್ಯವಾಗದೇ ಮನನೊಂದು ಮನೆಯಲ್ಲೇ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಸಂಬಂಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೀವನ ಸಾರ್ಥಕತೆಗೆ ಶಂಕರರ ತತ್ವಗಳನ್ನು ಅನುಸರಿಸಿ

ಶೃಂಗೇರಿ ಶಾರದ ಪೀಠದ ವಿಧುಶೇಖರ ಭಾರತಿ ಸ್ವಾಮೀಜಿ



ಶ್ರೀವಿಧುಶೇಖರ ಭಾರತಿ ಸ್ವಾಮೀಜಿ ಆಶೀರ್ವಚನ ನೀಡಿದರು.

ಕೆ.ಆರ್.ನಗರ, ಏ.8– ಶಂಕರರ ತತ್ವಗಳನ್ನು ಅನುಸರಿಸುವ ಮೂಲಕ ಜೀವನದಲ್ಲಿ ಸಾರ್ಥಕತೆ ಪಡೆಯಬಹುದು ಎಂದು ಶೃಂಗೇರಿ ಶಾರದ ಪೀಠದ ವಿಧುಶೇಖರ ಭಾರತಿ ಸ್ವಾಮೀಜಿ ತಿಳಿಸಿದರು.

ಪಟ್ಟಣದ ಶ್ರೀಯೋಗಾನಂದೇಶ್ವರ ಸರಸ್ವತಿ ಮಠದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಕ್ತರಿಂದ ಗುರುವಂದನೆ ಸ್ವೀಕರಿಸಿ ಆಶೀರ್ವಚನ ನೀಡಿದ ಅವರು, ಶಂಕರರ ಸ್ತೋತ್ರಗಳನ್ನು ನಿತ್ಯ ಪಠಿಸುವ ಮೂಲಕ ಜೀವನದಲ್ಲಿ ಅಭಿವೃದ್ಧಿ ಹೊಂದಬಹುದಾಗಿದೆ. ಭಾಷ್ಯ, ವೇದ, ಸ್ತೋತ್ರ ಮೊದಲಾದ ವಿವಿಧ ಪ್ರಕಾರಗಳ ಮೂಲಕ ಜನಸಾಮಾನ್ಯರಿಗೆ ಸರಳವಾಗಿ ಅರ್ಥವಾಗುವಂತೆ ಶಂಕರರು ಗ್ರಂಥಗಳನ್ನು ರಚಿಸಿದ್ದಾರೆ. ಹೀಗಾಗಿ ಸ್ತೋತ್ರಗಳನ್ನು ನಿತ್ಯ ಪಠಿಸುವ ಮೂಲಕ ಜೀವನದಲ್ಲಿ ಅಭಿವೃದ್ಧಿ ಹೊಂದಬಹುದಾಗಿದೆ. ಲೌಕಿಕ ಜೀವನ ನಿತ್ಯ ಅಗತ್ಯಗಳನ್ನು ಪೂರೈಸಿದರೆ ಮೋಕ್ಷ ಸಾಧನೆಯಿಂದ ಸಾರ್ಥಕತೆ ಸಾಧಿಸಬಹುದಾಗಿದೆ ಎಂದರು.

ಇದಕ್ಕೂ ಮುನ್ನಾ ನಗರಕ್ಕೆ ಆಗಮಿಸಿದ ವಿಧುಶೇಖರ ಭಾರತಿ ಸ್ವಾಮೀಜಿ ಅವರನ್ನು ಇಲ್ಲಿನ ಯೋಗಾನಂದೇಶ್ವರ ಸರಸ್ವತಿ ಮಠದ ಪೀಠಾಧಿಪತಿ ಶ್ರೀಶಂಕರ ಭಾರತಿ ಸ್ವಾಮೀಜಿ, ಅವರ ಶಿಷ್ಯ ಶ್ರೀಬ್ರಹ್ಮಾನಂದ ಭಾರತಿ ಸ್ವಾಮೀಜಿ ಮತ್ತು ಭಕ್ತವೃಂದ ಇಲ್ಲಿನ ಬ್ರಾಹ್ಮಣ ಮಹಾಸಭಾ ವೃತ್ತದಲ್ಲಿ ಶ್ರದ್ಧಾಭಕ್ತಿಯಿಂದ ಸ್ವಾಗತಿಸಿ ಪೂರ್ಣಕುಂಭ ಹಾಗೂ ಮಂಗಳವಾದ್ಯದೊಂದಿಗೆ ಮೆರವಣಿಗೆಯಲ್ಲಿ ಶ್ರೀಮಠಕ್ಕೆ ಕರೆದೊಯ್ಯಲಾಯಿತು.

ವೇದಘೋಷದೊಂದಿಗೆ ಆರಂಭವಾದ ಸಭಾ ಕಾರ್ಯಕ್ರಮದಲ್ಲಿ ಗುರುವಂದನೆ, ಪುಸ್ತಕ ಬಿಡುಗಡೆ, ಸ್ತೋತ್ರ ಸಮರ್ಪಣೆ, ಗಣ್ಯರು ಮತ್ತು ಸಂಘ ಸಂಸ್ಥೆಗಳಿಂದ ಗುರುಗಳಿಗೆ ಫಲ ಸಮರ್ಪಣೆ, ಮಂತ್ರಾಕ್ಷತೆ ಸೇರಿದಂತೆ ಡಾ.ಮೋಹನ್ ದಾಸ್ ಭಟ್, ಡಾ.ಸೋಮಯಾಜಿ ಮತ್ತು ಸೋಮಶೇಖರ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ರಾಮಸ್ವಾಮಿ, ಮಾಜಿ ಜಿಪಂ ಉಪಾಧ್ಯಕ್ಷ ಎ.ಎಸ್.ಚನ್ನಬಸಪ್ಪ, ಪುರಸಭಾ ಸದಸ್ಯ ಕೆ.ಪಿ.ಪ್ರಭುಶಂಕರ್, ಉದ್ಯಮಿ ವೈ.ಎಸ್.ಕುಮಾರ್, ಕೆ.ಎನ್.ಸೋಮಯಾಜಿ, ಶ್ರೀಮಠದ ಆಡಳಿತಾಧಿಕಾರಿ ನಾಗೇಶ್ ಮತ್ತು ಸಿಬ್ಬಂದಿ ವರ್ಗ, ಭಕ್ತ ಸಮೂಹ ಹಾಜರಿದ್ದರು.

ಬನ್ನಿಕುಪ್ಪೆಯಲ್ಲಿ ಕಡ್ಡಾಯ ಮತದಾನ ಜಾಗೃತಿ



ಬನ್ನಿಕುಪ್ಪೆಯಲ್ಲಿ ಕಡ್ಡಾಯ ಮತದಾನ ಕುರಿತು ಜಾಗೃತಿ ಮೂಡಿಸಲಾಯಿತು.

ಹುಣಸೂರು, ಏ.8– ತಾಲೂಕು ಸ್ವೀಪ್ ಸಮಿತಿ ಹಾಗೂ ಬನ್ನಿಕುಪ್ಪೆ ಗ್ರಾಪಂ ವತಿಯಿಂದ ಗ್ರಾಮದ ಮಾರಿಗುಡಿ ಆವರಣದಲ್ಲಿ ಸಾರ್ವಜನಿಕರಿಗೆ ಕಡ್ಡಾಯ ಮತದಾನದ ಕುರಿತು ಜಾಗೃತಿ ಮೂಡಿಸಲಾಯಿತು.

ತಾಪಂ ಇಓ ಶಿವಕುಮಾರ್ ಮಾತನಾಡಿ, ಮತದಾರರು ಯಾವುದೇ ಆಮಿಷಗಳಿಗೆ ಬಲಿಯಾಗದೇ ಮತದಾನ ಮಾಡಬೇಕು. ಯಾವುದೇ ಅಕ್ರಮ ಕಂಡುಬಂದಲ್ಲಿ ಮಾಹಿತಿ ನೀಡುವಂತೆ ಮನವಿ ಮಾಡಿದರು.

ಪಿಡಿಓ ರಾಘವೇಂದ್ರ ಪ್ರಸನ್ನ ಮಾನವ ಸರಪಳಿ ನಿರ್ಮಿಸಿ ಪ್ರಜಾಪ್ರಭುತ್ವದಲ್ಲಿ ವಿಶ್ವಾಸವುಳ್ಳ ಭಾರತದ ಪೌರರಾದ ನಾವು ನಮ್ಮ ದೇಶದ ಪ್ರಜಾಸತ್ತಾತ್ಮಕ ಸಂಪ್ರದಾಯಗಳು ಮತ್ತು ಮುಕ್ತ, ನ್ಯಾಯಸಮ್ಮತ ಹಾಗೂ ಶಾಂತಿಯುತ ಚುನಾವಣೆಗಳ ಘನತೆ ಎತ್ತಿ ಹಿಡಿಯುತ್ತೇವೆ. ಪ್ರತಿಯೊಂದು ಚುನಾವಣೆಯಲ್ಲೂ ನಿರ್ಭೀತವಾಗಿ ಮತ್ತು ಧರ್ಮ, ಜಾತಿ, ಜನಾಂಗ ಮತ್ತು ಭಾಷೆ ಯಾವುದಕ್ಕೂ ಪ್ರಭಾವಿತರಾಗದೇ ಮತ ಚಲಾಯಿಸುತ್ತೇವೆ ಎಂದು ಸಾರ್ವಜನಿಕರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಬಳಿಕ ಗ್ರಾಮದ ಪ್ರಮುಖ ಬೀದಿಗಳಲ್ಲಿ ಜಾಥಾ ನಡೆಸಿ ಜಾಗೃತಿ ಮೂಡಿಸಲಾಯಿತು. ಈ ವೇಳೆ ಗ್ರಾಪಂ ಸಿಬ್ಬಂದಿ, ಎನ್‌ಆರ್‌ಎಲ್‌ಎಂ ತಾಲೂಕು ಸಂಯೋಜಕಿ ಮಂಜುಳಾ ಸೇರಿದಂತೆ ಇನ್ನಿತರರಿದ್ದರು.

ತಿ.ನರಸೀಪುರ ತಾಲೂಕಿನ ಶ್ರೀಮಂಟೇಸ್ವಾಮಿ ರಾಜ ಬೊಪ್ಪೇಗೌಡನಪುರದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಮಹೇಶ್ ನಿರ್ಮಿಸಿದ್ದ ಬಸವನ ಮೇಲ್ಚಾವಣಿಯನ್ನು ಮಠದ ಶ್ರೀಕಂಠರಾಜ ಅರಸ್ ಉದ್ಘಾಟಿಸಿದರು. ಡಿಸಿಸಿ ಸದಸ್ಯ ಶಿವಕುಮಾರ್, ರಮೇಶ್, ಕೆಂಪರಾಜು, ಪುಟ್ಟಮ್ಮ, ಮಹದೇವಸ್ವಾಮಿ, ಪ್ರಕಾಶ್ ಮತ್ತಿತರರಿದ್ದರು.



ಲಂಚ ಸ್ವೀಕಾರ: ಮೂವರು ಲೋಕಾಯುಕ್ತ ಬಲೆಗೆ





ಹೆಚ್.ಡಿ.ಕೋಟೆ, ಏ.8– ಲಂಚ ಪಡೆಯುವ ವೇಳೆ ಸರಗೂರು ತಾಲೂಕಿನ ಎಂ.ಸಿ.ತೊಳಲು ಪಿಡಿಓ, ಸರ್ವೇಯರ್ ಹಾಗೂ ಕಂಪ್ಯೂಟರ್ ಆಪರೇಟರ್ ಸೋಮವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಎಂ.ಸಿ.ತೊಳಲು ಪಿಡಿಓ ಶಿಲ್ಪಾ, ಸರ್ವೇಯರ್ ಬಾಲಾಜಿ ಹಾಗೂ ಕಂಪ್ಯೂಟರ್ ಆಪರೇಟರ್ ಶಿವಲಿಂಗ ಪ್ರಸಾದ್ ಲೋಕಾಯುಕ್ತ ಬಲೆಗೆ ಬಿದ್ದವರು. ಸರಗೂರು ತಾಲೂಕಿನ ಚನ್ನಗುಂಡಿ ಗ್ರಾಮದ ನಿವಾಸಿ ಲಿಂಗರಾಜು ಅವರ ನಿವೇಶನದ ಇ ಸ್ವತ್ತು ಮಾಡಿಕೊಡಲು ಪಿಡಿಓ ಶಿಲ್ಪಾ ಸೇರಿದಂತೆ ಇತರರು 10 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ ಈ ಸಂಬಂಧ ಲಿಂಗರಾಜು ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಸೋಮವಾರ ಪಂಚಾಯಿತಿಯಲ್ಲಿ ಪಿಡಿಓ ಶಿಲ್ಪಾ 8 ಸಾವಿರ, ಸರ್ವೇಯರ್ ಬಾಲಾಜಿ 2 ಸಾವಿರ ರೂ. ಲಂಚ ಸ್ವೀಕರಿಸುತ್ತಿದ್ದ ವೇಳೆ ಲೋಕಾಯುಕ್ತ ಎಸ್ಪಿ ಸಚಿತ್ ಅವರ ಮಾರ್ಗದರ್ಶನದಲ್ಲಿ ದಾಳಿ ನಡೆಸಿದ ಡಿವೈಎಸ್ಪಿ ಪಿ.ವಿ.ಕೃಷ್ಣಯ್ಯ, ಇನ್ಸ್‌ಪೆಕ್ಟರ್‌ಗಳಾದ ರೂಪಶ್ರೀ, ಜಯರತ್ನ ಹಾಗೂ ಸಿಬ್ಬಂದಿ ಈ ಮೂವರನ್ನು ಹಣದ ಸಮೇತ ವಶಕ್ಕೆ ಪಡೆದು ಹೆಚ್.ಡಿ.ಕೋಟೆ ಕೆಇಬಿ ಕಚೇರಿಯಲ್ಲಿ ವಿಚಾರಣೆಗೊಳಪಡಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಲೋಕಾಯುಕ್ತ ಸಿಬ್ಬಂದಿಗಳಾದ ಉಮೇಶ್, ಗುರುಪ್ರಸಾದ್, ಗೋಪಿ, ನೇತ್ರಾವತಿ, ತ್ರಿವೇಣಿ, ಕಾಂತರಾಜ್, ಪ್ರಕಾಶ್, ಮೋಹನ್ ಗೌಡ, ಶೇಖರ್, ಮೋಹನ್, ಲೋಕೇಶ್ ಇದ್ದರು.



ಹೆಚ್.ಡಿ.ಕೋಟೆ ರೋಟರಿ ಕ್ಲಬ್ ಸಹಕಾರದೊಂದಿಗೆ ಮೈಸೂರು ರೋಟರಿ ಕ್ಲಬ್ ನಿರ್ದೇಶಕ ಎಸ್.ರಾಮಪ್ರಸಾದ್ ಅವರು ಕೋಟೆ ತಾಲೂಕಿನ ಬೆಳಗನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ 19 ಸಾವಿರ ರೂ. ಮೌಲ್ಯದ ಬ್ಯಾಂಡ್‌ಸೆಟ್ ಕೊಡುಗೆ ನೀಡಿದರು. ಈ ವೇಳೆ ಕೋಟೆ ರೋಟರಿ ಕ್ಲಬ್ ಅಧ್ಯಕ್ಷ ಗಂಗಾಧರ್, ಕಾರ್ಯದರ್ಶಿ ಸ್ವಾಮಿ ಮಾಸ್ಟರ್, ಖಜಾಂಚಿ ನಾರಾಯಣ್ ಲಾಲ್, ಮಹೇಶ್, ಶಿವು, ಎಸ್‌ಡಿಎಂಸಿ ಅಧ್ಯಕ್ಷ ಶಿವಲಿಂಗೇಗೌಡ, ಉಪಾಧ್ಯಕ್ಷೆ ಪೂರ್ಣಿಮಾ, ಸದಸ್ಯರಾದ ಸುಮ, ರಾಣಿ, ರೇಖಾ, ಸುಮಿತ್ರ, ನಂಜುಂಡಿ, ಮುಖ್ಯ ಶಿಕ್ಷಕ ಸುರೇಶ್, ಶಿಕ್ಷಕರಾದ ಬಾಲಸುಬ್ರಹ್ಮಣ್ಯ, ಸೌಮ್ಯ ಮಂಜುಳಾ, ಪ್ರಕಾಶ್ ಹಾಗೂ ಗ್ರಾಮಸ್ಥರಿದ್ದರು.

ಇಂದಿನಿಂದ ಶ್ರೀ ಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ

ಸರಗೂರು, ಏ.8– ತಾಲೂಕಿನ ಶಕ್ತಿದೇವತೆ ಶ್ರೀಚಿಕ್ಕದೇವಮ್ಮನವರ ಜಾತ್ರಾ ಮಹೋತ್ಸವ ಚಿಕ್ಕದೇವಮ್ಮನ ಬೆಟ್ಟ, ಹಾಲುಗಡು, ಇಟ್ನ ಗ್ರಾಮದಲ್ಲಿ ಏ.9ರಿಂದ 11ರವರೆಗೆ ವಿಜೃಂಭಣೆಯಿಂದ ನಡೆಯಲಿದೆ.

ಚಂದ್ರಮಾನ ಯುಗಾದಿಯಂದು ಆರಂಭವಾಗುವ ಜಾತ್ರಾ ಮಹೋತ್ಸವಕ್ಕೆ ಸಕಲ ಸಿದ್ಧತೆ ಮಾಡಲಾಗಿದ್ದು, ಏ.9ರಂದು ಬೆಳಗ್ಗೆಯೇ ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಶ್ರೀಚಿಕ್ಕದೇವಮ್ಮನ ಬೆಟ್ಟದಿಂದ ಅಮ್ಮನವರ ಉತ್ಸವ ಮೂರ್ತಿಯನ್ನು ಮೆರವಣಿಗೆಯಲ್ಲಿ ಕಪಿಲಾ ನದಿ ಬಳಿಯ ಹಾಲುಗಡುವಿನ ಜಪದ ಕಟ್ಟೆಯಲ್ಲಿ ಪ್ರತಿಷ್ಠಾಪಿಸಿ ವಿಶೇಷ ಪೂಜೆ ಸಲ್ಲಿಸಲಾಗುವುದು. ಸಂಜೆ 4 ಗಂಟೆಗೆ ಹಾಲುಗಡುನಿಂದ ದೇವತೆಯನ್ನು ಇಟ್ನ ಗ್ರಾಮಕ್ಕೆ ವಾದ್ಯಗೋಷ್ಠಿಗಳೊಂದಿಗೆ ಮೆರವಣಿಗೆಯಲ್ಲಿ ಕರೆದೊಯ್ದು ವಿಶೇಷ ಪೂಜೆ ಸಲ್ಲಿಸಲಾಗುವುದು. ಏ.10ರಂದು ಬೆಳಗ್ಗೆ 8ಗಂಟೆಗೆ ಕಪಿಲಾ ನದಿಯಲ್ಲಿ ಚಿಕ್ಕದೇವಮ್ಮನವರಿಗೆ ತೀರ್ಥೋತ್ಸವ, ಕುಂಕುಮಾರ್ಚನೆ, ಮಹಾಮಂಗಳಾರತಿ ನಡೆಸಿದ ಬಳಿಕ ಸತ್ತಿಗೆಯೊಂದಿಗೆ ವಿವಿಧ ಜಾನಪದಕಲಾ ತಂಡಗಳೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ವಿಶೇಷ ಪೂಜೆ ಸಲ್ಲಿಸಲಾಗುವುದು. ರಾತ್ರಿ 9 ಗಂಟೆಗೆ ಚಿಕ್ಕದೇವಮ್ಮನ ಕಲಾ ಬಳಗದಿಂದ ರಾಜವಿಕ್ರಮ ಅಥವಾ ಶನಿ ಪ್ರಭಾವ ಪೌರಾಣಿಕ ನಾಟಕ ಆಯೋಜಿಸಲಾಗಿದೆ. ಅಲ್ಲದೇ ಭಕ್ತರಿಗೆ ಅನ್ನ ಸಂತರ್ಪಣೆ ಆಯೋಜಿಸಲಾಗಿದೆ.

ಏ.11ರಂದು ಮಧ್ಯಾಹ್ನ 12 ಗಂಟೆಗೆ ಅಮ್ಮನವರ ಉತ್ಸವಮೂರ್ತಿ ಇಟ್ನ ಗ್ರಾಮದಿಂದ ಹೊರಟು ಹಾಲುಗಡುವಿನ ಜಪದ ಕಟ್ಟೆಯಲ್ಲಿ ಎಡೆಪೂಜೆ, ತಳಿಗೆ ಪೂಜೆ ಬಳಿಕ ಮಹಾಮಂಗಳಾರತಿ ನೆರವೇರಿಸಿದ ಬಳಿಕ ಬೆಟ್ಟಕ್ಕೆ ಹೊರಡಲಿದೆ ಎಂದು ದೇವಾಲಯದ ಟ್ರಸ್ಟ್ ತಿಳಿಸಿದೆ.

ನನ್ನ ಗೆಲ್ಲಿಸಿ; ಜನಸೇವೆಗೆ ಅವಕಾಶ ನೀಡಿ

ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮನವಿ



ಹೆಮ್ಮಿಗೆಯಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮಾತನಾಡಿದರು.

ತಿ.ನರಸೀಪುರ, ಏ.8– ಕಳೆದ 40 ವರ್ಷಗಳಿಂದ ನನ್ನ ತಂದೆಯವರಿಗೆ ರಾಜಕೀಯ ಅಧಿಕಾರ ಕೊಟ್ಟಿರುವ ಕ್ಷೇತ್ರದ ಜನತೆ ಲೋಕಸಭಾ ಚುನಾವಣೆಗೆ ಸ್ಪರ್ಧಿಸಿರುವ ನನಗೂ ಆಶೀರ್ವಾದ ಮಾಡುವ ಮೂಲಕ ಜನಸೇವೆ ಮಾಡಲು ಅವಕಾಶ ಮಾಡಿಕೊಡಬೇಕು ಎಂದು ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಮನವಿ ಮಾಡಿದರು.

ತಾಲೂಕಿನ ಟಿ.ದೊಡ್ಡಪುರ, ಹೆಮ್ಮಿಗೆ ಹಾಗೂ ತಲಕಾಡು ಗ್ರಾಪಂ ವ್ಯಾಪ್ತಿಯಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ತಿ.ನರಸೀಪುರ ಕ್ಷೇತ್ರದ ಜನತೆ ನನ್ನ ತಂದೆ ಡಾ.ಹೆಚ್.ಸಿ. ಮಹದೇವಪ್ಪನವರಿಗೆ ಆಶೀರ್ವಾದ ಮಾಡಿ 2 ಬಾರಿ ಸಚಿವರಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಟ್ಟಿದ್ದು, ಇದೀಗ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿರುವ ನನಗೂ ಒಂದು ಅವಕಾಶ ನೀಡುವ ಮೂಲಕ ಮತ್ತಷ್ಟು ಜನಸೇವೆ ಮಾಡಲು ಅವಕಾಶ ನೀಡುವಂತೆ ಮನವಿ ಮಾಡಿದರು.

ಕಳೆದ 3 ವಿಧಾನಸಭಾ ಚುನಾವಣೆಯಲ್ಲಿ ನಾನು ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದೆ. ಆದರೆ ಕಾರಣಾಂತರಗಳಿಂದ ಹೈಕಮಾಂಡ್ ಟಿಕೆಟ್ ನೀಡಿರಲಿಲ್ಲ. ಆದರೆ ಈ ಬಾರಿ ಲೋಕಸಭೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಟ್ಟಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನನ್ನ ಮೇಲೆ ನಂಬಿಕೆ ಇಟ್ಟು ಬಹುದೊಡ್ಡ ಜವಾಬ್ದಾರಿ ಹೊರಿಸಿದ್ದಾರೆ. ಅವರ ನಂಬಿಕೆ ಉಳಿಸಿಕೊಳ್ಳಲು ಕ್ಷೇತ್ರದ ಜನರು ಸಹಕಾರ ನೀಡಬೇಕಿದೆ. ನನಗೆ ರಾಜಕೀಯ ಅಧಿಕಾರ ಇಲ್ಲದ ವೇಳೆಯೂ ನನ್ನ ಮೇಲೆ ಪ್ರೀತಿ ವಿಶ್ವಾಸ ತೋರಿ ಮನೆ ಮಗನಂತೆ ನೋಡಿಕೊಂಡಿದ್ದೀರಿ. ನಮ್ಮ ತಂದೆಗೆ ಚುನಾವಣೆಯಲ್ಲಿ 13 ಸಾವಿರ ಲೀಡ್ ಕೊಟ್ಟು ಗೆಲ್ಲಿಸಿ ಮಂತ್ರಿ ಮಾಡಿರುವ ನೀವು ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಹೆಚ್ಚಿನ ಮತಗಳನ್ನು ನೀಡಿ ಜಯ ತಂದುಕೊಡಬೇಕು. ಆ ಮೂಲಕ ಕ್ಷೇತ್ರದಲ್ಲಿ ಮತ್ತಷ್ಟು ಅಭಿವೃದ್ಧಿ ಕೆಲಸಗಳಾಗಲು ನೀವೆಲ್ಲರೂ ಮುನ್ನುಡಿಯಾಗಬೇಕು ಎಂದರು.

ಗ್ಯಾರಂಟಿ ಯೋಜನೆಗಳ ಮುಂದಿಟ್ಟು ಮತ ಕೇಳಿ: ಕಾಂಗ್ರೆಸ್ ಚುನಾವಣಾ ಪೂರ್ವ ನೀಡಿದ್ದ ಭರವಸೆಯಂತೆ ಎಲ್ಲಾ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿದ್ದು, ಸಿಎಂ ಸಿದ್ದರಾಮಯ್ಯ ನುಡಿದಂತೆ ನಡೆದಿದ್ದಾರೆ. ಸಮಯ ಕಡಿಮೆ ಇರುವುದರಿಂದ ಎಲ್ಲಾ ಗ್ರಾಮಗಳಿಗೂ ಆಗಮಿಸಿ ಮತ ಕೇಳಲು ಸಾಧ್ಯವಾಗುವುದಿಲ್ಲ. ಹೀಗಾಗಿ ಪಕ್ಷದ ಕಾರ್ಯಕರ್ತರು ಪಕ್ಷದ ಗ್ಯಾರಂಟಿಗಳನ್ನು ಮತದಾರರಿಗೆ ತಿಳಿಸುವ ಮೂಲಕ ಮತ ಸೆಳೆಯಲು ಮುಂದಾಗಬೇಕು. ಕಾರ್ಯಕರ್ತರು ಮೈ ಮರೆಯದೇ ನೀವೇ ಅಭ್ಯರ್ಥಿ ಎಂದು ಮತಯಾಚನೆ ಮಾಡಿ ಎಂದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ನಿಕಟಪೂರ್ವ ಅಧ್ಯಕ್ಷ ಟಿ.ಎಚ್.ಮಂಜುನಾಥ್, ಹೆಮ್ಮಿಗೆ ಡೈರಿ ಅಧ್ಯಕ್ಷ ಶೇಷಾದ್ರಿ, ಕಾರ್ಯದರ್ಶಿ ಸೋಮಣ್ಣ, ದೊಡ್ಡಹುಂಡಿ ನಂಜುಂಡಸ್ವಾಮಿ, ಜಾಲಹಳ್ಳಿ ಸುರೇಶ್, ತೊಟ್ಟವಾಡಿ ಚಂದ್ರು, ಕುಕ್ಕೂರು ಗಣೇಶ್, ಹಿರಿಯೂರು ನವೀನ್, ಮಲ್ಲಿಕಾರ್ಜುನ, ತಲಕಾಡು ಸುಂದರನಾಯಕ, ದೊಡ್ಡಪುರ ಚಂದ್ರು, ಲಕ್ಷ್ಮೀನಾರಾಯಣ, ಆಪ್ತ ಸಹಾಯಕ ಬಸವರಾಜು, ಅಕ್ಕೂರು ಗುರುಮೂರ್ತಿ, ಸೋಸಲೆ ಪರಶಿಮೂರ್ತಿ, ನಿಲಸೋಗೆ ಮಹದೇವ ಪ್ರಸಾದ್, ಕಟ್ಟೇಪುರ ಮಹದೇವ ಸ್ವಾಮಿ, ಸಿ.ಬಿ.ಹುಂಡಿ ನಂಜುಂಡಸ್ವಾಮಿ, ಯಜಮಾನ್ ಚಿನ್ನಸ್ವಾಮಿ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
---	---
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಯುವ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಫ್ಯಾಮಿಲಿ ಸ್ಟಾರ್ (ತೆ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು
ಪ್ರಭಾ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಬೆ.8ಕ್ಕೆ, ಮ.3.50ಕ್ಕೆ, ಕುಂಗ್ ಫು ಪಾಂಡ 4 (3ಡಿ) (ಇಂ): ಬೆ.11.20ಕ್ಕೆ, ಕ್ರೂವ್ (ಹಿಂ): ಮ.1.20ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ರಾ.7.10ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ದಿ ಫಸ್ಟ್ ಓಮನ್ (ಇಂ): ಬೆ.10.50ಕ್ಕೆ, ರಾ.10.05ಕ್ಕೆ, ಅವತಾರ ಪುರುಷ 2 (ಕ): ಮ.1.35ಕ್ಕೆ, ಸಂ.4.15ಕ್ಕೆ, ಆಡುಜೀವಿತಂ (ಮ): ಸಂ.6.50ಕ್ಕೆ.
ಸ್ಕ್ರೀನ್ 3	ಮ್ಯಾಟ್ನಿ (ಕ): ಬೆ.10.35ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.15ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಸಂ.4ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ರಾ.9.55ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಮ.1.35ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಅವತಾರ ಪುರುಷ 2 (ಕ): ಬೆ.9.35ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಮ.12.15ಕ್ಕೆ, ಮ.3.40ಕ್ಕೆ, ರಾ.7.05ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಯುವ (ಕ): ಬೆ.9.30ಕ್ಕೆ ಮ.12.45ಕ್ಕೆ, ಸಂ.6.45ಕ್ಕೆ ರಾ.10ಕ್ಕೆ, ಕ್ರೂವ್ (ಹಿಂ): ಸಂ.4ಕ್ಕೆ.
ಸ್ಕ್ರೀನ್ 3	ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.55ಕ್ಕೆ, ಮಾರಿಗೋಲ್ಡ್ (ಕ): ಮ.1.20ಕ್ಕೆ, ಆಡುಜೀವಿತಂ (ಮ): ಸಂ.4.05ಕ್ಕೆ, ಅವತಾರ ಪುರುಷ 2 (ಕ): ರಾ.7.40ಕ್ಕೆ, ಮ್ಯಾಟ್ನಿ (ಕ): ರಾ.10.20ಕ್ಕೆ.
ಸ್ಕ್ರೀನ್ 4	ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಬೆ.10.40ಕ್ಕೆ, ಸಂ.4.40ಕ್ಕೆ, ದಿ ಫಸ್ಟ್ ಓಮನ್ (ಇಂ): ಮ.1.15ಕ್ಕೆ, ರಾ.7.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519


ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಆರ್ಟಿಕಲ್ 370 (ಹಿಂ): ಬೆ.9ಕ್ಕೆ, ಮ.12.20ಕ್ಕೆ, ಮ.3.40ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಡ್ಯೂನ್ ಪಾರ್ಟ್ 2 (ಇಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ಡೆಮೋನ್ ಸ್ಲೇಯರ್ (ಜ): ಸಂ.4.30ಕ್ಕೆ, ಆಪರೇಷನ್ ವ್ಯಾಲೆಂಟೈನ್ (ತೆ & ಹಿಂ): ಬೆ.9.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಲಾಪತಾ ಲೇಡಿಸ್ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ರಾ.9.45ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಬೆ.10.20ಕ್ಕೆ, ಮ.1.25ಕ್ಕೆ, ರಾ.7.25ಕ್ಕೆ, ತೇರಿ ಬತೂನ್ ಮೇ ಐಸಾ ಉಲ್ಜಾ ಜಿಯಾ (ಹಿಂ): ಬೆ.11.55ಕ್ಕೆ, ಕ್ರೀಂ (ಹಿಂ): ಸಂ.6.55ಕ್ಕೆ, ಪ್ರೇಮಲು (ಮ): ರಾ.10.20ಕ್ಕೆ, ಜೋಶುವಾ (ತ): ಮ.1.20ಕ್ಕೆ, ಸಂ.6.55ಕ್ಕೆ, ಭ್ರಮಯುಗಂ (ಮ): ರಾ.9.45ಕ್ಕೆ, ವಾರನಂ ಆಯಿರಂ (ತ): ಮ.3.40ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಯುಗಾದಿಯಂದು ರೋಬೋ ಆನೆ 'ಶಿವ' ಸಮರ್ಪಣೆ



ನಂಜನಗೂಡು, ಏ.8– ತಾಲೂಕಿನ ಸುತ್ತೂರು ಶ್ರೀಕ್ಷೇತ್ರದಲ್ಲಿ ಏ.9ರಂದು ಯುಗಾದಿ ಹಬ್ಬ ಹಾಗೂ ಅಲ್ಲಮಪ್ರಭು ಜಯಂತಿ ಶುಭ ಸಂದರ್ಭದಲ್ಲಿ ರೋಬೋ ಆನೆ 'ಶಿವ' ಸಮರ್ಪಣೆ ಕಾರ್ಯಕ್ರಮ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಮ್ಮುಖದಲ್ಲಿ ನಡೆಯಲಿದೆ ಎಂದು ಶ್ರೀಮಠದ ಪ್ರಕಟಣೆ ತಿಳಿಸಿದೆ.

ರೋಬೋ ಆನೆ 'ಶಿವ' ಸಮರ್ಪಣೆ ಕಾರ್ಯಕ್ರಮಕ್ಕೆ ನಟಿ ಐಂದ್ರಿತಾ ರೈ ಹಾಗೂ ನಟ ದಿಗಂತ್ ದಂಪತಿ ಆಗಮಿಸಲಿದ್ದಾರೆ. ಇವರು ಪೇಟಾ ಸಂಸ್ಥೆಯ ಮೂಲಕ ಶ್ರೀಮಠಕ್ಕೆ ಆನೆಯನ್ನು ಕೊಡುಗೆ ನೀಡುತ್ತಿದ್ದಾರೆ. ಪ್ರಾಣಿಗಳ ಹಿತ ಕಾಪಾಡಲು ಶ್ರಮಿಸುತ್ತಿರುವ ಪೇಟಾ ಸಂಸ್ಥೆ ಸಾರ್ವಜನಿಕ ಸಂಪರ್ಕ ವಿಭಾಗದ ಉಪಾಧ್ಯಕ್ಷ ಸಚಿನ್ ಹಾಗೂ ಪದಾಧಿಕಾರಿಗಳು, ಸ್ವಯಂ ಸೇವಕರು ಆಗಮಿಸಲಿದ್ದಾರೆ. ರೋಬೋ ಆನೆಯನ್ನು ಅಲಂಕರಿಸಿ ಶ್ರೀಮಠದ ಉತ್ಸವಗಳಿಗೆ ಬಳಸಲಾಗುತ್ತದೆ. ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಪ್ರಕಟಣೆ ತಿಳಿಸಿದೆ

ಯುವ ಮೋರ್ಚಾ ಉಪಾಧ್ಯಕ್ಷರಾಗಿ ನೇಮಕ



ತಿ.ನರಸೀಪುರ. ಏ.8– ಬಿಜೆಪಿ ಜಿಲ್ಲಾ ಗ್ರಾಮಾಂತರ ಯುವ ಮೋರ್ಚಾ ಉಪಾಧ್ಯಕ್ಷರಾಗಿ ತಲಕಾಡು ಪವನ್ ಕುಮಾರ್ ಅವರನ್ನು ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಆದೇಶದ ಮೇರೆಗೆ ಮೈಸೂರು ಗ್ರಾಮಾಂತರ ಯುವ ಮೋರ್ಚಾ ಅಧ್ಯಕ್ಷ ಸಾಮ್ರಾಟ್ ಸುಂದರೇಶನ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ್ ಮಡವಾಡಿ ಉಪಸ್ಥಿತಿಯಲ್ಲಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.


ಈ ಯುಗಾದಿಯು ನಿಮಗೆ
ಉಲ್ಲಾಸವನ್ನು ನೀಡಲಿ. ನಿಮ್ಮ
ಹೃದಯವನ್ನು ಉತ್ತಮ ಆರೋಗ್ಯ,
ಸಂಪತ್ತು ಮತ್ತು ಸಂತೋಷದಿಂದ
ಸಮೃದ್ಧಗೊಳಿಸಲಿ.
ನಾಡಿನ ಸಮಸ್ತ ಜನತೆಗೆ
ಯುಗಾದಿ
ಹಬ್ಬದ ಹಾರ್ದಿಕ ಶುಭಾಶಯಗಳು
ಶ್ರೀ ಕೆ.ಮರೀಗೌಡ, ಅಧ್ಯಕ್ಷರು,
ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು